ಸಂಪುಟ : 13 Volume | ಸಂಚಿಕೆ : 277 Issue | ಪುಟಗಳು : 08 Pages | ಭಾನುವಾರ 21 ಡಿಸೆಂಬರ್ 2025 | ₹6 | PRGINO. 120927(RNINO:KARKAN/2011/48371) | BDR/054/2026-2027 | www.mallammanudi.in | mallammanudi@gmail.com | 9448604450

ಬೀದರ | ಕಲ್ಬುರ್ಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯನಗರ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

# ಮಲ್ಲಮ್ಮ ನುಡಿ

ಕನ್ನಡ ಕಿರಣ

Mallammanudi Regional News Paper
ಪ್ರಾದೇಶಿಕ ಕನ್ನಡ ದೈನಿಕ

ಸಂಪಾದಕರು: ರಮೇಶ ರೆಡ್ಡಿ

**ಬೆಳಗು**

ಓದು, ಓದು, ಓದು ಯಾಕೆಂದರೆ ಶತ್ರುಗಳು ನಿನ್ನ ಜ್ಞಾನಕ್ಕೆ ಮಾತ್ರ ಹೆದರುತ್ತಾರೆ.
ಡಾ. ಬಿ.ಆರ್. ಅಂಬೇಡ್ಕರ್.

2 ಅಧ್ಯಕ್ಷ ಡಾ.ಮಾನಸ' ಬೀದರ ಜಿಲ್ಲಾ ಪ್ರವಾಸ
3 ಬೆಂಬಲ ಬೆಲೆ ಯೋಜನೆಯಡಿ ತೊಗರಿ
4 ಮಕ್ಕಳು ಆತ್ಮವಿಶ್ವಾಸದೊಂದಿಗೆ ಅಧ್ಯಯನ
8 ಧಾರ್ಮಿಕ, ಶೈಕ್ಷಣಿಕ, ಸಾಮಾಜಿಕ

# ವಿರೋಧಿ ವಿರುದ್ಧ ವಾಕ್ಸಮರ

## ಉತ್ತರ ಕರ್ನಾಟಕ ಪ್ರಗತಿಗೆ ಬದ್ಧ : ಸಿಎಂ| ಅಧಿವೇಶನದ ಕೊನೆಯ ದಿನ ಸಿದ್ದರಾಮಯ್ಯ ಬಿಜೆಪಿಗೆ ಟಾಂಗ್

ಮಲ್ಲಮ್ಮ ನುಡಿ ವಾರ್ತೆ, ಬೆಳಗಾವಿ

ಡಾ.ನಂಜುಂಡಪ್ಪವರದಿಯ ಅನುಷ್ಠಾನವನ್ನು ಅಧ್ಯಯನ ಮಾಡುತ್ತಿರುವ ಪ್ರೊ. ಗೋವಿಂದರಾವ್ ಸಮಿತಿಯ ಶಿಫಾರಸುಗಳ ಆಧಾರದ ಮೇಲೆ ಉತ್ತರ ಕರ್ನಾಟಕ ಮತ್ತು ದಕ್ಷಿಣ ಕರ್ನಾಟಕದ ನಡುವಿನ ದೀರ್ಘಕಾಲದ ಅಭಿವೃದ್ಧಿ ಅಸಮಾನತೆಯನ್ನು ಪರಿಹರಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

ಯಾವುದೇ ನೈತಿಕ ಹಕ್ಕಿಲ್ಲ: ಬೆಳಗಾವಿಯಲ್ಲಿ ನಡೆದ ವಿಧಾನಮಂಡಲದ ಚಳಿಗಾಲದ ಅಧಿವೇಶನದ ಕೊನೆಯ ದಿನ ಉತ್ತರ ಕರ್ನಾಟಕದ ಅಭಿವೃದ್ಧಿಯ ಕುರಿತಾದ ಚರ್ಚೆಗೆ ಉತ್ತರಿಸಿದ ಸಿಎಂ, ಬಿಜೆಪಿ ನೇತೃತ್ವದ ವಿರೋಧ ಪಕ್ಷದ ಮೇಲೆ ತೀವ್ರ ವಾಗ್ದಾಳಿ ನಡೆಸಿದರು. ಈ ಪ್ರದೇಶದ ನಿರ್ಲಕ್ಷ್ಯದ ಬಗ್ಗೆ ಮಾತನಾಡಲು ಅವರಿಗೆ ಯಾವುದೇ ನೈತಿಕ ಹಕ್ಕಿಲ್ಲ ಎಂದು ಪ್ರತಿಪಾದಿಸಿದ್ದಾರೆ.

ಗ್ಯಾರಂಟಿ ಯೋಜನೆಗಳು: ರಾಜ್ಯ ಸರ್ಕಾರವು ಐದು ಖಾತರಿ ಯೋಜನೆಗಳಿಗೆ ಇದುವರೆಗೆ 1,06,066 ಕೋಟಿ ರೂ.ಗಳನ್ನು ಖರ್ಚು ಮಾಡಿದೆ ಎಂದು ಮುಖ್ಯಮಂತ್ರಿ ಹೇಳಿದರು, ಅದರಲ್ಲಿ 46,277 ಕೋಟಿ ರೂ.ಗಳನ್ನು ಉತ್ತರ ಕರ್ನಾಟಕದಲ್ಲಿ ಖರ್ಚು ಮಾಡಲಾಗಿದೆ. ರಾಜ್ಯದ ಜನಸಂಖ್ಯೆಯ 58% ದಕ್ಷಿಣ ಕರ್ನಾಟಕದಲ್ಲಿ ಮತ್ತು 42% ಉತ್ತರ ಕರ್ನಾಟಕದಲ್ಲಿ ವಾಸಿಸುತ್ತಿದ್ದರೆ, ಒಟ್ಟು ಖಾತರಿ ವೆಚ್ಚದ 43.63% ರಷ್ಟು ಉತ್ತರ ಕರ್ನಾಟಕ ಭಾಗಕ್ಕೆ ಹೋಗಿದೆ ಎಂದು ಹೇಳಿದ್ದಾರೆ.



### 371(ಜೆ) ವಿಧಿಯನ್ನು ತಿರಸ್ಕರಿಸಿದ್ದು ಬಿಜೆಪಿ

ಹೈದರಾಬಾದ್-ಕರ್ನಾಟಕ ಪ್ರದೇಶದ ಅಭಿವೃದ್ಧಿಗಾಗಿ 371(ಜೆ) ವಿಧಿಯನ್ನು ತಿರಸ್ಕರಿಸಿದ್ದು ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಎಂದು ನೆನಪಿಸಿಕೊಂಡ ಮುಖ್ಯಮಂತ್ರಿಗಳು, ಅಂದಿನ ಪ್ರಧಾನಿ ಡಾ. ಮನಮೋಹನ್ ಸಿಂಗ್ ನೇತೃತ್ವದ ಯುಪಿಎ ಸರ್ಕಾರವು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ನಿರಂತರ ಪ್ರಯತ್ನಗಳ ನಂತರ ಅದನ್ನು ಅನುಮೋದಿಸಲಾಯಿತು ಎಂದಿದ್ದಾರೆ ಸಿಎ.

### ರೈತರ ಸಂಕಷ್ಟಕ್ಕೆ ಕೇಂದ್ರ ಸರ್ಕಾರವೇ ಹೊಣೆ

ಕಬ್ಬಿನ ಬೆಲೆ ನಿಗದಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಎತ್ತಿ ತೋರಿಸಿದ ಸಿಎಂ ಸಿದ್ದರಾಮಯ್ಯ, ಕರ್ನಾಟಕವು ದೇಶದಲ್ಲಿ ಎರಡನೇ ಅತಿದೊಡ್ಡ ಕಬ್ಬು ಉತ್ಪಾದಿಸುವ ರಾಜ್ಯವಾಗಿದ್ದು, ವಾರ್ಷಿಕವಾಗಿ ಸುಮಾರು 6.7 ಕೋಟಿ ಟನ್ ಕಬ್ಬು ಮತ್ತು 57.77 ಲಕ್ಷ ಮೆಟ್ರಿಕ್ ಟನ್ ಸಕ್ಕರೆ ಉತ್ಪಾದಿಸುತ್ತದೆ ಎಂದು ಹೇಳಿದರು. ಕಬ್ಬು, ಎಥೆನಾಲ್ ಕೋಟಾ ಮತ್ತು ಎಂಎಸ್ಪಿಗಳಿಗೆ ಕೇಂದ್ರವು ನ್ಯಾಯಯುತ ಮತ್ತು ಲಾಭದಾಯಕ ಬೆಲೆಯನ್ನು ನಿಗದಿಪಡಿಸುತ್ತದೆ ಎಂದು ಸಿಎಂ ತಿಳಿಸಿದ್ದಾರೆ.

### 13,000 ಕೋಟಿ ರೂಪಾಯಿ ತಡೆಹಿಡಿ ಕೇಂದ್ರ

ಕೇಂದ್ರದ ನೀತಿಗಳಿಂದಾಗಿ ಕರ್ನಾಟಕದ ರೈತರು ಸಂಕಷ್ಟದಲ್ಲಿದ್ದಾರೆ ಎಂದು ಆರೋಪಿಸಿದ ಸಿಎಂ, ರಾಜ್ಯ ಸರ್ಕಾರವು ಪ್ರತಿ ಟನ್ಗೆ 50 ರೂಪಾಯಿ, ಹೆಚ್ಚುವರಿಯಾಗಿ ಪ್ರೋತ್ಸಾಹ ಧನವನ್ನು ನೀಡುವಂತೆ ಒತ್ತಾಯಿಸುತ್ತಿದೆ. ಇದು 300 ಕೋಟಿ ರೂ.ಗಳಷ್ಟಿದೆ. ಇದು ರಾಜ್ಯ ಖಜಾನೆಯ ಮೇಲೆ ಹೆಚ್ಚುವರಿ ಹೊರೆಯನ್ನು ಹಾಕುತ್ತಿದೆ. ಜಲ ಜೀವನ್ ಮಿಷನ್ ಅಡಿಯಲ್ಲಿ ಕೇಂದ್ರವು 13,000 ಕೋಟಿ ರೂಪಾಯಿ ತಡೆಹಿಡಿದಿದೆ ಎಂದು ಆರೋಪಿಸಿದ್ದಾರೆ.

ಕೇಂದ್ರವು ಕೊಯ್ಲು ಮತ್ತು ಸಾಗಣೆ ಸೇರಿದಂತೆ ಪ್ರತಿ ಟನ್ಗೆ 3,550 ರೂಪಾಯಿ ಎಫ್ಆರ್ಪಿಯನ್ನು ನಿಗದಿಪಡಿಸಿದೆ. ಆದರೂ ಬಿಜೆಪಿ ನಾಯಕರು ಪ್ರತಿಭಟನೆ ಮಾಡುತ್ತಿದ್ದು, ರೈತರನ್ನು ದಾರಿ ತಪ್ಪಿಸುತ್ತಿದ್ದಾರೆ. ರಾಜ್ಯ ಬಿಜೆಪಿ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ರೈತರ ಬಗ್ಗೆ ನಿಜವಾಗಿಯೂ ಕಾಳಜಿ ಹೊಂದಿದ್ದರೆ ದೆಹಲಿಯಲ್ಲಿ ಪ್ರತಿಭಟಿಸಬೇಕು
ಸಿದ್ದರಾಮಯ್ಯ, ಮುಖ್ಯಮಂತ್ರಿ.

### ಜಿಎಸ್ಟಿ ಪಾಲು, ನೀರಾವರಿ ಯೋಜನೆ ಸ್ಥಗಿತ

ಕರ್ನಾಟಕವು ಕೇಂದ್ರಕ್ಕೆ ಜಿಎಸ್ಟಿಯಲ್ಲಿ 4.5 ಲಕ್ಷ ಕೋಟಿ ರೂ.ಗಳನ್ನು ನೀಡಿದೆ. ಆದರೆ ಪ್ರತಿಯಾಗಿ ಪ್ರತಿ ರೂಪಾಯಿಗೆ 15 ಪೈಸೆ ಮಾತ್ರ ಕರ್ನಾಟಕಕ್ಕೆ ಕೇಂದ್ರದಿಂದ ಸಿಗುತ್ತಿದೆ. ಮಹದಾಯಿ ಯೋಜನೆಗೆ ಪರಿಸರ ಅನುಮತಿ, ಕೃಷ್ಣಾ ಮೇಲಿನ ಯೋಜನೆ –3 ಗಾಗಿ ಭೂಸ್ವಾಧೀನಕ್ಕಾಗಿ ಗೆಜೆಟ್ ಅಧಿಸೂಚನೆ ಮತ್ತು ಕೇಂದ್ರ ಜಲ ಆಯೋಗ ಮತ್ತು ನೀರು ನಿರ್ವಹಣಾ ಅಧಿಕಾರಿಗಳಿಂದ ಮೇಕೆದಾಟು ಯೋಜನೆಗೆ ಅನುಮೋದನೆಗಳನ್ನು ನೀಡುವಲ್ಲಿ ಕೇಂದ್ರವು ವಿಳಂಬ ಮಾಡುತ್ತಿದೆ ಎಂದೂರಿದ್ದಾರೆ.

## ಐಸಿಎಸಿಇಎಎ –2025 ಅಂತರರಾಷ್ಟ್ರೀಯ ಸಮ್ಮೇಳನಕ್ಕೆ ಬೆಂಗಳೂರಿನಲ್ಲಿ ಚಾಲನೆ




ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು: 2025: ಜೈನ್ (ಡೀಮ್ಡ್–ಟು– ಬಿ– ಯೂನಿವರ್ಸಿಟಿ) ಯ ಏರೋಸ್ಪೇಸ್ ಎಂಜಿನಿಯರಿಂಗ್ ಆಯೋಜಿಸಿರುವ "ಇಂಟರ್‌ನ್ಯಾಷನಲ್ ಕಾನ್ಫರೆನ್ಸ್ ಆನ್ ಅಡ್ವಾನ್ಸಸ್ ಇನ್ ಕಂಪ್ಯೂಟೇಷನಲ್ ಅಂಡ್ ಎಕ್ಸ್‌ಪೆರಿಮೆಂಟಲ್ ಅಪ್ರೋಚಸ್ ಇನ್ ಏರೋಸ್ಟ್ರಕ್ಚರ್ಸ್ ಅಂತರರಾಷ್ಟ್ರೀಯ ಸಮ್ಮೇಳನಕ್ಕೆ ಇಂದು ಶೇಷಾದ್ರಿ ರಸ್ತೆ ಕ್ಯಾಂಪಸ್‌ನಲ್ಲಿ ಅಧಿಕೃತವಾಗಿ ಚಾಲನೆ ದೊರೆಯಿತು. ಮೂರು ದಿನಗಳ ಈ ಪ್ರತಿಷ್ಠಿತ ಸಮ್ಮೇಳನದಲ್ಲಿ ಜಗತ್ತಿನ ನಾನಾ ದೇಶಗಳಿಂದ ಬಂದಿರುವ ವಿಜ್ಞಾನಿಗಳು, ಸಂಶೋಧಕರು ಮತ್ತು ಕೈಗಾರಿಕಾ ತಜ್ಞರು ಭಾಗವಹಿಸಿದ್ದು, ವಾಯುಯಾನ ರಚನಾ ವಿನ್ಯಾಸದಿಂದ ಹಿಡಿದು ಅತ್ಯಾಧುನಿಕ ಕೃತಕ ಬುದ್ಧಿಮತ್ತೆ (AI) ಆಧಾರಿತ ವ್ಯವಸ್ಥೆಗಳವರೆಗೆ ಇರುವ ವಿಮಾನೋದ್ಯಮ ತಂತ್ರಜ್ಞಾನಗಳ ಭವಿಷ್ಯದ ದಿಕ್ಕುಗಳನ್ನು ಚರ್ಚಿಸಲಿದ್ದಾರೆ.

## ವಿದ್ಯಾರ್ಥಿಗಳಿಗೆ ಆರ್ಥಿಕ ನೆರವು



ಮಲ್ಲಮ್ಮ ನುಡಿ ವಾರ್ತೆ ವಿಜಯಪುರ: ಇಬ್ಬರು ಬಡ ಮತ್ತು ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಆರ್ಥಿಕ ನೆರವು ನೀಡುವ ಮೂಲಕ ಕೈಗಾರಿಕೆ, ಮೂಲಸೌಲಭ್ಯ ಅಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಂ. ಬಿ. ಪಾಟೀಲ ಅವರು ವಿದ್ಯಾರ್ಥಿಗಳು ವೈದ್ಯರಾಗುವ ಕನಸು ನನಸಾಗಲು ಸಹಾಯ ಹಸ್ತ ಚಾಚಿದ್ದಾರೆ.ನೀಟ್ ಪಾಸಾಗಿ ಸರಕಾರಿ ಕೋಟಾದಡಿ ಎಂ.ಬಿ.ಬಿ.ಎಸ್. ಸೀಟು ಪಡೆದರೂ ಆರ್ಥಿಕ ಸಮಸ್ಯೆಯಿಂದಾಗಿ ಇಬ್ಬರು ವಿದ್ಯಾರ್ಥಿಗಳು ಸಂಕಷ್ಟದಲ್ಲಿದ್ದರು. ಈ ಮಾಹಿತಿ ತಿಳಿದ ಸಚಿವರು ಬಿ.ಎಲ್.ಡಿ.ಇ ಸಂಸ್ಥೆಯ ವತಿಯಿಂದ ಇಬ್ಬರೂ ವಿದ್ಯಾರ್ಥಿಗಳಿಗೆ ಕೋರ್ಸಿಗೆ ಅಗತ್ಯವಾಗಿರುವ ಕಾಲೇಜು ಪ್ರವೇಶ ಶುಲ್ಕ, ಊಟ ಹಾಗೂ ವಸತಿ ಬೇಕಾಗುವ ಒಟ್ಟು ಮೊತ್ತವನ್ನು ನೀಡಿದ್ದಾರೆ.ಇಂದು ಶನಿವಾರ ಬೆಳಿಗ್ಗೆ ಸಚಿವ ಎಂ. ಬಿ. ಪಾಟೀಲ ಅವರು ನಗರದಲ್ಲಿರುವ ತಮ್ಮ ಗೃಹ ಕಚೇರಿಯಲ್ಲಿ ಸಾರಿಗೆ ಮತ್ತು ಮುಜರಾಯಿ ಸಚಿವ ರಾಮಲಿಂಗಾ ರೆಡ್ಡಿ ಜೊತೆ ಸೇರಿ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಆರ್ಥಿಕ ನೆರವಿನ ಚೆಕ್ ವಿತರಿಸಿದರು. ತಿಕೋಟಾ ತಾಲೂಕಿನ ಅರಕೇರಿ ಎಲ್. ಟಿ–1ರ ವಿದ್ಯಾರ್ಥಿನಿ ದಿವ್ಯಾ ಹನಮಂತ ರಾಠೋಡ ನೀಟ್ ನಲ್ಲಿ 223424 ಯಾರ್ಂಕ್ ಪಡೆದಿದ್ದು, ಬೆಂಗಳೂರಿನ ದಯಾನಂದ ಸಾಗರ ಮೆಡಿಕಲ್ ಕಾಲೇಜಿನಲ್ಲಿ ಸೀಟು ಪಡೆದಿದ್ದಾಳೆ. ಮೂಲತಃ ಸಿಂದಗಿ ತಾಲೂಕಿನ ಹಿಕ್ಕನಗುತ್ತಿಯ ಮತ್ತು ಈಗ ವಿಜಯಪುರ ನಗರದಲ್ಲಿ ವಾಸಿಸುವ ಮಂಜುನಾಥ ಲಕ್ಷ್ಮಣ ಗೊಟಗುಣಕಿ ನೀಟ್ ನಲ್ಲಿ 76372 ಯಾರ್ಂಕ್ ಪಡೆದು, ಚಿತ್ರದುರ್ಗದ ಸರಕಾರಿ ಮೆಡಿಕಲ್ ಕಾಲೇಜಿನಲ್ಲಿ ಸೀಟು ಪಡೆದಿದ್ದಾನೆ.

## ಎಲ್ಲರೂ ಗೋಮಾತೆಯ ಪೂಜೆ ಮಾಡಿ; ಶರಣ ಶಂಕರಲಿಂಗ ಮಹಾರಾಜರು



ಮಲ್ಲಮ್ಮ ನುಡಿ ವಾರ್ತೆ ಚಿಟಗುಪ್ಪ: ಕಮಲಾಪುರ ತಾಲೂಕಿನ ಸೊಂತ ಗ್ರಾಮದ ಶ್ರೀಶ್ರೀಶ್ರೀ ಸದ್ಗುರು ದತ್ತ ದಿಗಂಬರ ಶಂಕರಲಿಂಗ ಆಶ್ರಮದ ಪುಣ್ಯಕೋಟಿ ಗೋಶಾಲೆಯಲ್ಲಿ ಶನಿವಾರ ಆಯೋಜಿಸಿದ್ದ ಎಳ್ಳು ಅಮಾವಾಸ್ಯೆ ಹಬ್ಬದಲ್ಲಿ ಶ್ರೀ ಅಭಿನವ ಬಾಲಯೋಗಿ ಶರಣ ಶಂಕರಲಿಂಗ ಮಹಾರಾಜರು ರೈತರಿಗೆ ಹಾಗೂ ನಾಡಿನ ಜನತೆಗೆ ಎಳ್ಳ ಅಮಾವಾಸ್ಯೆ ಹಬ್ಬದ ಶುಭಾಶಯಗಳು ಕೋರುತ್ತಾ ಮಾತನಾಡಿದ ಅವರು, ಪ್ರತಿ ವರ್ಷದಂತೆ ಈ ವರ್ಷವೂ ಕೂಡ ಎಳ್ಳು ಅಮಾವಾಸ್ಯೆ ಹಬ್ಬವನ್ನು ಪುಣ್ಯಕೋಟಿ ಗೋ ಶಾಲೆಯಲ್ಲಿ ಹಮ್ಮಿಕೊಡಿದೇವೆ, ರೈತರಿಗೆ ಒಳ್ಳೆಯದಾಗಬೇಕಾದರೆ ಗೋಮಾತೆ ಇದರೆ ರೈತರಿಗೆ ಒಳ್ಳೆಯದಾಗುತ್ತದೆ ಎಲ್ಲರೂ ಗೋಮಾತೆಯ ಪೂಜೆ ಮಾಡಬೇಕು ಎಂದು ತಿಳಿಸಿದರು.

## ತೊಗರಿ ಖರೀದಿ ಪ್ರಕ್ರಿಯೆ ಪ್ರಾರಂಭ



ಕಲಬುರಗಿ,ಡಿ.20–2025–26 ನೇ ಸಾಲಿನ ಸರ್ಕಾರದ ಬೆಂಬಲ ಬೆಲೆ ಯೋಜನೆಯಡಿಯಲ್ಲಿ ತೆ–ೂಗರಿ ಖರೀದಿಸಲು ಸರ್ಕಾರದಿಂದ ಆದೇಶ ಹೊರಡಿಸಲಾಗಿರುತ್ತದೆ ಎಂದು ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಮತ್ತು ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ.ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು ದಿನಾಂಕ:17–12–2025 ರಂದು ಸರ್ಕಾರ ಆದೇಶ ಹೊರಡಿಸಿದೆ. ನಿನ್ನೆ ಕಲಬುರಗಿ ಜಿಲ್ಲಾಧಿಕಾರಿಯೊಂದಿಗೆ ನಡೆಸಿದ ಜಿಲ್ಲಾ ಮಟ್ಟದ ಟಾಸ್ಕ ಫೋರ್ಸ ಸಭೆಯಲ್ಲಿ ಬೆಂಬಲ ಬೆಲೆ ಯೋಜನೆಯಡಿ ತೊಗರಿ ಪ್ರತಿ ಕ್ವಿಂಟಾಲಗೆ ರೂ.8,000 ರಂತೆ ಪ್ರತಿ ಎಕರೆಗೆ 04 ಕ್ವಿಂಟಲ್ ನಂತೆ ಹಾಗೂ ಫ್ರೂಟ್ಸ್ ತಂತ್ರಾಂಶದಲ್ಲಿ ಲಭ್ಯವಾಗುವ ರೈತರು ತೊಗರಿ ಬೆಳೆದ ಜಮೀನಿನ ವಿಸ್ತೀರ್ಣಕ್ಕೆ ಅನುಗುಣವಾದ ಪ್ರಮಾಣದಲ್ಲಿ ತೊಗರಿಯನ್ನು ಖರೀದಿಸಲು ಅನುಮತಿ ನೀಡಲಾಗಿರುತ್ತದೆ.ಸರ್ಕಾರದ ಆದೇಶದಲ್ಲಿನಂತೆ ಕಲಬುರಗಿ ಜಿಲ್ಲೆಗೆ ಬೆಂಬಲ

## ಕೆರೆಯಲ್ಲಿ ಗಳಿಸಿದ ಹೆಸರು ಆಸ್ಪತ್ರೆಯಲ್ಲಿ ಕಳೆದುಕೊಳ್ಳಬೇಡಿ: ಪಾಟೀಲ

**ಸರಕಾರಿ ಮೆಡಿಕಲ್ ಕಾಲೇಜ್ ಸ್ಥಾಪನೆಗೆ ನಾಡಿನ ಹಿರಿಯ ಚಿಂತಕರ ಆಗ್ರಹ**




ವಿಜಯಪುರಜಿಲ್ಲೆಗೆ ಯಾಕೆ ತಾರತಮ್ಯ, ವಿಜಯಪುರಜಿಲ್ಲೆಯಲ್ಲಿ ಸಕಲ ಸೌಲಭ್ಯ ಇರುವ ಸರಕಾರಿ ವ್ಯವಸ್ಥೆ ಇದೆ, ಬಡ ಜನರಿಗೆ ಸರ್ಕಾರ ಮೋಸ ಮಾಡುತ್ತಿದೆ. ವಿಜಯಪುರ ಆ ಕಾಲದಲ್ಲಿಯೇ ರಾಜಧಾನಿ ಆಗಿರುವುದು ಇದಕ್ಕೆ ಮೆಡಿಕಲ್ ಕಾಲೇಜ್ ಮಾಡಲಿಕ್ಕೆ ನಿಮಗೆ ಏನು ತೊಂದ್ರೆ ಎಂದು ಹಿರಿಯ ಸಮಾಜವಾದಿ ಮುಖಂಡ ಡಾ ಸಿದ್ದನಗೌಡ ಪಾಟೀಲ ಪ್ರಶ್ನೆ ಮಾಡಿದರು. ಅವರು ನಗರದ ಡಾ ಬಿ ಆರ್ ಅಂಬೇಡ್ಕರ್ ವೃತ್ತದಲ್ಲಿ ನಡೆಯುತ್ತಿರುವ ಅನಿರ್ಧಿಷ್ಟ ಅಹೋರಾತ್ರಿ ಧರಣಿ ವೇದಿಕೆಯಲ್ಲಿ ನಾಡಿನ ಹಿರಿಯ ಹೋರಾಟ ಬೆಂಬಲಿಸಿ ಹಮ್ಮಿಕೊಂಡಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು. ಪತ್ರಕರ್ತರ ಪ್ರಶ್ನೆಗೆ ಉತ್ತರಿಸಿದ ಅವರು ಸಚಿವ ಎಂ ಬಿ ಪಾಟೀಲ ನೀವು ಕೈಗಾರಿಕಾ ಮಂತ್ರಿ ಆಗಿ ಆದರೆ ಕೈಗಾರಿಕಾ ಉದ್ಯಮಿಗಳ ಮಂತ್ರಿ ಆಗಬೇಡಿ, ನೀವು ಬಂಡವಾಳಶಾಹಿಗಳ ಗುಲಾಮರಾಗಬೇಡಿ ಎಂದು ಹೇಳಿದ ಅವರು ಜಿಲ್ಲೆಯ ಆಸ್ಪತ್ರೆ ಬಂಡವಾಳ ಶಾಹಿಗಳ ಕಪಿಮುಷ್ಠಿಗೆ ಹೋಗಲು ಹೋರಾಟಗಾರರು ಬಿಡೋದಿಲ್ಲ ಎಂದರು. ಮುಖ್ಯಮಂತ್ರಿಗಳ ನವೆಂಬರ್ 19ರ ಅಧಿಕೃತ ಕಾರ್ಯಕ್ರಮದ ಪಟ್ಟಿಯಲ್ಲಿ ನಿಯೋಗದ ಭೇಟಿ ಇರಲಿಲ್ಲ, ನಿಯೋಗ ನಿಗದಿ ಆಗದ ಕಾರಣ ಅದು ವಿಫಲವಾಗಿದೆ ಪಿ ಪಿ ಮಾಧರಿ ಜಾರಿಯಲ್ಲಿ ಎಲ್ಲ ಪಕ್ಷಗಳದು ಪಾತ್ರವಿದೆ. ರಾಜಕಾರಣಿಗಳ ಹಿತಾಸಕ್ತಿ ಬಂದರೆ ಎಲ್ಲರು ಒಂದೇ ಜಿಲ್ಲೆಯ ರಾಜಕಾರಣಿಗಳು ಒಳ ಒಪ್ಪಂದದಿಂದ ಸರಕಾರಿ ಆಸ್ಪತ್ರೆ ಕಳೆದುಕೊಳ್ಳುವ ಸಂಭವ ಬಂದಿದೆ. ರಾಜಕಾರಣಿಗಳಿಗೆ ನಮಗೆ ರಾಜಕೀಯವಾಗಿ ಪೆಟ್ಟು ಕೊಡುತ್ತದೆ ಎಂದು ಗೊತ್ತಾದಾಗ ಮಾತ್ರ ಈ ಬೇಡಿಕೆ ಈಡೇರುತ್ತದೆ. ಜೊತೆಗೆ ಅಧಿವೇಶನ ಮುಗಿದ ತಕ್ಷಣ ಸಿಎಂ ಸಿದ್ದರಾಮಯ್ಯ ಮತ್ತು ಸಚಿವ ಎಂಬಿ ಪಾಟೀಲರಿಗೆ ಭೇಟಿ ಆಗಿ ಮನವಿ ಮಾಡುತ್ತೇವೆ ಎಂದು ತಿಳಿಸಿದರು. ಎಂ.ಬಿ ಪಾಟೀಲ ಕೆರೆಯಲ್ಲಿ ಗಳಸಿದ ಹೆಸರು ಆಸ್ಪತ್ರೆಯಲ್ಲಿ ಕಳೆದುಕೊಳ್ಳಬೇಡಿ.



## ಪ್ರತಿಭಾ ಕಾರಂಜಿಯಲ್ಲಿ ಗಡವಂತಿಯ ಶ್ರೀ ಸ್ವಾಮಿ ವಿವೇಕಾನಂದ ಹಿರಿಯ ಪ್ರಾಥಮಿಕ ಶಾಲೆ ವಿದ್ಯಾರ್ಥಿಗಳ ಮೇಲುಗೈ.



**ಮಲ್ಲಮ್ಮ ನುಡಿ ವಾರ್ತೆ ಹುಮ್ನಾಬಾದ:** ಸೋಮವಾರದಂದು ನಡೆದ ವಲಯ ಮಟ್ಟದ ಪ್ರತಿಭಾ ಕಾರಂಜಿಯಲ್ಲಿ ಶ್ರೀ ಸ್ವಾಮಿ ವಿವೇಕಾನಂದ ಹಿರಿಯ ಪ್ರಾಥಮಿಕ ಶಾಲೆ ಗಡವಂತಿಯ ವಿದ್ಯಾರ್ಥಿಗಳು ವಿವಿಧ ಸ್ಪರ್ಧೆಗಳಲ್ಲಿ 48 ಮಕ್ಕಳು ಭಾಗವಹಿಸಿ 27 ಪ್ರಥಮ ಸ್ಥಾನ 13 ದ್ವಿತೀಯ ಸ್ಥಾನ ಹಾಗೂ 3 ತೃತೀಯ ಸ್ಥಾನವನ್ನು ಪಡೆದು ಶಾಲೆಗೆ ಹಾಗೂ ಗಡವಂತಿ ಗ್ರಾಮಕ್ಕೆ ಕೀರ್ತಿಯನ್ನು ತಂದಿರುತ್ತಾರೆ.ಮಕ್ಕಳ ಈ ಸಾಧನೆಗೆ ಕಾರಣರಾದ ಶಾಲೆಯ ಮುಖ್ಯಗುರುಗಳು ಆದ ಶ್ರೀ ಗಣಪತಿ ಛತ್ರಿ ಹಾಗೂ ಸಹ ಶಿಕ್ಷಕರು ಆದ ವಿಷ್ಣುವರ್ಧನ್ ಮರಪಳ್ಳಿ, ಶ್ರೀಪಾದ ನಿಟ್ಟುರೆ,ಸಾವಿತ್ರಿ ಹಿರೇಮಠ್, ವಿಜಯಲಕ್ಷ್ಮಿ ಬೋರಳೆ,ದೀಪಿಕಾ ರಾಜಗೊಂಡ್, ಸುಧಾರಾಣಿ ಜನ್ನಾ,ಅಶ್ವಿನಿ ಸಂಗಮ್, ಕೆ.ವೀಣಾ ಕವಳಸ್ಕರ್ ಅವರಿಗೆ ಶಾಲೆಯ ಆಡಳಿತ ಮಂಡಳಿಯ ಅಧ್ಯಕ್ಷರು ಶ್ರೀ ಬಸವರಾಜ ಭಾವಿ ಹಾಗೂ ಸರ್ವ ಸದಸ್ಯರು ಅಭಿನಂದಿಸಿ ಹರ್ಷ ವ್ಯಕ್ತಪಡಿಸಿದ್ದಾರೆ.

# ಭೀಮಣ್ಣಾ ಖಂಡ್ರೆ, ಡಾ।ಚನ್ನಬಸವ ಪಟ್ಟದ್ದೇವರು ಒಂದು ನಾಣ್ಯದ ಎರಡು ಮುಖಗಳು: ಖಂಡ್ರೆ

ಮಲ್ಲಮ್ಮ ನುಡಿ ವಾರ್ತೆ

ಭಾಲ್ಕಿ: ಮಾಜಿ ಸಚಿವ ಡಾ। ಭೀಮಣ್ಣಾ ಖಂಡ್ರೆ ಮತ್ತು ಲಿಂ. ಡಾ। ಚನ್ನಬಸವ ಪಟ್ಟದ್ದೇವರು ಒಂದೇ ನಾಣ್ಯದ ಎರಡು ಮುಖಗಳಾಗಿದ್ದರು ಎಂದು ಬೀದರ ಸಂಸದ ಸಾಗರ ಈಶ್ವರ ಖಂಡ್ರೆ ಹೇಳಿದರು.

ಪಟ್ಟಣದ ಲಕ್ಷೀಬಾಯಿ ಖಂಡ್ರೆ ಪಬ್ಲಿಕ್ ಶಾಲೆಯಲ್ಲಿ ಲಿಂ.ಡಾ। ಚನ್ನಬಸವ ಪಟ್ಟದ್ದೇವರ 136ನೇ ಜಯಂತಿ ಮಹೋತ್ಸವ ನಿಮಿತ್ಯ ಶನಿವಾರ ಆಯೋಜಿಸಿದ್ದ ಉಚಿತ ಆರೋಗ್ಯ ತಪಾಸಣಾ ಶಿಬಿರ ಹಾಗು ರಕ್ತದಾನ ಶಿಬಿರ ಉದ್ಘಾಟಿಸಿ ಅವರು ಮಾತನಾಡಿದರು. ಅತಿ ಹಿಂದುಳಿದ ಪ್ರದೇಶವಾದ ಭಾಲ್ಕಿಯನ್ನು ಅತ್ಯುನ್ನತ ಮಟ್ಟಕ್ಕೆ ಕೊಂಡೊಯ್ಯುವಲ್ಲಿ ಮಾಜಿ ಸಚಿವ ಭೀಮಣ್ಣಾ ಖಂಡ್ರೆ ಹಾಗು ಲಿಂ.ಡಾ।ಚನ್ನಬಸವ ಪಟ್ಟದ್ದೇವರ ಶ್ರಮ ಸಾಕಷ್ಟಿದೆ. ಚನ್ನಬಸವ ಪಟ್ಟದ್ದೇವರು, ಡಾ। ಭೀಮಣ್ಣಾ ಖಂಡ್ರೆಯವರ ಅಖಂಡ ಆಶೀರ್ವಾದ ನಮ್ಮ ತಂದೆ ಸಚಿವ ಈಶ್ವರ ಖಂಡ್ರೆಯವರ ಪ್ರಯತ್ನದಿಂದ ಅತ್ಯಂತ ಚಿಕ್ಕವಯಸ್ಸಿನಲ್ಲಿಯೇ ನಾನು ಭಾರತ ಸಂಸದನಾಗಿ ಆಯ್ಕೆಯಾಗಿದ್ದೇನೆ. ಪಟ್ಟದ್ದೇವರು ಮತ್ತು ಭೀಮಣ್ಣಾ ಖಂಡ್ರೆಯವರ ಶ್ರಮದಿಂದಲೇ ಶಾಂತಿವರ್ಧಕ ಶಿಕ್ಷಣ ಸಂಸ್ಥೆ ಇಷ್ಟು ಎತ್ತರ-ಕ್ಕೆ ಬೆಳದು ನಿಂತಿದೆ. ಒಂದು ಶಿಕ್ಷಣ ಸಂಸ್ಥೆಯಲ್ಲಿಯೇ 21 ಶಾಲಾ ಕಾಲೇಜುಗಳನ್ನು ಕಟ್ಟಿ ಬೆಳೆಸಿದ ಕಾರ್ಯ ಡಾ। ಭೀಮಣ್ಣಾ ಖಂಡ್ರೆಯವರಿಗೆ ಸಲ್ಲುತ್ತದೆ. ಈ ನಿಟ್ಟಿನಲ್ಲಿ ಡಾ। ಚನ್ನಬಸವ ಪಟ್ಟದ್ದೇವರ ಜಯಂತಿ ಮಹೋತ್ಸವದ ಪೂರ್ವಭಾವಿಯಾಗಿ ಶಾಂತಿ ವರ್ಧಕ ಶಿಕ್ಷಣ ಸಂಸ್ಥೆಯ ವತಿಯಿಂದ ಉಚಿತ ಆರೋಗ್ಯ ತಪಾಸಣೆ ಮತ್ತು ರಕ್ತದಾನ ಶಿಬಿರ ಏರ್ಪಡಿಸಲಾಗಿದೆ ಎಂದು ಹೇಳಿದರು.

ಬೀದರ ವಿಶ್ವವಿದ್ಯಾಲಯದ ಕುಲಪತಿ ಡಾ। ವಿ.ಎಸ್.ಪಾಟೀಲ ಮಾತನಾಡಿ,108 ವರ್ಷಗಳಕಾಲ ಬಾಳಿ ಬದುಕಿದ ಲಿಂ.ಡಾ। ಚನ್ನಬಸವ ಪಟ್ಟದ್ದೇವರ ತತ್ವಾದರ್ಶಗಳು ಜನಮಾನಸಕ್ಕೆ ಮುಟ್ಟಿಸುವ ನಿಟ್ಟಿನಲ್ಲಿ ಇಂತಹ ಕಾರ್ಯಕ್ರಮಗಳು ಹಮ್ಮಿಕೊಳ್ಳುತ್ತಿರುವುದು ಪ್ರಶಂಶನೀಯವಾಗಿದೆ ಎಂದು ಹೇಳಿದರು. ಪ್ರಾಸ್ತಾವಿಕವಾಗಿ ಮಾತನಾಡಿದ ಶಾಂತಿವರ್ಧಕ ಶಿಕ್ಷಣ ಸಂಸ್ಥೆಯ ಮುಖ್ಯ ವ್ಯವಸ್ಥಾಪಕ ಸುರೇಂದ್ರನ್. ಆರ್, ಯುವ ಜನಾಂಗಕ್ಕೆ ಪೂಜ್ಯರ ಮೌಲ್ಯಗಳನ್ನು ತಿಳಿಸುವ ನಿಟ್ಟಿನಲ್ಲಿ ಪಟ್ಟದ್ದೇವರ ಜಯಂತಿ ಆಚರಿಸುತ್ತ ಬರುತ್ತಲಿದ್ದೇವೆ. ಆರೋಗ್ಯವಂತರಾಗಿದ್ದರೆ ಎಲ್ಲವನ್ನೂ ಸಾಧಿಸಬಹುದು. ಹೀಗಾಗಿ ಪೂಜ್ಯರ ಜಯಂತಿ ನಿಮಿತ್ಯ ಶಾಂತಿ ವರ್ಧಕ ಶಿಕ್ಷಣ ಸಂಸ್ಥೆಯ

ವತಿಯಿಂದ ಉಚಿತ ಆರೋಗ್ಯ ತಪಾಸಣೆ ಮತ್ತು ರಕ್ತದಾನ ಶಿಬಿರ ಏರ್ಪಡಿಸಲಾಗಿದೆ ಎಂದು ಹೇಳಿದರು. ಇದೇವೇಳೆ ಸಂಸದ ಸಾಗರ ಖಂಡ್ರೆಯವರು ಉಚಿತ ಆರೋಗ್ಯ ತಪಾಸಣಾ ಶಿಬಿರದಲ್ಲಿ ವೈದ್ಯರೊಂದಿಗೆ ರೋಗಿಗಳ ಕ್ಷೇಮ ವಿಚಾರಿಸಿದರು. ವಿದ್ಯಾರ್ಥಿನಿ ಭೂಮಿಕಾ ಡಾ। ಭೀಮಣ್ಣಾ ಖಂಡ್ರೆ ಜೀವನ ಸಾಧನೆಯ ಬಗ್ಗೆ ಮಾತನಾಡಿದರು.

ಕಾರ್ಯಕ್ರಮದಲ್ಲಿ ಬೀದರ ವಿಶ್ವವಿದ್ಯಾಲಯದ ರಿಜಿಸ್ಟ್ರಾರ್ ಪರಮೇಶ್ವರ ನಾಯಕ, ಪಬ್ಲಿಕ್ ಶಾಲೆಯ ಪ್ರಾಚಾರ್ಯ ಸಂತೋಷ ಮಿರಾಜಕರ,ಆಡಳಿತಾಧಿಕಾರಿ ಅಂಕುಶ ಢೋಲೆ, ಬಿಕೆಐಟಿ ಪ್ರಾಚಾರ್ಯ ಡಾ। ಉದಯಕುಮಾರ ಕಲ್ಯಾಣೆ, ಅಕ್ಕಮಹಾದೇವಿ

ಕಾಲೇಜಿನ ಪ್ರಾಚಾರ್ಯ ಭೀಮರಾವ ಗಿರಿ, ಸಿಬಿ ಕಾಲೇಜಿನ ಪ್ರಾಚಾರ್ಯ ಸಂತೋಷಕುಮಾರ ತೀರ್ಥ, ಬೀದರ ವಿಶ್ವವಿದ್ಯಾಲಯದ ಸೆನೆಟ್ ಸದಸ್ಯರಾದ ಸಚಿನ ಮಲ್ಕಾಪೂರೆ,ಶ್ರೀನಾಥ್ ಪಾಟೀಲ, ಆರೋಗ್ಯಾಧಿಕಾರಿ ಡಾ। ಅಬ್ದುಲ ಖಾದರ,ಚರ್ಮತಜ್ಞಡಾ।ವಿನಾಯಕ ಬಿಯಾಣಿ ಉಪಸ್ಥಿತರಿದ್ದರು. ಸುರೇಂದ್ರ. ಆರ್

ಸ್ವಾಗತಿಸಿದರು. ಭೀಮರಾವ ನಿರೂಪಿಸಿದರು. ಅಂಕುಶ ಢೋಲೆ ವಂದಿಸಿದರು.




> ಯುವಕರು ಆರೋಗ್ಯವಂತರಾಗಿದ್ದರೆ ದೇಶ ಸುಭದ್ರವಾಗಿರುತ್ತದೆ. ಈ ನಿಟ್ಟಿನಲ್ಲಿ ಪೂಜ್ಯರ ಜಯಂತಿ ನಿಮಿತ್ಯ ಉಚಿತ ಆರೋಗ್ಯ ತಪಾಸಣಾ ಶಿಬಿರ ಏರ್ಪಡಿಸದ್ದು, ಎಲ್ಲಾ ಯುವಕ, ಯುವತಿಯರು ಇದರ ಲಾಭ ಪಡೆದುಕೊಳ್ಳಬೇಕು. ಪೂಜ್ಯರ ಮೌಲ್ಯಗಳು ತಮ್ಮ ಬಾಳಿನಲ್ಲಿ ಅಳವಡಿಸಿಕೊಳ್ಳಬೇಕು.
>
> ಸಾಗರ ಈಶ್ವರ ಖಂಡ್ರೆ, ಸಂಸದರು, ಬೀದರ.

# ತಾಲೂಕು ಪತ್ರಕರ್ತರ ಸಂಘಕ್ಕೆ ಮುದಗಲ್ ಪತ್ರಕರ್ತರು ಪದಾಧಿಕಾರಿಗಳಾಗಿ ಆಯ್ಕೆ



**ಮಲ್ಲಮ್ಮ ನುಡಿ ವಾರ್ತೆ** ಮುದಗಲ್:

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ಲಿಂಗಸುಗೂರು ತಾಲೂಕು ಘಟಕದ ಪದಾಧಿಕಾರಿಗಳ ಚುನಾವಣೆಯಲ್ಲಿ ಮುದಗಲ್ಲಿನಿಂದ ಐದು ಜನ ಪತ್ರಕರ್ತರು ಪದಾಧಿಕಾರಿಗಳಾಗಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.ತಾಲೂಕು ಘಟಕ-ಕ್ಕೆ ಉಪಾಧ್ಯಕ್ಷರಾಗಿ ಪ್ರಜಾವಾಣಿ ವರದಿಗಾರರಾದ ಡಾ.ಶರಣಪ್ಪ ಆನೆಹೊಸೂರು,ಕಾರ್ಯದರ್ಶಿಯಾಗಿ ಸುದ್ದಿಮೂಲ ವರದಿಗಾರರಾದ ಶಶಿಧರ ಕಂಚಿಮಠ, ಕಾರ್ಯಕಾರಿಣಿ ಸಮಿತಿ ಸದಸ್ಯರಾಗಿ ಈಶಾನ್ಯ ಟೈಮ್ಸ್ ವರದಿಗಾರರಾದ ಬಸವರಾಜ ಆಶಿಹಾಳ, ಹೊಸದಿಗಂತ ಪತ್ರಿಕೆಯ ವರದಿಗಾರ ನಾಗರಾಜ ಮಡಿವಾಳರ, ರಾಯಚೂರು ವಾಣಿ ಪತ್ರಿಕೆಯ ವರದಿಗಾರರಾದ ಮೈನುದ್ದಿನ್ ಭಂಡಾರಿ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ, ಚುನಾವಣೆಯಲ್ಲಿ ಅವಿರೋಧವಾಗಿ ಆಯ್ಕೆಯಾದ ನಂತರ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಆರ್ ಗುರುನಾಥ ಫಲಿತಾಂಶ ಪ್ರಕಟಿಸುವ ಮೂಲಕ ಆಯ್ಕೆಯಾದ ಪದಾಧಿಕಾರಿಗಳಿಗೆ ಪ್ರಮಾಣ ಪತ್ರ ವಿತರಿಸಿದರು.ಜಿಲ್ಲಾದ್ಯಕ್ಷರ ನೇತೃತ್ವದಲ್ಲಿ ಚುನಾವಣೆ ಪ್ರಕ್ರಿಯೆಯನ್ನು ಶಾಂತಿಯುತವಾಗಿ ಪಾರದರ್ಶಕವಾಗಿ ಮತ್ತು ಅಚ್ಚುಕಟ್ಟಾಗಿ ನೆರವೇರಿಸಿದರು..



ಭಾಲ್ಕಿ : ರೈತರ ವಿಶೇಷ ಹಬ್ಬ ಎಳ್ಳು ಅಮಾವಾಸ್ಯೆ ದಿನ ಜಿಲ್ಲಾ ಉಸ್ತುವಾರಿ ಸಚಿವರಾದ ಈಶ್ವರ್ ಖಂಡ್ರೆ, ಡಾ. ಗೀತಾ ಖಂಡ್ರೆ, ಸಂಸದರಾದ ಸಾಗರ್ ಖಂಡ್ರೆ ಕುಟುಂಬ ಸಮೇತ ಹೊಲಕ್ಕೆ ಹೋಗಿ ಭೂತಾಯಿಗೆ ಪೂಜೆ ಸಲ್ಲಿಸಿ ವಿಶೇಷ ಅಡಿಗೆ ಬಜ್ಜಿ ,ರೊಟ್ಟಿ, ಅಂಬಲಿ ಸವಿದರು. ಸಮಸ್ತ ರೈತ ಬಾಂಧವರಿಗೆ ಎಳ್ಳು ಅಮಾವಾಸ್ಯೆ ಹಬ್ಬದ ಶುಭಾಶಯಗಳನ್ನು ಸಲ್ಲಿಸಿದರು.

# ಪತ್ರಕರ್ತ ಶ್ರೀಕಾಂತ ಪಾಟೀಲರಿಗೆ ರಾಜ್ಯಮಟ್ಟದ ಮಾಧ್ಯಮ ರತ್ನ' ಪ್ರಶಸ್ತಿ

ಮಲ್ಲಮ್ಮ ನುಡಿ ವಾರ್ತೆ

ಬೀದರ್ ಡಿ 19:- ಶಿಕ್ಷಣಜ್ಞಾನ ಮಾಸಪತ್ರಿಕೆಯ 23ನೇ ವಾರ್ಷಿಕೋತ್ಸವನ್ನು ಆಯೋಜಿಸಲಾದ ರಾಜ್ಯಮಟ್ಟದ ಶೈಕ್ಷಣಿಕ ಸಮಾವೇಶ ಹಾಗೂ ಸಾಧಕರಿಗೆ ಗೌರವ ಪ್ರಶಸ್ತಿ ಪ್ರಧಾನ ಸಮಾರಂಭದಲ್ಲಿ ಪತ್ರಕರ್ತ ಶ್ರೀಕಾಂತ ಪಾಟೀಲ ಅವರಿಗೆ ' ರಾಜ್ಯಮಟ್ಟದ 'ಮಾಧ್ಯಮ ರತ್ನ' ಪ್ರಶಸ್ತಿ ನೀಡಿ ಗೌರವಿಸಲಾಗುವುದು.



ಕನ್ನಡ ನಾಡು-ನುಡಿ, ಸಂಸ್ಕೃತಿ, ಸಾಹಿತ್ಯ ಮಾಧ್ಯಮ, ಶಿಕ್ಷಣ, ಪರಿಸರ,ಧಾರ್ಮಿಕ, ಕಲೆ ಹಾಗೂ ಸಮಾಜ ಸೇವೆ ಸೇರಿದಂತೆ ಅನೇಕ ಕ್ಷೇತ್ರಗಳಲ್ಲಿ ತಮ್ಮದೇ ಆದ ಹೆಜ್ಜೆ ಗುರುತು ಮೂಡಿಸಿರುವ ಇವರಿಗೆ ರವಿವಾರ ಡಿ.21 ರಂದು ಹಾಸನ ಜಿಲ್ಲೆಯ

ಶ್ರೀ ಶಿವಲಿಂಗೇಶ್ವರ ಕಲ್ಯಾಣ ಮಂದಿರ ತಣ್ಣೀರುಹಳ್ಳ ಮಠದ ಭವ್ಯ ಕಾರ್ಯಕ್ರಮದಲ್ಲಿ ತಮ್ಮ ದೀರ್ಘಕಾಲದ ಪತ್ರಕರ್ತ ಸೇವೆ, ಸಾಮಾಜಿಕ ಚಟುವಟಿಕೆಗಳಲ್ಲಿ ನೀಡಿರುವ ಕೊಡುಗೆ ಹಾಗೂ ಸ್ಥಳೀಯ-ಪ್ರಾದೇಶಿಕ ವಿಚಾರಗಳನ್ನು ಜವಾಬ್ದಾರಿಯುತವಾಗಿ ಸಮಾಜದ ಮುಂದೆ ತಂದುಕೊಟ್ಟ ಸೇವೆಯನ್ನು ಪರಿಗಣಿಸಿ ಆಯೋಜಕರು ಪ್ರಶಸಿಯನ್ನು ಪ್ರಧಾನ ಮಾಡಲಿರುವರು ಎಂದು ಆಯೋಜಕರಾದ ಶಿಕ್ಷಣಜ್ಞಾನ ಪತ್ರಿಕೆ ಸಂಪಾದಕರಾದ ಶ್ರೀ ಎಸ್.ವಿ. ನಾಗರಾಜ್ ಮತ್ತು ಶಿವಾನಂದ್ ವಿಶ್ವಕರ್ಮ ತಿಳಿಸಿದರು.ಈ ಕಾರ್ಯಕ್ರಮ ದಿವ್ಯ ಸಾನಿಧ್ಯ ಶ್ರೀ ಶ್ರೀ ಶ್ರೀ ವಿಜಯಕುಮಾರ ಮಹಾಸ್ವಾಮಿಗಳು ತಣ್ಣೀರುಹಳ್ಳಿ ಮಠ,ಹಾಸನ. ಡಾ.ಎನ್.ಗಂಗಾಧರಪ್ಪ ರಾಜ್ಯ ಶಿಕ್ಷಕ ಪ್ರಶಸ್ತಿ ಪುರಸ್ಕೃತರು, ಮೈಸೂರು

ಶ್ರೀ ನಾಗರಾಜ್ ಚಾಲಮಂಗಲ ರಾಜ್ಯಾಧ್ಯಕ್ಷರು, ಅನುದಾನ ರಹಿತ ಶಾಲಾ-ಕಾಲೇಜುಗಳ ಒಕ್ಕೂಟ ಬೆಂಗಳೂರು. ಬಿ.ಆರ್.ಉದಯಕುಮಾರ್, ಮಾಜಿ ಅಧ್ಯಕ್ಷರು, ಜಿಲ್ಲಾ ಪತ್ರಕರ್ತರ ಸಂಘ, ಹಾಸನ.ಡಾ. ಸಿ.ಡಿ. ಪಾಪೇಗೌಡ, ಅಧ್ಯಕ್ಷರು,ಎಸ್.ಎಸ್.ಜಿಪಿಎಸ್ ಸಮೂಹ ಸಂಸ್ಥೆ, ಯಲಹಂಕ,ಎನ್.ಬಿ. ಆನಂದ್ ಪಟೇಲ್, ಸಂಪಾದಕರು ಸಿಂಕನ್ನಡ ದಿನಪತ್ರಿಕೆ, ಹಾಸನ ಬಿ.ಎಸ್.ಕಾಂತರಾಜು, ಕಾರ್ಯದರ್ಶಿಗಳು, ತಣ್ಣೀರುಹಳ್ಳಿ ಮಠದ ಶಿಕ್ಷಣ ಸಂಸ್ಥೆ, ಹಾಸನ. ಬಿ.ಪಿ. ಸೋಮಣ್ಣ, ಕಾರ್ಯದರ್ಶಿಗಳು, ತಣ್ಣೀರುವಳ್ಳಿ ಮಠದ ಅಭಿವೃದ್ಧಿ ಸಮಿತಿ ಹಾಸನ, ಎಂ ಎಂ ಪುಟ್ಟರಾಜು ಮಾಲೀಕರು, ಮಲ್ನಾಡ್ ಇಂಜಿನಿಯರಿಂಗ್ ಬೆಂಗಳೂರು.ಶ್ರೀ ಕೆ. ಧರ್ಮಣ್ಣ, ಶಿಕ್ಷಕರು, ತಿರಗುಪ್ತ, ಬಳ್ಳಾರಿ. ಶ್ರೀ ಬಿ.ಟಿ. ಶಿವಶಂಕರ್, ನಿವೃತ್ತ ಪ್ರೌಢಶಾಲಾ ಮುಖ್ಯ ಶಿಕ್ಷಕರು, ಗೌರಿಬಿದನೂರು. ಪ್ರೇಮಲತಾ ಬಿ., ಸಹಶಿಕ್ಷಕಿ, ಸೆಂಟ್ ತೆರೇಸಾ ಇಂಗ್ಲೀಷ್ ಪೈಸ್ಕೂಲ್, ನೆಲಮಂಗಲಶ್ರೀ ಬಿ.ಪಿ. ಚಂದ್ರಶೇಖರ್, ಕಲಾವಿದರು ಹಾಗೂ ಮಾಲೀಕರು, ಮೂಕಾಂಬಿಕಾ ಮೋಟಾರ್, ತರೀಕೆರೆ ವೆಂಕಟರಮಣರೆಡ್ಡಿ, ವ್ಯವಸ್ಥಾಪಕ ಸಂಪಾದಕರು, ಶಿಕ್ಷಣವಾನ ಪತ್ರಿಕೆ.ವಿ. ಪಾಟೀಲ, ಶಿಕ್ಷಕರು. ಅಧ್ಯಕ್ಷರು, ಕನ್ನಡ ಜಾನಪದ ಪರಿಷತ್ತು, ಇಂಡಿ, ವಿಜಯಪುರ ಜಿಲ್ಲೆ. ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.

# ಅಧ್ಯಕ್ಷ ಡಾ.ಮಾನಸ ಅವರ ಬೀದರ ಜಿಲ್ಲಾ ಪ್ರವಾಸ

**ಮಲ್ಲಮ್ಮ ನುಡಿ ವಾರ್ತೆ ಬೀದರ,:** ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಡಾ.ಮಾನಸ ಅವರು ಡಿಸೆಂಬರ್.21 ಮತ್ತು 22 ರಂದು ಬೀದರ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡಿರುತ್ತಾರೆ. ಅವರು ಡಿಸೆಂಬರ್.21 ರಂದು ಬೆಳಿಗ್ಗೆ 6 ಗಂಟೆಗೆ ಬೆಂಗಳೂರಿನಿಂದ ಹೊರಟು ಸಂಜೆ 7 ಗಂಟೆಗೆ ಬೀದರಗೆ ಆಗಮಿಸಿ, ಬೀದರ ಸರ್ಕಾರಿ ಅತಿಥಿ ಗೃಹದಲ್ಲಿ ವಾಸ್ತವ್ಯ ಮಾಡಲಿದ್ದಾರೆ. ಡಿಸೆಂಬರ್.22 ರಂದು ಬೆಳಿಗ್ಗೆ 11 ಗಂಟೆಗೆ ಮನೆಗೊಂದು ಗ್ರಂಥಾಲಯದ ಜಿಲ್ಲಾ ಜಾಗೃತ ಸಮಿತಿ ರಚನೆ ಕುರಿತು ಏರ್ಪಡಿಸಿರುವ ಸಭೆಯಲ್ಲಿ ಭಾಗವಹಿಸಲಿದ್ದಾರೆಂದು ಕನ್ನಡ ಪುಸ್ತಕ ಪ್ರಾಧಿಕಾರದ ಆಡಳಿತಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಎಸ್.ಆರ್.ಮೆಹರೋಜ್ ಖಾನ್ ಅವರ ಬೀದರ ಜಿಲ್ಲಾ ಪ್ರವಾಸ

**ಮಲ್ಲಮ್ಮ ನುಡಿ ವಾರ್ತೆ ಬೀದರ:** ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷರಾದ ಎಸ್.ಆರ್.ಮೆಹರೋಜ್ ಖಾನ್ ಅವರು ಡಿಸೆಂಬರ್.23 ರಂದು ಬೀದರ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡಿರುತ್ತಾರೆ. ಅವರು ಡಿಸೆಂಬರ್.23 ರಂದು ಮಧ್ಯಾಹ್ನ 2.30 ಗಂಟೆಗೆ ಬೀದರ ಜಿಲ್ಲಾ ಪಂಚಾಯತದಲ್ಲಿ ಡಿಸೆಂಬರ್.30 ರಂದು ಆಯೋಜಿಸಿರುವ "ಗಾರಂಟಿ ಕಾರ್ಯಾಗಾರ" ಮತ್ತು "ಗ್ಯಾರಂಟಿ ಉತ್ಸವ" ಕಾರ್ಯಕ್ರಮದ ಪೂರ್ವ ಸಿದ್ಧತಾ ಪರಿಶೀಲನಾ ಸಭೆಯಲ್ಲಿ ಭಾಗವಹಿಸಲಿದ್ದಾರೆಂದು ಉಪಾಧ್ಯಕ್ಷರ ಆಪ್ತ ಕಾರ್ಯದರ್ಶಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ತಂತ್ರಜ್ಞಾನ ಯುಗದಲ್ಲಿ ದೇಶಿಯ ಪರಂಪರೆ ಉಳಿಸಿ ಬೆಳಸಬೇಕು : ಒಪ್ಪತ್ತೇಶ್ವರ ಶ್ರೀಗಳು

ಮಲ್ಲಮ್ಮ ನುಡಿ ವಾರ್ತೆ

**ಗುಳೇದಗುಡ್ಡ/ತೆಗ್ಗಿ :** ತಂತ್ರಜ್ಞಾನ ಯುಗದಲ್ಲಿ ಪಾಶ್ಚಿಮಾತ್ಯ ಸಂಸ್ಕೃತಿಗೆ ಮಾರುಹೋಗದೆ ನಮ್ಮ ದೇಶಿಯ ಪರಂಪರೆ ಮತ್ತು ನೆಲಮೂಲ ಸಂಸ್ಕೃತಿಯನ್ನು ಉಳಿಸುವ ಜವಾಬ್ದಾರಿ ನಮ್ಮದಾಗಬೇಕು. ರೈತ ಸಂಪ್ರದಾಯದ ಹಬ್ಬಗಳಲ್ಲಿ ಮಾನವರ ಆರೋಗ್ಯಕರವಾದ ಬದುಕು ಇದೆ ಎಂದು ಪೂಜ್ಯ ಶ್ರೀ ಒಪ್ಪತ್ತೇಶ್ವರ ಸ್ವಾಮಿಗಳು ಅವರು ಹೇಳಿದರು.

ಅವರು ಗುಳೇದಗುಡ್ಡ ಹತ್ತಿರದ ತೆಗ್ಗಿ ಗ್ರಾಮದ ದಿ.ಮುತ್ತಪ್ಪ ಬಸಪ್ಪ ಕಾಳನ್ನವರ ಹೊಲದಲ್ಲಿ ಉತ್ತರ ಕರ್ನಾಟಕ ವಿಶ್ವಕರ್ಮ ಯುವ ಬರಹಗಾರರ ಮತ್ತು ಸಂಶೋಧಕರ ವೇದಿಕೆ ಕಮಾಲಾಪೂರ (ಬೆಣ್ಣುರು) ಹಾಗೂ ತೆಗ್ಗಿ ಗ್ರಾಮದ ಕಾಳನ್ನವರ ಪರಿವಾರದವರ ಸಹಯೋಗದಲ್ಲಿ 2025 ರ ಎಳ್ಳ ಅಮವಾಸ್ಯೆ ಚರಗ ಚೆಲ್ಲುವ ಸಂಭ್ರಮ ಹಾಗೂ ಪ್ರಾಧ್ಯಾಪಕರಾದ ಡಾ.ವೀರೇಶ ಬಡಿಗೇರ ಅವರ ಜಾನಪದ ಗೊಂಚಲು ಪುಸ್ತಕ ಲೋಕಾರ್ಪಣೆ ಹಾಗೂ ಜಾನಪದ ಗೀತ ಗಾಯನ ಮತ್ತು ರಾಜ್ಯ ಮಟ್ಟದ ಪ್ರಶಸ್ತಿ ಪುರಸ್ಕೃತ ಶ್ರೀಮತಿ ಬಸವರಾಜೇಶ್ವರ ಕುಬಕಡ್ಡಿ ಅವರಿಗೆ ಅಭಿನಂದನಾ ಸಮಾರಂಭ ದಿವ್ಯ ಸಾನಿಧ್ಯವಹಿಸಿ ಮಾತನಾಡಿದ ಅವರು. ನಮ್ಮ ಹಿರಿಯರು ನಡೆಸಿಕೊಂಡು ಬಂದಿರುವ ಸಂಪ್ರದಾಯವನ್ನು ನಾಡಿನ ರೈತ ಕುಟುಂಬಗಳು ಇಂದಿಗೂ ಆಚರಣೆಗಳ ಮೂಲಕ ಉಳಿಸಿ ಬೆಳೆಸಿಕೊಂಡು ಬಂದಿರುವ ಫಲವಾಗಿ ನಾವಿಂದು ಭೂತಾಯಿಗೆ ವಿಶೇಷ ಪೂಜೆ ಸಲ್ಲಿಸುತ್ತಿದ್ದೇವೆ ಎಂದರು.

ಎಳ್ಳ ಅಮವಾಸ್ಯೆಯ ಚರಗ ಚೆಲ್ಲುವ ಸಂಭ್ರಮ 2025ರ ಕಾರ್ಯಕ್ರಮ ಉದ್ಘಾಟಿಸಿದ ಮಾಜಿ ಶಾಸಕ ಎಂ.ಕೆ.ಪಟ್ಟಣಶೆಟ್ಟಿ ಅವರು ಮಾತನಾಡಿ, ನಮ್ಮ ರೈತರು ಆಚರಿಸುವ ಹಬ್ಬಗಳು ವೈಶಿಷ್ಟ್ಯ ಪೂರ್ಣವಾಗಿವೆ, ಬಗೆಬಗೆಯ ಆಹಾರಪದಾರ್ಥಗಳನ್ನು ಮನೆಯಲ್ಲಿ ತಯಾರಿಸಿ ಭೂತಾಯಿಗೆ ಎಡೆ ಮಾಡಿ ಚರಗ ಚೆಲ್ಲುವ ನೆಲಮೂಲ ಸಂಸ್ಕೃತಿಯ ಮೌಲ್ಯಗಳನ್ನು ಮುಂದಿನ ಪೀಳಿಗೆಗೆ ನೀಡುವ ಜವಾಬ್ದಾರಿ ನಮ್ಮದಾಗಬೇಕೆಂದು ಹೇಳಿದರು.

ವಿಶ್ರಾಂತ ಉಪನಿರ್ದೇಶಕರಾದ ಸಿದ್ಧರಾಮ ಮನಹಳ್ಳಿ ಅವರು ಡಾ.ವೀರೇಶ ಬಡಿಗೇರ ಅವರ ಜಾನಪದ ಗೊಂಚಲು ಪುಸ್ತಕ ಲೋಕಾರ್ಪಣೆ ಮಾಡಿ ಮಾತನಾಡಿ, ವಿಶ್ವದಲ್ಲಿಯೇ ನಮ್ಮ ಭಾರತೀಯ ಹಾಗೂ ಕನ್ನಡ ನೆಲೆದ ಪ್ರಾಚೀನತೆಯ ಸಂಸ್ಕೃತಿ ಮತ್ತು ಧರ್ಮ ಪೂಜ್ಯನೀಯವಾಗಿದೆ. ಕನ್ನಡ ನೆಲೆದ ಸಾಂಸ್ಕೃತಿಕವಾದ ಮೌಲ್ಯಗಳನ್ನು ದೇಶಿಯ ಹಬ್ಬಗಳ ಮೂಲಕ ನಮ್ಮ ಬದುಕಿನಲ್ಲಿ ಭದ್ರವಾಗಿಟ್ಟಿವೆ. ದೇಶಿಯ ಸಂಸ್ಕೃತಿಯನ್ನು ಅನಾವರಣ ಮಾಡುವ ಎಳ್ಳ ಅಮವಾಸ್ಯೆ ವೈಶಿಷ್ಟ್ಯತೆಯಿಂದ ಕೂಡಿದೆ ಎಂದು ಹೇಳಿದರು.

ಜಾನಪದ ವಿದ್ವಾಂಸರಾದ ಡಾ.ಪ್ರಕಾಶ ಖಾಡೆ ಅವರು ಜಾನಪದ ಗೊಂಚಲು ಪುಸ್ತಕ ಪರಿಚಯ ಮಾಡಿ ಮಾತನಾಡಿ ನಮ್ಮ ಜನಪದರ ಬದುಕು ಅನ್ನ ನೀಡುವ ಮಣ್ಣು ಪೂಜಿಸುವ ಬದುಕಾಗಿದ್ದು, ರೈತರ ಆಚರಣೆಗಳ ಪ್ರತಿಯೊಂದು ಹಬ್ಬಗಳು ಭುತಾಯಿಯ ಮಣ್ಣಿನೊಂದಿಗೆ ಬೆರೆತುಕೊಂಡಿವೆ. ಜನಪದರ ಜೀವನ ಮೌಲ್ಯಗಳು ಡಾ.ವೀರೇಶ ಬಡಿಗೇರ ಅವರ ಜನಾಪದ ಗೊಂಚಲು ಪುಸ್ತಕದಲ್ಲಿವೆ ಎಂದರು. ಮುಖ್ಯ ಅತಿಥಿಗಳಾಗಿ ಪ್ರಾಂಶುಪಾಲರಾದ ಡಾ.ಶರಣಗೌಡ ಪಾಟೀಲ ಅವರು ಮಾತನಾಡಿ ನಮ್ಮ ರೈತ ಪರಿವಾರವು ಹಬ್ಬಗಳ ಮೂಲಕ ಕನ್ನಡ ನೆಲೆದ ದೇಶಿಯ ಸಂಸ್ಕೃತಿಯನ್ನು ಉಳಿಸಿಕೊಂಡು ಸಾಧ್ಯವಾಗಿದೆ. ಇದರಿಂದ ನಾವು ಭಾವನಾತ್ಮಕವಾಗಿ ಬಾಂಧವ್ಯ ಬೆಸೆಯಲು ಸಾಧ್ಯವಾಗುವುದು ಎಂದರು.

ಡಾ.ಚಂದ್ರಶೇಖರ ಕಾಳನ್ನವರ ಪ್ರಾಸ್ತಾವಿಕವಾಗಿ ಮಾತನಾಡಿ ನಮ್ಮ ರೈತರ ಪರಂಪರೆಯಲ್ಲಿ ಬರುವ ದೇಶಿಯ ಹಬ್ಬಗಳು ಬದುಕು ಸುಂದರಗೊಳಿಸುತ್ತವೆ. ನಾಡಿನ ಹಿರಿಯ ಸಂಶೋಧಕರಾದ ಡಾ.ವೀರೇಶ ಬಡಿಗೇರ ಅವರು ನಮ್ಮ ಉತ್ತರ ಕರ್ನಾಟಕದ ವಿಶೇಷ ಹಬ್ಬವಾದ ಎಳ್ಳ ಅಮವಾಸ್ಯೆಗೆ ಹೊಸತನ ಸ್ಪರ್ಶ ನೀಡಿ, ಪ್ರತಿ ವರ್ಷವೂ ಚರಗ ಚೆಲ್ಲುವ ಕಾರ್ಯಕ್ರಮದಲ್ಲಿ ಸಾಹಿತ್ಯ, ಸಂಗೀತದೊಂದಿಗೆ ಸಹಭೋಜನದ ಮಹತ್ವವನ್ನು ನಮ್ಮಲ್ಲಿ ಗಟ್ಟಿಗೊಳಿಸಿದ್ದಾರೆ ಎಂದರು ಅಧ್ಯಕ್ಷತೆ ವಹಿಸಿದ ಪ್ರಾಂಶುಪಾಲರಾದ ಡಾ.ಅರುಣಕುಮಾರ ಗಾಳಿ ಅವರು ಮಾತನಾಡಿ, ಮನುಷ್ಯನ ಸುಂದರ ಜೀವನಕ್ಕೆ ಬೇಕಾದ ಜ್ಞಾನ ಸಂಪತ್ತು, ಅರಿವು ನಮ್ಮ ಮಣ್ಣಿನ ಗುಣಧರ್ಮದಲ್ಲಿದೆ. ನಾವೆಲ್ಲರೂ ಪರಸ್ಪರ ಕೂಡಿಕೊಂಡು ಹಬ್ಬಗಳನ್ನು ಆಚರಿಸುವದರಿಂದ, ಸಂಭ್ರಮಿಸುವದರಿಂದ ಆನಂದಮಯ ಬದುಕು ನಮ್ಮದಾಗುವುದು ಎಂದು ಹೇಳಿದರು

ಜಾನಪದ ಸಂಜೀವಿನ ಗವಿಸಿದ್ದಯ್ಯ ಹಳ್ಳಿಕೇರಿಮಠ ಅವರು ಭೂತಾಯಿ ಕುರಿತಾದ ಜಾನಪದ ಗೀತಗಾಯನ ಚರಗ ಚೆಲ್ಲುವ ಸಂಭ್ರಮಕ್ಕೆ ಮೆರುಗೆ ತಂದಿತು. ರಾಜ್ಯಮಟ್ಟದ ಅತ್ಯತ್ತಮ ಅಂಗನಾವಡಿ ಕಾರ್ಯಕರ್ತೆ ಪ್ರಶಸ್ತಿ ಪುರಷ್ಕೃತೆ ಬಸವರಾಜೇಶ್ವರಿ ಕುಬಕಡ್ಡಿ ಅವರಿಗೆ ಪುಜ್ಯರು, ಗಣ್ಯರು, ಬಂಧು ಬಳಗದವರು ಗೌರವ ಸನ್ಮಾನ ಮಾಡಿ ಅಭಿನಂದಿಸಿದರು. ಪ್ರೊ.ಸಂಗಮೇಶ ಬ್ಯಾಳಿ ಕಾರ್ಯಕ್ರಮ ನಿರೂಪಿಸಿದರು, ಶೇಖರ ಗೊಳಸಂಗಿ ವಂದಿಸಿದರು.

ಭೂತಾಯಿಗೆ ಚರಗ ಚೆಲ್ಲುವ ಕಾರ್ಯಕ್ರಮದಲ್ಲಿ ಆನಂದ ದಲಬಂಜನ್, ಸಾಹಿತಿಗಳಾದ ಡಾ.ಸಿ.ಎಂ.ಜೋಶಿ, ಡಾ.ಸಣ್ಣವೀರಣ್ಣ ದೊಡ್ಡಮನಿ ಮಲ್ಲಿಕಾರ್ಜುನ ಶೆಲ್ಲಿಕೇರಿ, ಪಾಂಡುರಂಗ ಸಣ್ಣಪ್ಪನವರ, ಸಂಜಯ ನಡುವಿನಮನಿ, ಡಾ.ಮಲ್ಲಿಕಾರ್ಜುನ ಇಂಚಲ, ಡಾ.ರಾಜಶೇಕರ ಬಿರಾದಾರ, ಡಾ.ಹೆಚ್.ಎಸ್ ಘಂಟಿ, ವಕೀಲರಾದ ವೀರಯ್ಯ ಮಣ್ಣೂರಮಠ, ಸಿದ್ದು ಕುಬಕಡ್ಡಿ, ಸಂಗಮೇಶ ಬಡಿಗೇರ, ಯಲ್ಲಪ್ಪ ಶೆಡ್ಲಗೇರಿ, ಮತ್ತು ಕನ್ನಡ ಸಾಂಸ್ಕೃತಿಕ ಮನಸ್ಸುಗಳು ಪಾಲ್ಗೊಂಡಿದ್ದರು. ಎಳ್ಳ ಅಮವಾಸ್ಯೆ ವಿಶೇಷ ಅಹಾರ: ರೈತರು ತಮ್ಮ ಮನೆಯಲ್ಲಿ ಭೋಜನದ ಆಹಾರ ಪದಾರ್ಥಗಳಾದ ಎಳ್ಳು ಹೋಳಿಗೆ, ಕರ್ಚಿಕಾಯಿ, ಶೇಂಗಾದ ಹೋಳಿಗೆ, ಎಳ್ಳು ಹಚ್ಚಿ ಮಾಡಿದ ಕಡಕ ಸಜ್ಜುರೊಟ್ಟಿ, ಚಪಾತಿ, ಎಣ್ಣೆ ಬದನೆಕಾಯಿ ಪಲ್ಯೆ, ಹೆಸರಕಾಳು, ಮಡಿಕೆಕಾಳು, ಕುಚಗಡಬು, ಸಂಡಿಗೆ, ಶೇಂಗಾ ಚಟ್ನಿ, ಗುರೆಳ್ಳ ಚಟ್ನಿ, ಮೊಸರು, ತುಪ್ಪಾ, ಮೂಲಂಗಿ ಸೊಪ್ಪು, ಮೇಂತೆಪಲ್ಯೆ, ಗಜ್ಜರಿ, ಸೌತಿಕಾಯಿ, ಉಳ್ಳಾಗಡ್ಡಿ, ಹಕ್ಕರಿಕಿ ಪಲ್ಯೆ ಮುಂತಾದ ದೇಶಿಯ ಪದಾರ್ಥಗಳನ್ನು ಎಳ್ಳು ಅಮವಾಸ್ಯೆ ಹೊಲದಲ್ಲಿಯ ಊಟಕ್ಕಾಗಿ ಸಿದ್ದಪಡಿಸುವುದು ವಿಶೇಷವಾಗಿರುತ್ತದೆ.

**ಭೂತಾಯಿಗೆ ವಿಶೇಷ ಪೂಜೆ** : ಉತ್ತರ ಕರ್ನಾಟಕ ಭಾಗದ ರೈತರು ತಮ್ಮ ಹೊಲಗಳಲ್ಲಿ ಎಳ್ಳು ಅಮವಾಸ್ಯೆ ದಿನದಂದು ತಮ್ಮ ಹೊಲದಲ್ಲಿಯ ಬನ್ನಿಗಿಡಕ್ಕೆ ನೈವೇದ್ಯ ಮಾಡಿ, ಜೋಳದ ದಂಟುಗಳ ಕೆಳಗೆ ಐದು ಪಾಂಡವರನ್ನು ಮಾಡಿ ಪೂಜೆ ಸಲ್ಲಿಸಿ ನಂತರ



ಡಾ.ವೀರೇಶ ಬಡಿಗೇರ ಅವರ ಜಾನಪದ ಗೊಂಚಲು ಪುಸ್ತಕ ಬಿಡುಗಡೆ ಹಾಗೂ ಜಾನಪದ ಗೀತ ಸಂಭ್ರಮ

# ದಿ. ಮಲ್ಲಪ್ಪ ಚಿಗನೂರ ಅವರ ಭಾವಪೂರ್ಣ ಶ್ರದ್ಧಾಂಜಲಿ



**ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ:** ನಗರದ ಡಾ. ಬಾಬು ಜಗಜೀವನ್ ರಾಮ್ ಅವರ ಮೂರ್ತಿ ಆವರಣದಲ್ಲಿ ದಿ. ಮಲ್ಲಪ್ಪ ಚಿಗನೂರ ಅವರ ನಿಧನರಾದ ಹಿನ್ನೆಲೆಯಲ್ಲಿ ಅವರ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ಮಾದಿಗ ಸಮಾಜದ ಮುಖಂಡ ಮಲ್ಲಿಕಾರ್ಜುನ್ ಜಿನಕೇರಿ ಮಾತನಾಡಿ ಸಮಾಜದ ಉನ್ನತಿಗಾಗಿ ಸದಾ ಕಳಕಳಿ ಹೊಂದಿದ್ದ ಮಲ್ಲಪ್ಪ ಚಿಗನೂರವರು ನಮ್ಮನ್ನೆಲ್ಲಾ ಅಗಲಿದ್ದಾರೆ ಎಂದು ಮಾದಿಗ ಸಮಾಜಕ್ಕೆ ಸುದ್ದಿ ಅತ್ಯಂತ ದುಃಖಕರವಾಗಿದೆ. ಅವರ ಅಗಲಿಕೆಯಿಂದ ಮಾದಿಗ ಸಮಾಜಕ್ಕೂ ಹಾಗೂ ಸಮಸ್ತ ಸಮಾಜಕ್ಕೂ ಅಪಾರ ನಷ್ಟ ಉಂಟಾಗಿದೆ ಎಂದು ತಿಳಿಸಿದ್ದಾರೆ.

ಈ ಸಂದರ್ಭದಲ್ಲಿ ಸಮಾಜದ ಮುಖಂಡರಾದ ದಶರಥ ಕಲಗುರ್ತಿ, ಅಂಬರಾಯ ಬೆಳಕೋಟಿ, ಬಂಡೇಶ್ ರತ್ನಡಗಿ, ನಾಗೇಂದ್ರ ರತ್ನಡಗಿ, ಸುಭಾಷ್ ರತ್ನಡಗಿ, ಹಣಮಂತ ಕಂದಳ್ಳಿ, ಪ್ರಕಾಶ್ ಮಾಳಗೆ, ಪೃಥ್ವಿರಾಜ ಎಸ್ ರಾಂಪುರ, ಸೂರಜ ಬೆಳಗುಂದಿ, ಜನ್ನಪ್ಪ ಶಿವನೂರ್, ಕೃಷ್ಣ ತಂಗಡಗಿ ಸೇರಿದಂತೆ ಸಮಾಜದ ಹಿರಿಯ ಮುಖಂಡರು ಉಪಸ್ಥಿತರಿದ್ದರು.

# ಬೆಂಬಲ ಬೆಲೆ ಯೋಜನೆಯಡಿ ತೊಗರಿ ಖರೀದಿಗೆ ಜಿಲ್ಲಾ ಟಾಸ್ಕ್ ಫೋರ್ಸ್ ಸಭೆ ಒಪ್ಪಿಗೆ

**ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ:** ಪ್ರಸಕ್ತ 2025-26ನೇ ಸಾಲಿನ ಕೇಂದ್ರ ಸರ್ಕಾರದ ಬೆಂಬಲ ಬೆಲೆ ಯೋಜನೆಯಡಿಯಲ್ಲಿ ತೊಗರಿ ಖರೀದಿಗೆ ರಾಜ್ಯ ಸರ್ಕಾರ ಆದೇಶಿಸಿರುವುದರಿಂದ ಗುರುವಾರ ಜಿಲ್ಲಾಧಿಕಾರಿ ಬಿ.ಫೌಜಿಯಾ ತರನ್ನುಮ್ ಅವರ ಅಧ್ಯಕ್ಷತೆಯಲ್ಲಿ ಜರುಗಿದ ಜಿಲ್ಲಾ ಮಟ್ಟದ ಟಾಸ್ಕ್ ಫೋರ್ಸ ಸಭೆಯಲ್ಲಿ ಬೆಂಬಲ ಬೆಲೆ ಯೋಜನೆಯಡಿ ರೈತರಿಂದ ತೊಗರಿ ಖರೀದಿಗೆ ಸಭೆ ಒಪ್ಪಿಗೆ ಸೂಚಿಸಿದೆ.

ಪ್ರತಿ ಕ್ವಿಂಟಾಲಗೆ 8,000 ರೂ. ಮತ್ತು ಪ್ರತಿ ಎಕರೆಗೆ 4 ಕ್ವಿಂಟಲ್ ನಂತೆ ಈಖಗಃಖಖಿಖತಂತ್ರಾಂಶದಲ್ಲಿ ಲಭ್ಯವಾಗುವ ರೈತರು ತೊಗರಿ ಬೆಳೆದ ಜಮೀನಿನ ವಿಸ್ತೀರ್ಣಕ್ಕೆ ಅನುಗುಣವಾದ ಪ್ರಮಾಣದಲ್ಲಿ ತೊಗರಿಯನ್ನು ಖರೀದಿಸಲು ಸಭೆ ಅನುಮತಿ ನೀಡಿದೆ.

ಈ ಸಂದರ್ಭದಲ್ಲಿ ಡಿ.ಸಿ ಬಿ.ಫೌಜಿಯಾ ತರನ್ನುಮ್ ಮಾತನಾಡಿ, ನಫೆಡ್ ಸಂಸ್ಥೆಯು ನೊಂದಾಯಿತ ರೈತರಿಂದ ಬೆಂಬಲ ಬೆಲೆ ದರಕ್ಕಿಂತ ಹೆಚ್ಚಿನ ಮಾರುಕಟ್ಟೆ ಧಾರಣೆ ಇದ್ದಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಇ-ಆಕ್ಷನ ಪೋರ್ಟಲ್ ಹಾಗೂ ಮುಕ್ತ ಮಾರುಕಟ್ಟೆಯಲ್ಲಿ ಬಫರ್ ಸ್ಟಾಕ ಉದ್ದೇಶಕ್ಕಾಗಿ ಬೆಂಬಲ ಬೆಲೆಗಿಂತ ಹೆಚ್ಚಿನ ದರದಲ್ಲಿ ಖರೀದಿ ಕೈಗೊಳ್ಳುತ್ತಾರೆ ಎಂದರು.

ಇನ್ನು ಕಲಬುರಗಿ ಜಿಲ್ಲೆಗೆ ತೊಗರಿ ಖರೀದಿಸಲು ಕರ್ನಾಟಕ ರಾಜ್ಯ ದ್ವಿದಳ ಧಾನ್ಯ ಅಭಿವೃದ್ಧಿ ಮಂಡಳಿ ಕಲಬುರಗಿ ಹಾಗೂ ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾ ಮಂಡಳಿ ಕಲಬುರಗಿ ಸಂಸ್ಥೆಯನ್ನು ರಾಜ್ಯ ಖರೀದಿ ಸಂಸ್ಥೆಗಳಾಗಿ ನೇಮಿಸಲಾಗಿದ್ದು, ಜಿಲ್ಲೆಯಲ್ಲಿ ಒಟ್ಟು 141 ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘಗಳು ಹಾಗೂ ಎಫ್.ಪಿ.ಓ ಗಳ ಮೂಲಕ ತೊಗರಿ ಖರೀದಿ ಮಾಡಲಾಗುತ್ತದೆ. ಖರೀದಿ ಕೇಂದ್ರಗಳಲ್ಲಿ ಪಿ.ಓ.ಎಸ್. ಯಂತ್ರದ ಮೂಲಕ ರೈತರ ನೋಂದಣಿ ಹಾಗೂ ಖರೀದಿ ಪ್ರಕ್ರಿಯೆಯಲ್ಲಿ ಆಧಾರ್ ಬಯೋ ಮೇಟ್ರಿಕ್ ಪಡೆಯುವುದು ಕಡ್ಡಾಯವಾಗಿದ್ದು, ರೈತರು ಸಹಕರಿಸಬೇಕೆಂದು ಡಿ.ಸಿ ಮನವಿ ಮಾಡಿದ್ದಾರೆ.

**ಮಾರ್ಚ್ 6ರವರೆಗೆ ನೋಂದಣಿ, 16ರ ವರೆಗೆ ಮಾರಾಟಕ್ಕೆ ಅವಕಾಶ:** ಬೆಂಬಲ ಬೆಲೆ ಯೋಜನೆಯಡಿ ತೊಗರಿ ಖರೀದಿಗೆ ಸರ್ಕಾರ




ಅವಧಿ ನಿಗಧಿ ಮಾಡಿದ್ದು, ರೈತರ ನೊಂದಣಿ ಕಾರ್ಯ ಮಾರ್ಚ್ 6ರ ವರೆಗೆ ನಡೆಯಲಿದೆ. ಇನ್ನು ನೋಂದಣಿಯಾದ ರೈತರಿಂದ ತೊಗರಿ ಪ್ರಕ್ರಿಯೆ ಮಾರ್ಚ್ 16ರ ವರೆಗೆ ಸಾಗಲಿದೆ. ರೈತರಿಂದ ಖರೀದಿಸಿದ ಉತ್ಪನ್ನದ ಮೌಲ್ಯವನ್ನು ಡಿ.ಬಿ.ಟಿ ಪೋರ್ಟಲ್ ಮೂಲಕ ರೈತರ ಬ್ಯಾಂಕ್ ಖಾತೆಗೆ ಪಾವತಿಸಲಾಗುವುದು ಎಂದು ಡಿ.ಸಿ. ಬಿ.ಫೌಜಿಯಾ ತರನ್ನುಮ್ ತಿಳಿಸಿದ್ದಾರೆ. ಜಿಲ್ಲೆಯ ರೈತ ಭಾಂದವರು ಸಮೀಪದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಿಗೆ, ಎಫ್.ಪಿ.ಓ ಗಳಿಗೆ ಹಾಗೂ ಎ.ಪಿ.ಎಂ.ಸಿ ಯಲ್ಲಿನ ತೊಗರಿ ಖರೀದಿ ಕೇಂದ್ರಗಳಿಗೆ ಭೇಟಿ ನೀಡಿ ಬೆಳೆದ ತೊಗರಿ ನಿಗದಿತ

ಅವಧಿಯಲ್ಲಿ ಮಾರಾಟಕ್ಕೆ ನೊಂದಾಯಿಸಿಕೊಂಡು ಮಾರಾಟ ಮಾಡುವ ಮೂಲಕ ಯೋಜನೆಯ ಲಾಭ ಪಡೆಯುವಂತೆ ಟಾಸ್ಕ್ ಫೋರ್ಸ್ ಸಮಿತಿಯ ಅಧ್ಯಕ್ಷರಾಗಿರುವ ಜಿಲ್ಲಾಧಿಕಾರಿಗಳು ಮನವಿ ಮಾಡಿದೆ. ಇನ್ನು ಖರೀದಿ ಮತ್ತು ನೋಂದಣಿಗೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿಗೆ ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾ ಮಂಡಳಿ ಕಲಬುರಗಿ ಮೊ.ನಂ. 9449864446 ಮತ್ತು ಕರ್ನಾಟಕ ರಾಜ್ಯ ದ್ವಿದಳ ಧಾನ್ಯ ಅಭಿವೃದ್ಧಿ ಮಂಡಳಿ ಕಲಬುರಗಿ ಮೊ.ನಂ. 9964474444 ಸಂಪರ್ಕಿಸಬಹುದಾಗಿದೆ. ಸಭೆಯಲ್ಲಿ ಜಂಟಿ ಕೃಷಿ ನಿರ್ದೇಶಕ ಸಮದ್ ಪಟೇಲ್, ಸಹಕಾರ ಸಂಘಳ ಉಪನಿಬಂಧಕ ಕಿಶೋರ ಪಾಟೀಲ, ಕೃಷಿ ಉತ್ಪನ್ನ ಮಾರುಕಟ್ಟೆ ಇಲಾಖೆಯ ಸಹಾಯಕ ನಿರ್ದೇಶಕ ಸಂತೋಷ ಸೇರಿದಂತೆ ತೊಗರಿ ಅಭಿವೃದ್ಧಿ ಮಂಡಲಿ, ಖರೀದಿ ಏಜೆನ್ಸಿಗಳ ಅಧಿಕಾರಿಗಳು ಇದ್ದರು.

# ತಹಸೀಲ್ದಾರ ಕಚೇರಿಯಲ್ಲಿಯೇ ಈಗ ಆಧಾರಕಾರ್ಡ್ ಸೇವೆ : ವಿದ್ಯಾರ್ಥಿಗಳಿಗೆ ಮೊದಲ ಆದ್ಯತೆ

**ಮಲ್ಲಮ್ಮ ನುಡಿ ವಾರ್ತೆ**

**ಅಂಕೋಲಾ :** ತಹಸೀಲ್ದಾರ ಕಚೇರಿಯಲ್ಲಿ ಆಧಾರ್ ಕಾರ್ಡ್ ಸೇವೆ ಇದೀಗ ಪುನಃ ಪ್ರಾರಂಭಗೊಂಡಿದೆ. ಈ ಹಿಂದಿನ ದಿನಗಳಲ್ಲಿ ಕಚೇರಿಯಲ್ಲಿನ ಆಧಾರ್ ಸೇವೆ ಸ್ಥಗಿತಗೊಂಡಿದ್ದರಿಂದ ಶಾಲಾ ಮಕ್ಕಳು ದೂರದ ಬೆಲೇಕೆರಿ ಹೋಬಳಿ ನಾಡಕಚೇರಿಗೆ ತೆರಳಬೇಕಾಗಿತ್ತು. 18 ವರ್ಷ ಮೇಲ್ಪಟ್ಟವರು ಕಾರವಾರಕ್ಕೆ ಹೋಗಬೇಕಾಗಿತ್ತು. ಈ ಹಿನ್ನೆಲೆಯಲ್ಲಿ ತಹಸೀಲ್ದಾರ ಡಾ. ಚಿಕ್ಕಪ್ಪ ನಾಯಕ ವಿಶೇಷ ಕಾಳಜಿಯಿಂದ



ಈಗ ಪುನಃ ಕಚೇರಿಯಲ್ಲಿಯೇ ಆಧಾರಕಾರ್ಡ್ ಘಟಕವನ್ನು ತೆರೆದಿದ್ದಾರೆ.

ಶುಕ್ರವಾರ ಆಧಾರ್ ಕಾರ್ಡ್ ಸೇವೆ ಅಧಿಕೃತವಾಗಿ ಪ್ರಾರಂಭಗೊಂಡಿದ್ದು, ಪ್ರಾರಂಭಿಕ ಹಂತದಲ್ಲಿ ವಿದ್ಯಾರ್ಥಿಗಳಿಗೆ ಮೊದಲ ಆದ್ಯತೆ ನೀಡಲಾಗುತ್ತದೆ. ಇದರಿಂದಾಗಿ ಅಂಕೋಲಾ ಹಾಗೂ ಸುತ್ತಮುತ್ತಲಿನ ಗ್ರಾಮಗಳ ನಾಗರಿಕರಿಗೆ ಅನುಕೂಲವಾಗಿದೆ. ಸ್ಥಳೀಯರು ತಹಸೀಲ್ದಾರ ಅವರ ಕಾಳಜಿಯ ಬಗ್ಗೆ ಜನರು ಹರ್ಷ ವ್ಯಕ್ತಪಡಿಸಿದ್ದಾರೆ.

# ಜಿಲ್ಲೆಯ ಕಡಲ ತೀರದಲ್ಲಿ ಈ ಬಾರಿಯ ಮೊದಲ ಆಮೆಯ ಗೂಡು ಪತ್ತೆ

ಮಲ್ಲಮ್ಮ ನುಡಿ ವಾರ್ತೆ

ಅಂಕೋಲಾ : ಡಿಸೆಂಬರ್ ತಿಂಗಳಲ್ಲಿ ಆಮೆಗಳು ಮೊಟ್ಟೆಯಿಡುವ ಸಮಯವಾಗಿದ್ದು, ರೆಡ್ಲೆ ಎನ್ನುವ ಆಮೆ ಶ್ರೀಲಂಕಾದಿಂದ ವಲಸೆ ಬಂದು ರಾಜ್ಯದ ಕಡಲ ತೀರಗಳಲ್ಲಿ ಮೊಟ್ಟೆಯಿಟ್ಟು ಪುನಃ ತೆರಳುತ್ತದೆ. ಈಗ ಜಿಲ್ಲೆಯಲ್ಲಿ ಪ್ರಥಮ ಬಾರಿಗೆ ಮಂಜಗುಣಿ ಸಮುದ್ರ ತೀರದ ಉಸುಕಿನಲ್ಲಿ ಮೊಟ್ಟೆಯಿಟ್ಟು ತೆರಳಿದ ಗೂಡನ್ನು ಸ್ಥಳೀಯರು ಗುರುತಿಸಿ ಇಲಾಖೆಯವರಿಗೆ ಮಾಹಿತಿ ನೀಡಿದ್ದರು.

ಅದರಂತೆ ಉಪ ಅರಣ್ಯ ಸಂರಕ್ಷಣಾಧಿಕಾರಿ ರವಿ ಶಂಕರ ಅಂಕೋಲಾ ಉಪ ವಿಭಾಗದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಜಯೇಶ ಸಿ. ವಲಯ ಅರಣ್ಯಾಧಿಕಾರಿಗಳಾದ ಪ್ರಮೋದ, ಕಿರಣ, ಕೋಸ್ಟಲ್ ಮತ್ತು ಮರೈನ್ ಇಕೋ ಸಿಸ್ಟಮ್ ಘಟಕದ ಸಿಬ್ಬಂದಿಗಳು ಸ್ಥಳಕ್ಕೆ ಭೇಟಿ ನೀಡಿ ಗೂಡಿಗೆ ಸಂರಕ್ಷಣೆ ಒದಗಿಸಿದ್ದಾರೆ. ಹಾಗೇ ಗೂಡು ಗುರುತಿಸಿದ್ದ ಯುವಕನಿಗೆ 1 ಸಾವಿರ ಪ್ರೋತ್ಸಾಹ ಧನವನ್ನು ನೀಡಿದರು.



# ಕಾರು ಡಿಕ್ಕಿ ಪಾದಚಾರಿಗೆ ಗಂಭೀರ ಗಾಯ




**ಮಲ್ಲಮ್ಮ ನುಡಿ ವಾರ್ತೆ ಕಮಲನಗರ:** ರಾಷ್ಟ್ರೀಯ ಹೆದ್ದಾರಿ ತಾಲೂಕಿನ ಡಿಗ್ಗಿ ಗ್ರಾಮದ ಬಳಿ ಶುಕ್ರವಾರ ಸಂಜೆ ಅಪರಿಚಿತ ಕಾರೊಂದು ಪಾದಚಾರಿಗೆ ಡಿಕ್ಕಿ ಹೊಡೆದ ಪರಿಣಾಮ ಗಂಭೀರ ಗಾಯಗೊಂಡ ಘಟನೆ ಜರುಗಿದೆ.

ಹಾಲು ತೆಗೆದುಕೊಂಡು ಮನೆಗೆ ತೆರಳುತ್ತಿದ್ದ ಸಂದರ್ಭದಲ್ಲಿ ಅಪರಿಚಿತ ಕಾರು ಡಿಕ್ಕಿ ಹೊಡೆದ ಪರಿಣಾಮ, ಈ ಅಪಘಾತದಲ್ಲಿ ಭೀಮರಾವ(39) ಎಂಬಾತನನ್ನು ಗಂಭೀರವಾಗಿ ಗಾಯಗೊಂಡ ದುರ್ದೈವಿ ಎಂದು ಗುರುತಿಸಲಾಗಿದೆ.

ಗಾಯಗೊಂಡ ಭೀಮರಾವ ಅವರನ್ನು ಕಮಲನಗರ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಪ್ರಥಮ ಚಿಕಿತ್ಸೆ ನೀಡಿ, ಹೆಚ್ಚಿನ ಚಿಕಿತ್ಸೆಗಾಗಿ ಬೀದರ್ ಜಿಲ್ಲಾಸ್ಪತ್ರೆಗೆ ಕಳುಹಿಸಲಾಗಿದೆ ಎಂದು ಮೂಲಗಳಿಂದ ತಿಳಿದು ಬಂದಿದೆ.

ಘಟನಾ ಸ್ಥಳಕ್ಕೆ ಕಮಲನಗರದ ಪಿಎಸ್ಐ ಆಶಾ ರಾಠೋಡ್, ಪಿಎಸ್ಐ ಡೋಣಗಾಂವ್ ವಸಂತ, ಎಚ್.ಸಿ ಲೋಕೇಶ ತೆಲಂಗ್ ಸಿಬ್ಬಂದಿ ಭೇಟಿ ನೀಡಿ ಪರಿಶೀಲಿಸಿದರು. ಡಿಕ್ಕಿ ಹೊಡೆದು ಪರಾರಿಯಾದ ಕಾರು ಶೋಧ ಕಾರ್ಯ ಪಿಎಸ್ಐ ನೇತೃತ್ವದಲ್ಲಿ ತನಿಖೆ ಮುಂದುವರೆದಿದೆ ಎನ್ನಲಾಗಿದೆ.

# ಸಿಪೆಟ್ ಉದ್ಯೋಗಾಧಾರಿತ ಡಿಪ್ಲೋಮಾ ಪ್ರವೇಶಕ್ಕೆ ಅರ್ಜಿ ಆಹ್ವಾನ

**ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:** ಮೈಸೂರಿನಲ್ಲಿರುವ ಕೇಂದ್ರೀಯ ಪೆಟ್ರೋಕೆಮಿಕಲ್ಸ್ ಇಂಜಿನಿಯರಿಂಗ್ ಮತ್ತು ತಂತ್ರಜ್ಞಾನ ಸಂಸ್ಥೆ (ಸಿಪೆಟ್) ಕೌಶಲ್ಯ ಮತ್ತು ತಾಂತ್ರಿಕ ತರಬೇತಿ ಕೇಂದ್ರಕ್ಕೆ 2026-27ನೇ ಸಾಲಿನ ಉದ್ಯೋಗಾಧಾರಿತ ಮತ್ತು ಉದ್ಯೋಗ ಖಚಿತ ಡಿಪ್ಲೋಮಾ ಕೋರ್ಸ್ ಗಳ ಪ್ರವೇಶಕ್ಕೆ ಆನ್ ಲೈನ್ ಮತ್ತು ಆಫ್ ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಸಿಪೆಟ್ ಸಂಸ್ಥೆಯು ಭಾರತ ಸರ್ಕಾರದ ರಸಾಯನ ಪೆಟ್ರೋರಸಾಯನ ಮತ್ತು ರಸಗೊಬ್ಬರ ಸಚಿವಾಲಯದ ಸ್ವಾಯತ್ತ ಸಂಸ್ಥೆಯಾಗಿದೆ. ಸಂಸ್ಥೆಯು ದೇಶದ ಪಾಲಿಮರ್, ಪೆಟ್ರೋಕೆಮಿಕಲ್ಸ್, ಪ್ಲಾಸ್ಟಿಕ್ಸ್ ಕೈಗಾರಿಕಾ ವಲಯಕ್ಕೆ ಬೇಕಾದ ಮಾನವ ಸಂಪನ್ಮೂಲಕ್ಕೆ ಶೈಕ್ಷಣಿಕ ತರಬೇತಿ ನೀಡಲಾಗುತ್ತಿದೆ ಮತ್ತು ಸಿಪೆಟ್ ಕರ್ನಾಟಕದ ವಿದ್ಯಾರ್ಥಿಗಳು ಪಾಲಿಮರ್ ಕೈಗಾರಿಕಾ ವಲಯದಲ್ಲಿ ಜಾಗತಿಕವಾಗಿ ಗುರುತಿಸಲ್ಪಟ್ಟಿದ್ದಾರೆ.

ಡಿಪ್ಲೋಮಾ ಇನ್ ಪ್ಲಾಸ್ಟಿಕ್ಸ್ ಟೆಕ್ನಾಲಜಿ, ಡಿಪ್ಲೋಮಾ ಇನ್ ಪ್ಲಾಸ್ಟಿಕ್ಸ್ ಮೌಲ್ಡ್ ಟೆಕ್ನಾಲಜಿ - 3 ವರ್ಷಗಳ ಕೋರ್ಸ್ ಗಳಿಗೆ ಅರ್ಜಿ ಸಲ್ಲಿಸಬಹುದು.

ಎಸ್.ಎಸ್.ಎಲ್.ಸಿ ಮತ್ತು ಪಿ.ಯು.ಸಿ ಪರೀಕ್ಷೆಯಲ್ಲಿ ತೇರ್ಗಡೆಯಾದವರು ಅರ್ಜಿ ಸಲ್ಲಿಸಬಹುದು ಹಾಗೂ ಆನ್‌ಲೈನ್ ವೆಬ್ ಸೈಟ್ https://cipet26.onlineregistration-form.org/CIPET/ ಮೂಲಕ ನೋಂದಣಿ ಮಾಡಿಕೊಳ್ಳಬಹುದು.

ಹೆಚ್ಚಿನ ಮಾಹಿತಿಗಾಗಿ ದೂ.0821-2510618, ಮೊ.9480253024, 9791431827ಗೆ ಸಂಪರ್ಕಿಸಬಹುದು. ಸಿಪೆಟ್ ಡಿಪ್ಲೋಮಾ ಪಡೆದ ಪ್ರತಿಯೊಬ್ಬ ವಿದ್ಯಾರ್ಥಿಗೂ ಕ್ಯಾಂಪಸ್ ನೇಮಕಾತಿಯ ಮೂಲಕ ಉದ್ಯೋಗಾವಕಾಶ ನೀಡಲಾಗುತ್ತದೆ ಎಂದು ಸಿಪೆಟ್ ಸಂಸ್ಥೆಯ ಪ್ರಿನ್ಸಿಪಾಲ್ ನಿರ್ದೇಶಕರು ಮತ್ತು ಮುಖ್ಯಸ್ಥರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ತುಳಸಿ ಗೌಡ ಒಂದು ವಿಶಾಲವಾದ ಆಲದಮರವಿದ್ದಂತೆ ಡಾ. ಚಿಕ್ಕಪ್ಪ ನಾಯಕ

**ಮಲ್ಲಮ್ಮ ನುಡಿ ವಾರ್ತೆ ಅಂಕೋಲಾ :** ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ವನದೇವತೆ ತುಳಸಿ ಗೌಡ ಅವರ ಈ ಪುಣ್ಯ ಸ್ಮರಣೆ ಅವರ ಹೊನ್ನಳ್ಳಿಯ ಮನೆಯಲ್ಲಿ ನಡೆಯಿತು. ಈ ಸಂದರ್ಭದಲ್ಲಿ ತಹಸೀಲ್ದಾರ ಡಾ. ಚಿಕ್ಕಪ್ಪ ನಾಯಕ ತುಳಸಿ ಗೌಡ ಅವರ ಮನೆಗೆ ತೆರಳಿ ಭಾವಚಿತ್ರ ಪುಷ್ಪಾರ್ಚನೆ ನೆರವೇರಿಸಿದರು.

ಡಾ. ಚಿಕ್ಕಪ್ಪ ನಾಯಕ ಮಾತನಾಡಿ, ತುಳಸಿ ಗೌಡ ಅವರು ಸುದೀರ್ಘ ಅವಧಿಯವರೆಗೆ ಸಾವಿರಾರು ಗಿಡಗಳನ್ನು ನೆಡುವವರ ಜತೆಗೆ ಯಾವ ಯಾವ ಪ್ರಬೇದದ ಗಿಡ ಎಂದು ತಕ್ಷಣ ಹೇಳಿಬಿಡುತ್ತಿದ್ದರು. ಇನ್ನು ಕೆಲವು ಪ್ರಬೇಧದ ಗಿಡದ ಬೀಜಗಳನ್ನು ನಾಟಿ ಮಾಡಲು ಸಾಧ್ಯವಿಲ್ಲ. ಆದರೆ ಅದನ್ನು ಹೇಗೆ ಮಾಡಬಹುದು ಎನ್ನುವುದು ತುಳಸಿ ಗೌಡರಿಗೆ ಖಚಿತಪಡಿಸಿ ಈ ಕಾರಣದಿಂದಲೇ ಅವರು ಇಷ್ಟು ಎತ್ತರಕ್ಕೆ ಬೆಳೆಯಲು ಕಾರಣವಾಯಿತು ಎಂದರು.

ಈ ಸಂದರ್ಭದಲ್ಲಿ ತುಳಸಿ ಗೌಡ ಅವರ ಮಕ್ಕಳು, ಮೊಮ್ಮಕ್ಕಳು ಕುಟುಂಬಸ್ಥರು ಸೇರಿದಂತೆ ಸ್ಥಳೀಯ ಸುತ್ತಮುತ್ತಲಿನವರು ಆಗಮಿಸಿದ್ದರು. ಶಿರಸ್ತೇದಾರ ಗಿರೀಶ ಜಾಂಬಾವಳಿಕರ, ಸಿಬ್ಬಂದಿ ಭಾರ್ಗವ ನಾಯ್ಕ ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ಗೋಕರ್ಣದ ಮುಖ್ಯ ಕಡಲತೀರದಲ್ಲಿ ಕಂಡುಬರುವ ವಿದ್ಯಾರ್ಥಿಗಳ ಸಂಭ್ರಮ





**ನಾಗರಾಜ ಮಂಜಗುಣಿ**

**ಮಲ್ಲಮ್ಮ ನುಡಿ ವಾರ್ತೆ**

**ಗೋಕರ್ಣ :** ಡಿಸೆಂಬರ್ ಅಂತ್ಯದೊಳಗೆ ಶೈಕ್ಷಣಿಕ ಪ್ರವಾಸ ಮುಗಿಸಬೇಕಿರುವುದರಿಂದ ಈಗ ಗೋಕರ್ಣದ ಕಡಲತೀರದಲ್ಲಿ ವಿವಿಧ ಶಾಲಾ ಮಕ್ಕಳು ಕಂಡುಬರುತ್ತಿದ್ದಾರೆ. ಬಹುತೇಕ ಉತ್ತರ ಕರ್ನಾಟಕ ಭಾಗದಿಂದ ಬರುವವರ ಸಂಖ್ಯೆ ಅಧಿಕವಾಗಿದೆ.

ಇಲ್ಲಿಗೆ ಬಂದ ನಂತರ ಗಣಪತಿ ದೇವರ, ಮಹಾಬಲೇಶ್ವರ ದರ್ಶನ ಪಡೆದ ನಂತರ ಅವರು ಮುಖ್ಯ ಕಡಲತೀರಕ್ಕೆ ತೆರಳುತ್ತಾರೆ. ಅಲ್ಲಿ ನೀರನ್ನು ನೋಡಿ ಅತಿಹೆಚ್ಚು ಸಂಭ್ರಮಿಸುತ್ತಾರೆ. ಹಾಗೇ ನೀರಿಗು ತೆರಳಿ ಖುಷಿಯಿಂದ ಮೋಜು ಮಾಡುತ್ತಾರೆ. ಹೀಗಾಗಿ ಇತರೆ ಪ್ರವಾಸಿಗರ ಜತೆಯಲ್ಲಿ ಶಾಲಾ ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬರುತ್ತಿದ್ದಾರೆ. ಹಾಗೇ ದೇವಸ್ಥಾನದಲ್ಲಿ ಊಟದ ವ್ಯವಸ್ಥೆ ಇರುವುದರಿಂದ ಅಲ್ಲಿ ಊಟ ಮಾಡಿ ನಂತರ ನಿರ್ಗಮಿಸುತ್ತಾರೆ.

ಸಂಜೆ ಸಂಘದಲ್ಲಿ ಸೂರ್ಯಾಸ್ತದ ಸೊಬಗನ್ನು ಸವಿಯಲು ಬಹುತೇಕ ಪ್ರವಾಸಿಗರು ಮತ್ತು ಶಾಲಾ ಮಕ್ಕಳು ಇಷ್ಟಪಡುತ್ತಾರೆ. ಹೀಗಾಗಿ ಕೆಲವರು ಸಂಜೆಯವರೆಗೂ ಕಾದು ಸೂರ್ಯಾಸ್ತ ಆದ ನಂತರವೇ ತೆರಳುತ್ತಾರೆ. ಒಂದಿಷ್ಟು ಫೋಟೋಗಳನ್ನು ತೆಗೆಸಿಕೊಂಡು ಸಂಭ್ರಮಿಸುತ್ತಾರೆ. ಈ ಕಡಲತೀರದಲ್ಲಿ ಭಕ್ತರ ಸಂಖ್ಯೆಯೇ ಹೆಚ್ಚಿರುತ್ತದೆ. ಸಹಜವಾಗಿ ಪ್ರವಾಸಕ್ಕೆ ಬರುವವರು ಇತರೆ ಬೀಚ್‌ಗಳಿಗೆ ತೆರಳುತ್ತಾರೆ. ಇದು ಮಹಾಬಲೇಶ್ವರ ದೇವಸ್ಥಾನದಿಂದ ಕೇವಲ 150 ಮೀ. ಅಂತರದಲ್ಲಿದೆ. ಹೀಗಾಗಿ ಇದು ಭಕ್ತರಿಗೆ ಮತ್ತು ಶೈಕ್ಷಣಿಕ ಪ್ರವಾಸಕ್ಕೆ ಬರುವವರಿಗೂ ಅನುಕೂಲವಾಗಿದೆ.

ಮಕ್ಕಳಿಗೆ ಸಮುದ್ರದಲ್ಲಿ ನಿರ್ದಿಷ್ಟ ಸ್ಥಳ ಗುರುತಿಸಲಾಗಿದೆ. ಅದರ ಜತೆಗೆ ಇನ್ನು ದೊಡ್ಡವರು ಸ್ವಲ್ಪದೂರ ನೀರಿನಲ್ಲಿ ಮೋಜು ಮಾಡುತ್ತಾರೆ. ಇಲ್ಲಿ ಬೋಟಿನ ವ್ಯವಸ್ಥೆ ಕೂಡ ಇರುವುದರಿಂದ ಕೆಲವರು ಬೋಟ್ ಮೂಲಕವೂ ಸಮುದ್ರಯಾನ ಮಾಡುತ್ತಾರೆ. ಹಾಗೇ ಲೈಫ್‌ಗಾರ್ಡ್‌ಗಳಿದ್ದು, ಅವರು ಕೂಡ ಯಾರಿಗೂ ಸಮಸ್ಯೆಯಾಗದಂತೆ ಹದ್ದಿನ ಕಣ್ಣಿಟ್ಟಿರುತ್ತಾರೆ.

# ನೊಂದಣಿ ಗುತ್ತಗೆದಾರರಿಂದ ಟೆಂಡರ್ ಆಹ್ವಾನ

ಮಲ್ಲಮ್ಮ ನುಡಿ ವಾರ್ತೆ

**ಕಲಬುರಗಿ:** ಅಬಕಾರಿ ಉಪಆಯುಕ್ತರ ಕಛೇರಿ ಹಾಗೂ ಅಧೀನ ಕಛೇರಿಗಳಿಗೆ ಮಂಜೂರಾದ ಹುದ್ದೆಗಳಲ್ಲಿ ಖಾಲಿ ಇದ್ದ ಹುದ್ದೆಗಳಿಗೆ ಎದುರಾಗಿ ಟೆಕ್ನಿಕಲ್(Technical)ವಿಭಾಗದಲ್ಲಿ ಡಾಟಾ ಎಂಟ್ರಿ ಆಪರೇಟರ್‌ಗೆ ವಿದ್ಯಾರ್ಹತೆ ( ಕನ್ನಡ ಮತ್ತು ಆಂಗ್ಲ ಬಾಷೆ ಟೈಪಿಂಗ್,ಎಕ್ಸೆಲ್/ಪಿಪಿಟಿ ಗಳಲ್ಲಿ ನುರಿತೆತ) ಸ್ಕಿಲ್ಡ್ ಕಂಪ್ಯೂಟರ ಆಪರೇಟರ್ ವಿದ್ಯಾರ್ಹತೆ ಡಿಪ್ಲಮೋ ಇನ್ ಕಂಪ್ಯೂಟರ್ ಸೈನ್ಸ್ /ಇನ್ ಪಾರ್ಮೇಶನ್ ಸೈನ್ಸ್/ಬಿ.ಸಿ.ಎ)ಮತ್ತು ವಾಹನ ಚಾಲಕರ ಹುದ್ದೆಗೆ (ನಾಲ್ಕು ಚಕ್ರ ವಾಹಾನದ ಡಿ.ಎಲ್ ಮತ್ತು 05 ವರ್ಷಗಳ ಅನುಭವವಿರುವವರ) ಸೇವೆಯನ್ನು 03 ತಿಂಗಳ (ಜನೆವರಿ–26 ರಿಂದ ಮಾರ್ಚ–26) ಅವಧಿಗೆ ಹೊರಗುತ್ತಿಗೆ ಆಧಾರದ ಮೇಲೆ ಕಾರ್ಮಿಕ ಇಲಾಖೆಯಲ್ಲಿನೋಂದಣಿಯಾಗಿರುವಗುತ್ತಿಗೆದಾರರಿಂದ ದ್ವಿ–ಲಕೋಟೆ ಪದ್ಧತಿಯಲ್ಲಿ (Two Bid Cover System: Technical & Financial Bid) ಟೆಂಡರನ್ನು 2.0https://kpp.karnataka.gov.in ಪೋರ್ಟಲ್‌ನಲ್ಲಿ ಆಹ್ವಾನಿಸಲಾಗಿದ್ದು, ಇಚ್ಛೆಯುಳ್ಳ ಅರ್ಹ ಸಂಸ್ಥೆಗಳು ಷರತ್ತು ನಿಬಂಧನೆಗಳಿಗೊಳಪಟ್ಟು ಟೆಂಡರ ಸಲ್ಲಿಸಬಹುದು, ಸದರಿ ಇ–ಟೆಂಡರ ವೇಳಾಪಟ್ಟಿ ಕೆಳಕಂಡಂತಿದೆ. ಶೆಡ್ಯೂಲ್‌ಗಳನ್ನು ಆನ್‌ಲೈನ್‌ನಲ್ಲಿ ಪ್ರಕಟಿಸಿದ ದಿನಾಂಕ:17–12–2025,ಭರ್ತಿ ಮಾಡಿದ ಟೆಂಡರ ಫಾರಂಗಳನ್ನು ಇ–ಟೆಂಡರ್‌ನಲ್ಲಿ (ಗಠಿ–ಟಂಚಿಜ) ಸಲ್ಲಿಸುವ ಕೊನೆಯ ದಿನಾಂಕ : 31–12–2025 ಸಂಜೆ 5:30 ವರೆಗೆ,ಇ–ಟೆಂಡರ ಅಂದಾಜು ಮೊತ್ತ : ರೂ.8,50,000/– (ರೂಪಾಯಿ ಎಂಟು ಲಕ್ಷ ಐವತ್ತು ಸಾವಿರ ಮಾತ್ರ),ಇ.ಎಂ.ಡಿ. ಮೊತ್ತ : ರೂ. 17,000/– (ರೂಪಾಯಿ ಹದಿನೇಳು ಸಾವಿರ ಮಾತ್ರ),ತಾಂತ್ರೀಕ ಟೆಂಡರ ತೆರೆಯುವ ದಿನಾಂಕ ಮತ್ತು ಸ್ಥಳ 31–12–2025 ರಂದು ಮಧ್ಯಾಹ್ನ 04:00 ಗಂಟೆಗೆ, ಅಬಕಾರಿ ಉಪ ಆಯುಕ್ತರ ಕಛೇರಿ, ಅಬಕಾರಿ ಭವನ, ಐ–ವಾನಶಾಹಿ ರಸ್ತೆ, ಕಲಬುರಗಿ ಜಿಲ್ಲೆ ಕಲಬುರಗಿ –585102,ಆರ್ಥಿಕ ಟೆಂಡರ ತೆರೆಯುವ ದಿನಾಂಕ ಮತ್ತು ಸ್ಥಳ:03–01–2026 ರಂದು ಬೆಳಿಗ್ಗೆ 11:00 ಗಂಟೆಗೆ. ಅಬಕಾರಿ ಉಪಆಯುಕ್ತರ ಕಛೇರಿ, ಅಬಕಾರಿ ಭವನ, ಐ–ವಾನಶಾಹಿ ರಸ್ತೆ, ಕಲಬುರಗಿ ಜಿಲ್ಲೆ ಕಲಬುರಗಿ 585102,ಕಛೇ–ರಿಯ ಇ–ಮೇಲ್ ವಿಳಾಸ: ಜಛಿಜರಣಟಛ@ರಟಚಿಟ.ಛಿಂಟ –ಹೆಚ್ಚಿನ ಮಾಹಿತಿಯನ್ನು ಅಬಕಾರಿ ಉಪ ಆಯುಕ್ತರ ಕಛೇರಿಯ ಕಾರ್ಯನಿರ್ವಹಿಸುವ ದಿನಗಳಲ್ಲಿ ದೂರವಾಣಿ ಸಂಖ್ಯೆ:08472–278681, ಮೊಬೈಲ್ ನಂ: 9480388658 ರಲ್ಲಿ ಸಂಜೆ 5:30 ರ ಸಮಯದೊಳಗೆ ಸಂಪರ್ಕಿಸಲು ಕೋರಿದೆ ಎಂದು ಕಲಬುರಗಿ ಜಿಲ್ಲೆಯ ಅಬಕಾರಿ ಉಪ ಆಯುಕ್ತರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಪ್ರವಾಸೋದ್ಯಮ ಉತ್ತೇಜನಕ್ಕಾಗಿ ಕಿರುಚಿತ್ರ ಸ್ಪರ್ದೆ

ಮಲ್ಲಮ್ಮ ನುಡಿ ವಾರ್ತೆ

**ಕಲಬುರಗಿ,:**–ಕಲಬುರಗಿ ಜಿಲ್ಲೆಯ ಪ್ರವಾಸೋದ್ಯಮ ಉತ್ತೇಜನ ಹಾಗೂ ಪ್ರಚಾರ ಪಡಿಸುವ ನಿಟ್ಟಿನಲ್ಲಿ ಕಲಬುರಗಿ ಜಿಲ್ಲೆಯ ಪ್ರವಾಸಿ ತಾಣಗಳು, ಸಂಸ್ಕೃತಿ, ಆಹಾರ, ಸಂಪ್ರದಾಯದ ಮೇಲೆ ಕಿರುಚಿತ್ರ (Vlog) ಸ್ಪರ್ದೆಯನ್ನು ಆಯೋಜನೆ ಮಾಡಲಾಗಿದ್ದು ವಿಜೇತ ಸ್ಪಥಾರ್ಥಿಗಳಿಗೆ ಪ್ರಥಮ ರೂ.10,000/– ದ್ವೀತಿಯ ರೂ.6000/– ಹಾಗೂ ತೃತೀಯ ರೂ.4000 ಗಳ ಬಹುಮಾನವನ್ನು ಹಾಗೂ ಭಾಗವಹಿಸಿದ ಇತರೆ ಸ್ಪರ್ಥಾರ್ಥಿಗಳಿಗೆ ಪ್ರಮಾಣಪತ್ರವನ್ನು ವಿತರಿಸಲಾಗುವುದು. ಆಸಕ್ತ ಎಲ್ಲಾ ಕಿರುಚಿತ್ರ (Vlog) ಸೃಜನೆಗಾರರು ಈ ಕೆಳಗಿನ ಮಾಹಿತಿಯಂತೆ ತಮ್ಮ ವೀಡಿಯೋಗಳನ್ನು ಕಛೇರಿಯ ಇ–ಮೇಲ್ ವಿಳಾಸ tourvlog-klb24@gmail.com. ಅಥವಾ ಖುದ್ದಾಗಿ ತಂದು ಕಛೇರಿಗೆ ಸಲ್ಲಿಸಬಹುದಾಗಿದೆ.

ಈ ಮೇಲಿನ ಅಂಶಗಳೊಂದಿಗೆ ತಾವು ಸಲ್ಲಿಸುವ ಕಿರುಚಿತ್ರ ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟಿರುತ್ತದೆ.

ಈ ಪ್ರವೇಶವು ಆನ್‌ಲೈನ್ ಮೂಲಕ ಇರಲಿದ್ದು ಎಲ್ಲರಿಗೂ ಮುಕ್ತವಾಗಿರುತ್ತದೆ, ವ್ಲಾಗ್ ಕಿರುಚಿತ್ರ ಸಲ್ಲಿಸುವ ಕೊನೆಯ ದಿನಾಂಕ:25.12.2025. ಆಗಿರುತ್ತದೆ, ವ್ಲಾಗ್ ಕಿರುಚಿತ್ರದ ಅವಧಿ: 03 ನಿಮಿಷ ಒಳಗಾಗಿರಬೇಕು, ವ್ಲಾಗ್ ನ ವಿಷಯವು ಕಲಬುರಗಿ ಜಿಲ್ಲೆಯ ಪ್ರವಾಸೋದ್ಯಮ, ಸಂಸ್ಕೃತಿ, ಆಹಾರ, ಪ್ರವಾಸಿ ತಾಣ ಮತ್ತು ಕಲಬುರಗಿ ಸಂಪ್ರದಾಯದ ಮೇಲೆ ಆಧಾರಿತವಾಗಿರಬೇಕು, ವ್ಲಾಗ್ ಕನ್ನಡ ಅಥವಾ ಹಿಂದಿ ಬಾಷೆಯಲ್ಲಿರಬೇಕು ಹಾಗೂ ಆಂಗ್ಲ ಭಾಷೆಯ ಉಪ ಶೀರ್ಷಿಕೆ ಒಳಗೊಂಡಿರಬೇಕು, ವ್ಲಾಗ್ ಯಾವುದೇ ನಿರ್ದಿಷ್ಟ ವ್ಯಕ್ತಿ, ಸಂಸ್ಥೆ ಅಥವಾ ಬ್ರ್ಯಾಂಡ್ ಹೆಸರನ್ನು ಪ್ರತಿನಿಧಿಸಬಾರದು ಮತ್ತು ಯಾವುದೇ ಧಾರ್ಮಿಕ ಭಾವನೆಗಳಿಗೆ ದಕ್ಕೆ ತರುವಂತೆ ಇರಬಾರದು, ವ್ಲಾಗ್‌ನಲ್ಲಿ ಅಶ್ಲೀಲ, ಆಕ್ಷೇಪಾರ್ಹ ಮತ್ತು ಅಸಭ್ಯ ಭಾಷೆಯ ಬಳಕೆಯನ್ನು ಕಟ್ಟುನಿಟ್ಟಾಗಿ ನಿಷೇಧಿಸಲಾಗಿದೆ, ಈ ಮೊದಲು ಎಲ್ಲಿಯೋ ಈ ಕಿರುಚಿತ್ರ ಪ್ರದರ್ಶನವಾಗಿರಬಾರದು, ನಿಗದಿಪಡಿಸಿದ ವಿಷಯ ಬಿಟ್ಟು ಬೇರೆ ಯಾವುದೇ ಕಿರುಚಿತ್ರವನ್ನು ಪರಿಗಣಿಸುವುದಿಲ್ಲ, ವ್ಲಾಗ್ (ಕಿರುಚಿತ್ರ) ಸ್ಪರ್ದೆಯಲ್ಲಿ ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿ ಕಲಬುರಗಿ ರವರ ನಿರ್ಣಯವೇ ಅಂತಿಮವಾಗಿರುತ್ತದೆ. ಮೇಲಿನ ಷರತ್ತುಗಳನ್ನು ಅನುಸರಿಸದ ವ್ಲಾಗ್ (ಕಿರುಚಿತ್ರ) ವನ್ನು ತಿರಸ್ಕರಿಸಲಾಗುವುದು.

# ಜಿಲ್ಲೆಯಲ್ಲಿ 13ನೇ ಕೆಎಸ್ ಆರ್ ಪಿ ಸ್ಥಾಪನೆಗೆ ಒತ್ತಾಯ



ಮಲ್ಲಮ್ಮ ನುಡಿ ವಾರ್ತೆ ರಾಯಚೂರು, :

ರಾಯಚೂರು ಮತ್ತು ಯಾದಗಿರಿ ಜಿಲ್ಲೆಯಲ್ಲಿ ಕಾನೂನು ಸುವವ್ಯಸ್ಥೆ ಕಾಪಾಡುವ ನಿಟ್ಟಿನಲ್ಲಿ ಜಿಲ್ಲೆಯಲ್ಲಿ 13ನೆ ಕೆಎಸ್ ಆರ್ ಪಿ ಪಡೆ ಸ್ಥಾಪನೆಗೆ ರಾಜ್ಯ ಸರಕಾರ ಕ್ರಮ ವಹಿಸಬೇಕು ಎಂದು ಜೆಡಿಎಸ್ ಮುಖಂಡರಾದ ಸಣ್ಣ ನರಸಿಂಹ ನಾಯಕ ಅವರು ಒತ್ತಾಯಿಸಿದ್ದಾರೆ.ಅವರಿಂದು ನಗರದ ಸುದ್ದಿಗಾರರೊಂದಿಗೆ ಮಾತನಾಡುತ್ತಾ, ರಾಯಚೂರು ಜಿಲ್ಲೆಯಲ್ಲಿ ಸ್ಥಾಪಿಸಲಿರುವ, ಕರ್ನಾಟಕ ರಾಜ್ಯ ಮೀಸಲು ಪೊಲೀಸ್ ಪಡೆ ಹಣಕಾಸು ಇಲಾಖೆಯ ಅನುಮೋದನೆ ವಿಳಂಬವಾಗಿದೆ.ಕೆ ಎಸ್ ಆರ್ ಪಿ ಸ್ಥಾಪನೆ ಮಾಡುವಂತೆ ಜಿಲ್ಲೆಯ ಎಲ್ಲಾ ಜನಪ್ರತಿನಿದಿನಗಳು ಸರಕಾರ ಎರಡನೇ ಅವಧಿಗೆ ಮನವಿ ಮಾಡಿದರು ಕೈತಪ್ಪಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಜಿಲ್ಲೆಯಲ್ಲಿ ಈ ಯೋಜನೆ ಸ್ಥಾಪನೆಗೆ ಅತ್ಯವಶ್ಯಕವಾಗಿದ್ದು, ಇದರಿಂದ ಅನೇಕ ನಿರುದ್ಯೋಗ ಯುವಕರಿಗೆ ಅನುಕೂಲವಾಗಲಿದೆ ಎಂದರು. ಇಲ್ಲಿ ಅನೇಕ ಬಡ ಮಕ್ಕಳು ನಿರುದ್ಯೋಗಗಳಾಗಿದ್ದು, ಇದರಿಂದ ಸ್ಥಳ ನಿಯುಕ್ತಿ ಹಾಗೂ ಬಡ್ತಿ ನಿರೀಕ್ಷೆಯಲ್ಲಿದ್ದ ಅಧಿಕ ಸಿಬ್ಬಂದಿಗೆ ನಿರಾಸೆಯಾಗಿದೆ.ಜಿಲ್ಲೆಯಲ್ಲಿ ಎರಡು ನದಿಗಳು ಅನೇಕ ಸಂಪನ್ಮೂಲಗಳು ಲಭ್ಯವಿದ್ದರೂ ಕಾನೂನು ಸುವ್ಯವಸ್ಥೆ ಕಾಪಾಡುವ ಪೊಲೀಸ್ ಸಿಬ್ಬಂದಿಗಳು ಇಲ್ಲದಿರುವುದು ದುರುದೃಷ್ಟಕರ ಸಂಗತಿ. ಆದರೆ ಈ ಭಾಗದ ಮತ್ತು ಜಿಲ್ಲೆ ಜನಪ್ರತಿನಿಧಿಗಳು ಈ ಬಗ್ಗೆ ಬೆಳಗಾವಿ ಅಧಿವೇಶನದಲ್ಲಿ ಧ್ವನಿ ಎತ್ತಿಲ್ಲ. ಇವರಿಗೆ ಜಿಲ್ಲೆ ಶಾಂತಿ ಸುವವ್ಯಸ್ಥೆ ಕಾಪಾಡುವ ಯಾವುದೇ ಮನೋಭಾವನೆ ಹೊಂದಿಲ್ಲ ಎಂದು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.ಜಿಲ್ಲೆಯ ಜನಪ್ರತಿನಿಧಿಗಳು ಸರ್ಕಾರ ಮೇಲೆ ಒತ್ತಡ ಮೇಲೆ ಹೇರಿ ಕೂಡಲೇ 13ನೇ ಕೆಎಸ್ ಆರ್ ಪಿ ಪಡೆಯನ್ನು ಸ್ಥಾಪನೆಗೆ ಕ್ರಮ ವಹಿಸಿ ಇಲ್ಲದಿದ್ದರೆ ರಾಜೀನಾಮೆ ಸಲ್ಲಿಸಬೇಕು ಎಂದು ಒತ್ತಾಯಿಸಿದ್ದಾರೆ. ಕಲ್ಯಾಣ ಕಲ್ಯಾಣ ಅಭಿವೃದ್ಧಿ ಮಂಡಳಿಗೆ ಮೀಸಲು ಅನುದಾನ ಸಮರ್ಪಕವಾಗಿ ಬಳಕೆ ಮಾಡದೇ ಇರುವದರಿಂದ ಅನುದಾನ ವ್ಯರ್ಥವಾಗುತ್ತಿದೆ ಎಂದರು. ಈ ಸಂದರ್ಭದಲ್ಲಿಅಮರೇಶ ಗೌಡ, ಯಲ್ಲರೆಡ್ಡಿ, ಹಂಪಯ್ಯ ನಾಯಕ, ನಾಗರಾಜ ಗೌಡ, ದಳಪತಿ ಬಸವರಾಜ, ಜೇಮ್ಸ್ ಸೇರಿದಂತೆ ಉಪಸ್ಥಿತರಿದ್ದರು.

# ಅರ್ಥಪೂರ್ಣವಾಗಿ ವಿಶ್ವಕರ್ಮ ಅಮರಶಿಲ್ಪಿ ಜಕಣಚಾರಿ ಜಯಂತಿ ಆಚರಣೆಗೆ ನಿರ್ಧಾರ



ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ವಿವಿಧ ಇಲಾಖೆಗಳು ಹಾಗೂ ಸಂಘ ಸಂಸ್ಥೆಗಳ ಸಹಯೋಗದೊಂದಿಗೆ ಜನೇವರಿ 1 ರಂದು ವಿಶ್ವಕರ್ಮ ಅಮರಶಿಲ್ಪಿ ಜಕಣಚಾರಿ

ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸಲು ನಿರ್ಧರಿಸಲಾಗಿದೆ.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಅಮರಶಿಲ್ಪಿ ಜಕಣಾಚಾರಿ ಜಯಂತಿ ಆಚರಿಸುವ ಕುರಿತು ಸಹಾಯಕ ಆಯುಕ್ತ ಶ್ರೀಧರ್ ಗೋಟುರ್ ಅವರ ಅಧ್ಯಕ್ಷತೆಯಲ್ಲಿ ನಡೆದ ಪೂರ್ವಭಾವಿ ಸಿದ್ಧತಾ ಸಭೆಯಲ್ಲಿ ಈ ನಿರ್ಣಯ ಕೈಗೊಳ್ಳಲಾಯಿತು.

ಅಂದು ನಗರದ ಸರ್ಕಾರಿ ಪದವಿ ಮಹಾವಿದ್ಯಾಲಯದ ಸಭಾಂಗಣದಲ್ಲಿ ಮಧ್ಯಾಹ್ನ 1ಗಂಟೆಗೆ ಈ ಜಯಂತಿ ಆಯೋಜಿಸಲು, ಜಕಣಾಚಾರಿ ಅವರ

ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಪುಷ್ಪಾರ್ಚನೆ ಮಾಡಿ ಗೌರವ ಅರ್ಪಿಸಲು,ವೇದಿಕೆ, ಆಸನದ ವ್ಯವಸ್ಥೆ,ಶಿಷ್ಟಾಚಾರದಂತೆ ಗಣ್ಯರನ್ನು, ಉಪನ್ಯಾಸಕರನ್ನು ಆಹ್ವಾನಿಸಲು ನಿರ್ಧರಿಸಲಾಯಿತು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಸಹಾಯಕ ಆಯುಕ್ತ ಶ್ರೀಧರ್ ಗೋಟುರ್ ಅವರು ಕಾರ್ಯಕ್ರಮದ ಸಂದರ್ಭದಲ್ಲಿ, ಸೂಕ್ತ ಪೊಲೀಸ್ ಬಂದೋಬಸ್ತ್,

ವೇದಿಕೆ ಸಿದ್ಧತೆ ನೋಡಿಕೊಳ್ಳಲು, ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು. ಆಮಂತ್ರಣ ಪತ್ರಿಕೆ ವಿತರಿಸುವವ್ಯವಸ್ಥೆಗೆಸೂಚಿಸಲಾಯಿತು.

ಕಾರ್ಯಕ್ರಮವನ್ನು ತಾಲೂಕ ಮಟ್ಟದಲ್ಲಿ ಶಾಲಾ, ಕಾಲೇಜು, ಗ್ರಾಮ ಪಂಚಾಯತ್, ವಿವಿಧ ಕಚೇರಿ ಗಳಲ್ಲಿ ಈ ಜಯಂತಿ ಆಚರಣೆ, ಮುಖ್ಯ ಕಾರ್ಯಕ್ರಮಕ್ಕೆ, ಅಗತ್ಯ ಸಿದ್ಧತೆ ಮಾಡಿಕೊಳ್ಳಲು ಸಂಬಂಧಿಸಿದ ಅಧಿಕಾರಿಗಳಿಗೆ ಅವರು ಸೂಚಿಸಿದರು.

ಸಮಾಜದ ಮೂಲಕ ಹಮ್ಮಿಕೊಳ್ಳಲಾಗುವ ಮೆರವಣಿಗೆ ಕಾರ್ಯಕ್ರಮ ಮುಂಚಿತವಾಗಿ ಜಿಲ್ಲಾಡಳಿತಕ್ಕೆ ಈ ಕುರಿತು ಮಾಹಿತಿ ನೀಡಲು ಸೂಚಿಸಿದರು.

ಸಭೆಯಲ್ಲಿ ಕನ್ನಡ ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಶ್ರೀಮತಿ ಉತ್ತರದೇವಿ ಸ್ವಾಗತಿಸಿದರು. ವಿಶ್ವಕರ್ಮ ತಡಿಬಿಡಿ, ಶಿವಣ್ಣ ವಿಶ್ವಕರ್ಮ, ದೇವಿಂದ್ರಪ್ಪ ವಿಶ್ವಕರ್ಮ, ಶಿವಕುಮಾರ್, ಚಂದ್ರಶೇಖರ್ ಪತ್ತಾರ, ಹಣಮಂತರಾಯ್ ವಿಶ್ವಕರ್ಮ, ಉಪಸ್ಥಿತರಿದ್ದರು.

# ದೇವಸ್ಥಾನದ ಆವರಣದಲ್ಲಿ ಟೆಂಗಿನ ಕಾಯಿ ಹೊಡೆಯುವುದು, ಪ್ಲಾಸ್ಟಿಕ್ ಬಳಕೆ ನಿಷೇಧ

ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ :

ಯಾದಗಿರಿ ಜಿಲ್ಲೆಯ ಯಾದಗಿರಿ ತಾಲ್ಲೂಕಿನ ಮೈಲಾಪುರ ಗ್ರಾಮದ ಶ್ರೀ ಮೈಲಾರಲಿಂಗೇಶ್ವರ ದೇವಸ್ಥಾನದ ಜಾತ್ರೆಯನ್ನು 2026ರ ಜನವರಿ 12 ರಿಂದ 18ರ ವರೆಗೆ ಜರುಗಲಿದೆ ಕೆ–ರೆಯ ನೀರು, ದೇವಸ್ಥಾನದ ಆವರಣದಲ್ಲಿ ಟೆಂಗಿನ ಕಾಯಿ ಹೊಡೆಯುವುದು, ಪ್ಲಾಸ್ಟಿಕ್ ಬಳಕೆ ನಿಷೇಧ ಜಾರಿಗೊಳಿಸಿ ಆದೇಶವನ್ನು ಯಾದಗಿರಿ ಜಿಲ್ಲಾಧಿಕಾರಿ ಶ್ರೀ ಹರ್ಷಲ್ ಭೋಯರ್ ಅವರು ಹೊರಡಿಸಿದ್ದಾರೆ.

ಜಾತ್ರೆಯಲ್ಲಿ ಸಾರ್ವಜನಿಕರ ಆರೋಗ್ಯದ ಹಿತ ದೃಷ್ಟಿಯಿಂದ ದೇವಸ್ಥಾನದ ಕೆರೆಯ ನೀರನ್ನು ಯಾವುದೇ ಕಾರಣಕ್ಕೂ ಅಡುಗೆಗೆ ಮತ್ತು ಕುಡಿಯಲು ನೀರು ಬಳಸಬಾರದು, ದೇವಸ್ಥಾನದ ಆವರಣದಲ್ಲಿ ಟೆಂಗಿನ ಕಾಯಿ ಹೊಡೆಯುವುದು, ಪ್ಲಾಸ್ಟಿಕ್ ಬಳಕೆ ಸಂಪೂರ್ಣವಾಗಿ ನಿಷೇಧಿಸಿದೆ.

ಯಾದಗಿರಿ ಜಿಲ್ಲೆಯ ಯಾದಗಿರಿ ತಾಲ್ಲೂಕಿನ ಮೈಲಾಪುರ ಗ್ರಾಮದ ಶ್ರೀ ಮೈಲಾರಲಿಂಗೇಶ್ವರ ದೇವಸ್ಥಾನವು ಎ ಗುಂಪಿನ ಐತಿಹಾಸಿಕ ಪ್ರಸಿದ್ಧ ದೇವಸ್ಥಾನವಾಗಿದ್ದು, ಈ ದೇವಸ್ಥಾನದ ಜಾತ್ರೆಯನ್ನು ಅಂದು ಅತೀ ವಿಜೃಂಭಣೆಯಿಂದ ಜರುಗಲಿದ್ದು, ಜಾತ್ರೆಗೆ ವಿವಿಧ ರಾಜ್ಯಗಳಿಂದ ಹಾಗೂ ಬೇರೆ ಜಿಲ್ಲೆಗಳಿಂದ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತಾಧಿಗಳು ಆಗಮಿಸುವ ನಿರೀಕ್ಷೆಯಿದ್ದು, ದೇವಸ್ಥಾನದ ಕೆರೆ–ಯ ನೀರು ಕಲುಷಿತಗೊಂಡಿರುವುದರಿಂದ ಭಕ್ತಾಧಿಗಳು ಹಾಗೂ ಸಾರ್ವಜನಿಕರ ಆರೋಗ್ಯದ ಹಿತ ದೃಷ್ಟಿಯಿಂದ ದೇವಸ್ಥಾನದ ಕೆರೆಯ ನೀರನ್ನು ಯಾವುದೇ ಕಾರಣಕ್ಕೂ ಅಡುಗೆಗೆ ಮತ್ತು ಕುಡಿಯಲು ನೀರು ಬಳಸಬಾರದು ಮತ್ತು ದೇವಸ್ಥಾನದ ಆವರಣದಲ್ಲಿ ಟೆಂಗಿನ ಕಾಯಿ ಹೊಡೆಯುವುದು ಹಾಗೂ ಪ್ಲಾಸ್ಟಿಕ್ ಬಳಕೆ ಸಂಪೂರ್ಣವಾಗಿ ನಿಷೇಧಿಸಲಾಗಿರುವುದರಿಂದ ಸಾರ್ವಜನಿಕರು, ಭಕ್ತಾದಿಗಳು ಸಹಕರಿಸಬೇಕೆಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮಕ್ಕಳು ಆತ್ಮವಿಶ್ವಾಸದೊಂದಿಗೆ ಅಧ್ಯಯನ ನಡೆಸಿ : ಶಶಿಧರ ಕೋಸಂಬೆ



ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ: ಆತ್ಮವಿಶ್ವಾಸದೊಂದಿಗೆ ಮಕ್ಕಳು ಶ್ರದ್ಧಾ ಭಕ್ತಿಯಿಂದ ಅಭ್ಯಾಸ ಮಾಡಿದಲ್ಲಿ ಜೀವನದಲ್ಲಿ ಯಶಸ್ವಿ ಕಂಡುಕೊಳ್ಳಲು ಸಾಧ್ಯ ಎಂದು ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷರಾದ ಶ್ರೀ ಶಶಿಧರ ಕೋಸಂಬೆ ಅವರು ಸಲಹೆ ನೀಡಿದರು.

ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಇಂದು ಮಕ್ಕಳೊಂದಿಗೆ ಸಂವಾದ ನಡೆಸಿದ ಅವರು, ಮಕ್ಕಳು ಒತ್ತಡಕ್ಕೆ ಒಳಗಾಗದೇ ಶ್ರದ್ಧಾ ಭಕ್ತಿಯಿಂದ ಓದಬೇಕು. ಯಾವದೇ ಸಂಕೋಚವನ್ನು ಇಟ್ಟು ಕೊಳ್ಳದೆ ಆತ್ಮವಿಶ್ವಾಸದಿಂದ ಮುಂದುವರೆಯುವಂತೆ ಅವರು ಸಲಹೆ ನೀಡಿದರು.

ಜಿಲ್ಲೆಯ ವಿವಿಧ ಗ್ರಾಮಗಳ ಮಕ್ಕಳಿಗೆ ಶಿಕ್ಷಕರ ಕೊರತೆ,ಶಾಲಾ ವೇಳಾಪಟ್ಟಿ ಅನ್ವಯ ಬಸ್ಗಳ ಬಿಡುಗಡೆ,

ಅನುಸೂಚಿಗಳ ಹೆಚ್ಚಳ, ಶಾಲೆಗಳಿಗೆ ಕುಡಿಯುವ ನೀರು , ಶೌಚಾಲಯಗಳ ವ್ಯವಸ್ಥೆ ಕಲ್ಪಿಸಬೇಕು. ಡಿಡಿಪಿಐ, ರಸ್ತೆ ಸಾರಿಗೆ ಸಂಸ್ಥೆ ಯ ಡಿವಿಸಿ ಹಾಗೂ ಸಂಬಂಧಿಸಿದ ಅಧಿಕಾರಿಗಳು ಸಮನ್ವಯತೆಯಿಂದ ಸ್ಥಳ ಭೇಟಿ ನೀಡಿ ಈ ಸಮಸ್ಯೆಗಳನ್ನು ಪರಿಹರಿಸುವಂತೆ ಅವರು ಸೂಚನೆ ನೀಡಿದರು.

ಸಂವಾದ ಸಂದರ್ಭದಲ್ಲಿ ಮಕ್ಕಳ ಸಮಸ್ಯೆಗಳನ್ನು ಆಲಿಸಿದ ಅವರು ಮಕ್ಕಳ ಅಧ್ಯಯನಕ್ಕೆ ಪೂರಕ ವಾತಾವರಣ ನಿರ್ಮಿಸುವ ಕಾರ್ಯ ಸಂಬಂಧಿಸಿದ ಅಧಿಕಾರಿಗಳು ಮಾಡುವಂತೆ ಅವರು ಸೂಚಿಸಿದರು.

ಶಿಕ್ಷಕರಿಂದ ಶಾಲೆಗಳಲ್ಲಿ ಮಕ್ಕಳಿಗೆ ಯಾವುದೇ ರೀತಿಯ ಕಿರುಕುಳ ನೀಡಬಾರದು. ಗ್ರಾಮಗಳ ಶಾಲಾ , ಬಸ್ ನಿಲ್ದಾಣಗಳ ವ್ಯಾಪ್ತಿಯಲ್ಲಿ ಪೋಲಿಸ್ ಬೀಟ್ ಹೆಚ್ಚಿಸಿ ರಕ್ಷಣೆ ನೀಡಬೇಕು.ಪೋಲಿಸ್ ಇಲಾಖೆಯಿಂದ ತೆರೆದ ಮನೆ ಕಾರ್ಯಕ್ರಮ ನಡೆಯುವಂತೆ ನೋಡಿಕೊಳ್ಳಲು ಅವರು ಸೂಚಿಸಿ ತೆಗೆದುಕೊಂಡ ಪರಿಹಾರೋಪಾಯಗಳ ವರದಿಯನ್ನು ಎರಡು ವಾರದೊಳಗೆ ಸಲ್ಲಿಸುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.

ಸಂವಾದದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ಶ್ರೀ ತಿಪ್ಪಣ್ಣ ಶಿರಸಗಿ, ಡಿಡಿಪಿಐ ಚನ್ನಬಸಪ್ಪ ಮುಧೋಳ,ಡಿಹೆ ಮಹೇಶ್ ಬಿರಾದಾರ,ಇತರರು ಉಪಸ್ಥಿತರಿದ್ದರು.

# ಸರ್ವರೂ ಜಯಂತಿಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಿ: ರಾಜೇಶ್ ಹೆಚ್.ಡಿ

ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ,:

ಜಿಲ್ಲಾಡಳಿತ ವತಿಯಿಂದ ಮಹನೀಯರ ಜಯಂತಿಯ ಕಾರ್ಯಕ್ರಮಗಳನ್ನು ಜಿಲ್ಲಾ ಕೇಂದ್ರದಲ್ಲಿ ಅರ್ಥಪೂರ್ಣವಾಗಿ ಆಚರಿಸಲಾಗುವುದು ಎಂದು ಸಹಾಯಕ ಆಯುಕ್ತ ರಾಜೇಶ್ ಹೆಚ್.ಡಿ ಅವರು ಹೇಳಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ವಿವಿಧ ಮಹನೀಯರ ಜಯಂತಿ ಆಚರಣೆ ಕುರಿತು ಶನಿವಾರ ಏರ್ಪಡಿಸಿದ್ದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.



ಸಾಧರು, ಸಂತರು, ಮಹನೀಯರು ಕೇವಲ ಆಯಾ ಸಮುದಾಯಕ್ಕೆ ಸೀಮಿತರಾದವರಲ್ಲ; ಬದಲಾಗಿ ಸಮಾಜದ ಏಳ್ಗೆಗೆ ಶ್ರಮಿಸಿದವರು. ಹಾಗಾಗಿ ಎಲ್ಲ ಸಮುದಾಯದವರು, ಸಂಘ–ಸಂಸ್ಥೆಗಳ ಮುಖಂಡರು, ಸಾರ್ವಜನಿಕರು, ಶಾಲಾ–ಕಾಲೇಜು ವಿದ್ಯಾರ್ಥಿಗಳು ಜಯಂತಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕು ಎಂದು ತಿಳಿಸಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಡಿ.29 ರಂದು ಕುವೆಂಪು ಜನ್ಮದಿನದ ಅಂಗವಾಗಿ ವಿಶ್ವಮಾನವ ದಿನಾಚರಣೆ ಮತ್ತು ಜ.01 ರಂದು ವಿಶ್ವಕರ್ಮ ಅಮರಶಿಲ್ಪಿ ಜಕಣಚಾರಿ ಸಂಸ್ಮರಣಾ ದಿನಾಚರಣೆ ಜಯಂತಿಯ ಕಾರ್ಯಕ್ರಮಗಳನ್ನು ಅರ್ಥಪೂರ್ಣವಾಗಿ, ಅಚ್ಚುಕಟ್ಟಾಗಿ ಆಯೋಜಿಸಬೇಕು ಎಂದರು.

ವಿವಿಧ ಇಲಾಖೆಗಳಿಗೆ ವಹಿಸಿದ ಜವಾಬ್ದಾರಿಗಳನ್ನು ಅರಿತು, ತಮ್ಮ ತಮ್ಮ ಕೆಲಸಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸುವುದರ ಮೂಲಕ ಮಹನೀಯರ ಜಯಂತಿ ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸಬೇಕು ಎಂದು ನಿರ್ದೇಶನ ನೀಡಿದರು.

ಡಿ.29 ರಂದು ಕುವೆಂಪು ಜನ್ಮದಿನದ ಅಂಗವಾಗಿ ವಿಶ್ವಮಾನವ ದಿನಾಚರಣೆ ವೇದಿಕೆ ಕಾರ್ಯಕ್ರಮವನ್ನು ಅಂದು ನಗರದ ಡಾ.ರಾಜ್‌ಕುಮಾರ್ ರಸ್ತೆಯ ಸಾಂಸ್ಕೃತಿಕ ಸಮುಚ್ಚಯ ಆವರಣದ ಹೊಂಗಿರಣ ಸಭಾಂಗಣದಲ್ಲಿ ಆಯೋಜಿಸಲಾಗುವುದು. ಮತ್ತು ಜ.01 ರಂದು ವಿಶ್ವಕರ್ಮ ಅಮರಶಿಲ್ಪಿ ಜಕಣಚಾರಿ ಸಂಸ್ಮರಣಾ ದಿನಾಚರಣೆಯ ವೇದಿಕೆ ಕಾರ್ಯಕ್ರಮವನ್ನು ಸಮುದಾಯದ ಮುಖಂಡರ ಕೋರಿಕೆಯಂತೆ ಜಿಲ್ಲಾಧಿಕಾರಿ, ಅಪರ ಜಿಲ್ಲಾಧಿಕಾರಿಯವರೊಂದಿಗೆ ಚರ್ಚಿಸಿ ತೀರ್ಮಾನಿಸಿ ಆಯೋಜಿಸಲಾಗುವುದು ಎಂದರು.

ಶಿಷ್ಟಾಚಾರದಂತೆ ಆಹ್ವಾನ ಪತ್ರಿಕೆಯನ್ನು ಮುದ್ರಿಸಿ ಗಣ್ಯರನ್ನು ಆಹ್ವಾನಿಸಬೇಕು. ವೇದಿಕೆ ಕಾರ್ಯಕ್ರಮದಲ್ಲಿ ಕುಡಿಯುವ ನೀರಿನ ವ್ಯವಸ್ಥೆ, ಆಸನ ವ್ಯವಸ್ಥೆ ಹಾಗೂ ಸ್ವಚ್ಛತೆ ಸೇರಿದಂತೆ ಇತರೆ ಕಾರ್ಯ ಕೈಗೊಳ್ಳಬೇಕು ಎಂದು ಸೂಚಿಸಿದರು.

ವೇದಿಕೆ ಕಾರ್ಯಕ್ರಮದಲ್ಲಿ ಗೀನಗಾಯನ, ಸುಗಮ ಸಂಗೀತ ಕಾರ್ಯಕ್ರಮ ನಡೆಯಲಿದೆ. ಮಹನೀಯರ ಕುರಿತು ನುರಿತ ಸಂಪನ್ಮೂಲ ವ್ಯಕ್ತಿಗಳಿಂದ ವಿಶೇಷ ಉಪನ್ಯಾಸ ಏರ್ಪಡಿಸಬೇಕು ಎಂದು ಅವರು ಹೇಳಿದರು.

ಸಭೆಯಲ್ಲಿ ಸಮುದಾಯದ ಮುಖಂಡರು ಜಯಂತಿ ಕಾರ್ಯಕ್ರಮ ಅದ್ದೂರಿಯಾಗಿ ಹಾಗೂ ಯಶಸ್ವಿಗೊಳಿಸಲು ತಮ್ಮ ಅಭಿಪ್ರಾಯ ನೀಡಿದರು.

ಈ ಸಂದರ್ಭದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಬಿ.ನಾಗರಾಜ ಸೇರಿದಂತೆ ಮಹಾನಗರ ಪಾಲಿಕೆ, ತೆ–ೂಟಗಾರಿಕೆ, ಡಿಡಿಪಿಯು ಅಧಿಕಾರಿಗಳು, ಜಿಲ್ಲಾ ಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳು, ಸಮುದಾಯದ ಮುಖಂಡರು ಹಾಗೂ ಇನ್ನಿತರರು ಉಪಸ್ಥಿತರಿದ್ದರು.

# ಅಂಬೇಡ್ಕರ್ ದೂರದೃಷ್ಟಿಯ ಸಾಮಾಜಿಕ ಪರಿಕಲ್ಪನೆ ಚಿಂತನೆ ಅಗತ್ಯ: ಬರಗೂರು ರಾಮಚಂದ್ರಪ್ಪ

ಮಲ್ಲಮ್ಮ ನುಡಿ ವಾರ್ತೆ ರಾಯಚೂರು:

ಅಂಬೇಡ್ಕರ್ ಅವರ ದೂರದೃಷ್ಟಿ ಮತ್ತು ಸಾಮಾಜಿಕ ಪರಿಕಲ್ಪನೆ ಮೂಲಕ ಬಂಡಾಯ ಸಾಹಿತ್ಯ, ದಲಿತ ಸಾಹಿತ್ಯ ಮತ್ತು ಪ್ರಗತಿಪರ ಚಿಂತಕರರು ಈ ದೇಶ ಯಾವ ನಿಟ್ಟಿನಲ್ಲಿ ಸಾಗುತ್ತಿದೆ ಎಂಬುದರ ಬಗ್ಗೆ ಆತ್ಮ ಅವಲೋಕನ ಮಾಡಿಕೊಳ್ಳುವ ಅಗತ್ಯವಿದೆ ಎಂದು ಸಾಹಿತಿ ಡಾ.ಬರಗೂರು ರಾಮಚಂದ್ರಪ್ಪ ಅವರು ಹೇಳಿದರು. ಅವರಿಂದು ನಗರದ ಪಂಡಿತ್ ಸಿದ್ದರಾಮ ಜಂಬಲದಿನ್ನಿ ರಂಗಮಂದಿರದಲ್ಲಿ 11ನೇ ಅಖಿಲ ಭಾರತ ದಲಿತ ಸಾಹಿತ್ಯ ಸಮ್ಮೇಳನ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಬೀದಿ ಭಾರತ ಸ್ವಚ್ಛ ಮುಖ್ಯವಲ್ಲ ಭಾವ ಭಾರತ ಸ್ವಚ್ಛವಾದಾಗ ಮಾತ್ರ ಭವ್ಯ ಭಾರತ ನಿರ್ಮಾಣ ಸಾಧ್ಯ ಎಂದರು. ದೇಶದಲ್ಲಿ ನಿರಂತರವಾಗಿ ದಲಿತರ ಮೇಲೆ ಹಲ್ಲೆ ನಡೆಯುತ್ತಿದೆ. ಅಂಬೇಡ್ಕರ್ ಅವರ ದೂರದೃಷ್ಟಿ ಪರಿಕಲ್ಪನೆ ಮರೀಚಿಕೆ ಆಗುತ್ತಿದ್ದು, ಬದಲಾವಣೆ ಸನ್ನಿವೇಶದಲ್ಲಿ ದಲಿತ ಪರ ನಾಯಕರು ಇಂದಿನ ಕಾಲಘಟ್ಟದಲ್ಲಿ ಆತ್ಮ ಅವಲೋಕನ ಮಾಡಬೇಕು



ಎಂದರು.ಕನ್ನಡ ಮತ್ತು ಬಂಡಾಯ ಸಾಹಿತ್ಯದಲ್ಲಿ ಬೆಳೆದು ಬಂದ ದಲಿತ ಸಾಹಿತ್ಯ ಚಿಂತನೆ ವಿಧಾನದಲ್ಲಿ ಬದಲಾವಣೆ ಕಂಡಿದೆ ಎಂದರು. ಎಲ್ಲಾ ಚಳುವಳಿಗಳು ಅಂಬೇಡ್ಕರ ಆಶಯವನ್ನು ಮತ್ತು ಅವರ ಸಾಮಾಜಿಕ ಪರಿಕಲ್ಪನ ಬಗ್ಗೆ ಬಿತ್ತರಿಸಿದೆ. ಅಂಬೇಡ್ಕರ್ ಅವರು ಸಾಮಾಜಿಕ ಪ್ರಜಾಪ್ರಭುತ್ವ ಬಗ್ಗೆ ಸಂವಿಧಾನ ಸಭೆಯಲ್ಲಿ ಹೆಚ್ಚಿನ ಮಹತ್ವನೀಡಿದರು. ಅಂಬೇಡ್ಕರ ನಿಜವಾದ ಆಶಯವನ್ನು ಆಡಳಿತರೂಢ ಪಕ್ಷಗಳು ಅರ್ಥಮಾಡಿಕೊಳ್ಳದಿರುವುದು ಬಗ್ಗೆ ವಿಷಾದನೀಯ ವ್ಯಕ್ತಪಡಿಸಿದರು. ಅಂಬೇಡ್ಕರ್ ಅವರ ಸಾಮಾಜಿಕ ಪರಿಕಲ್ಪನೆ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಎಲ್ಲಾ ಸಮುದಾಯದ ಜನರು ಸಮಾನತೆಯಿಂದ ಬದುಕು ಅವಕಾಶ ಕಲ್ಪಿಸಿಕೊಟ್ಟಿದೆ. ಆದರೆ ಇಂದಿನ ಕಾಲದಲ್ಲಿ ಸಾರ್ವಜನಿಕ ಆಸ್ತಿಗಳನ್ನು ಖಾಸಗಿಕರಣ ಮಾಡಲಾಗಿದೆ. ಕೇವಲ ಶ್ರೀಮಂತರು ಅಭಿವೃದ್ಧಿಯಾದರೆ ದೇಶ ಅಭಿವೃದ್ಧಿ ಆಗುವುದಿಲ್ಲ. ದೀನ ದಲಿತರು ಶೋಷಿತರು ಅಭಿವೃದ್ಧಿ ಹೊಂದಿದರೆ ದೇಶ ಪ್ರಗತಿ ಸಾಧ್ಯವಾಗುತ್ತದೆ ಎಂದರು. ಎಲ್ಲರನ್ನು ಸಮಾನತೆ ಕಾಣುವುದು ಅಂಬೇಡ್ಕರ್ ಸಂವಿಧಾನದ ಮುಖ್ಯ ಆಶಯ. ಅಂಬೇಡ್ಕರ್ ಅವರು ದೊಡ್ಡ ಅಹಿಂಸಾವಾದಿ ಅವರು ಎಂದಿಗೂ ಯಾರಿಗೂ ಹಿಂಸೆ ಮಾಡಿದವರಲ್ಲ ಕೇವಲ ಅವರು ಕಾನೂನು ಹೋರಾಟದ ಮೂಲಕ ತಕ್ಕ ಪಾಠ ಕಲಿಸಿದ ಧೀಮಂತ ನಾಯಕರು. ಶಿಕ್ಷಣದಿಂದ ಮಾತ್ರ ಸಮಾಜ ಪರಿವರ್ತನೆಗೆ ಸಹಕಾರಿಯಾಗಲಿದೆ ಎಂದರು. ಶಿಕ್ಷಣ ಆತ್ಮ ವಿಶ್ವಾಸ ತಂದುಕೊಟ್ಟಿದೆ ಎಂದರು.ದಲಿತ ಸಾಹಿತ್ಯ ಸಂಕಸ್ಟದ ಸ್ಫೋಟ ಎಂದರು. ಸಾಮಾಜಿಕ ಸುಧಾರಣೆ ಈಗ ಆರ್ಥಿಕ ಸುಧಾರಣೆಯಾಗಿ ಮಾರ್ಪಟಿದೆ. ಮಾರುಕಟ್ಟೆ ಬಂದಾಗ ಮೌಲ್ಯಗಳು ಕಟ್ಟೆಗಳು ಕುಸಿದಿದೆ. ಮಾರುಕಟ್ಟೆ ಬಂದಾಗ ಮೌಲ್ಯಗಳು ಕಟ್ಟೆಗಳು ಕುಸಿದಿದೆ.ರಾಯಚೂರಿಗೆ ಮತ್ತು ನನಗೆ ಅವಿನಾಭಾವ ಸಂಬಂಧವಿದೆ. 82ನೇ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ನಾನು ಸರ್ವಧ್ಯಕ್ಷನಾಗಿ ಆಗಮಿಸಿರುವುದು ನನಗೆ ಸಂತೋಷದಾಯಕವಾಗಿದೆ.

ಡಾ.ಜಯದೇವಿ ಗಾಯಕವಾಡ ಅವರು ಅತ್ಯುತ್ತಮ ಕವಿ. ದಲಿತರ ಮತ್ತು ಪ್ರಗತಿಪರ ಚಿಂತನೆ ಹೊಂದಿದ್ದಾರೆ. ದಲಿತ ಸಾಹಿತ್ಯ ಸಮ್ಮೇಳನ ದೇಶದಲ್ಲಿ ದೊಡ್ಡ ಇತಿಹಾಸ ಹೊಂದಿದೆ.ಭಾರತದಲ್ಲಿ ಮೊಟ್ಟ ಮೊದಲ ದಲಿತ ಸಾಹಿತ್ಯ ಸಮ್ಮೇಳನ 1938 ರಲ್ಲಿ ಮುಂಬೈನಲ್ಲಿ ನಡೆಯಿತು.ಕನ್ನಡ ಮತ್ತು ಸಂಸ್ಕೃತಿ ಇಲಾಖೆ ದಲಿತ ಸಾಹಿತ್ಯ ಸಮ್ಮೇಳನಕ್ಕೆ ಅನುದಾನ ನೀಡಬೇಕು ಎಂದು ಒತ್ತಾಯಿಸಿದ್ದಾರೆ.ಸಮ್ಮೇಳನ ಸರ್ವಧ್ಯಕ್ಷರಾಗಿ ಡಾ. ಜಯದೇವಿ ಗಾಯಕವಾಡ ಅವರನ್ನು ತೆರೆದ ವಾಹನದಲ್ಲಿ

ಭವ್ಯ ಮೆರವಣಿಗೆ ಮಾಡಲಾಯಿತು.

ಈ ಸಂದರ್ಭದಲ್ಲಿ ದ.ಸಾ.ಪ ಡಾ. ಅರ್ಜುನ ಗೊಳಸಂಗಿ, ಕೆ. ಶಾಂತಪ್ಪ, ಮಾಜಿ ಮಹಾಪೌರರು ನರಸಮ್ಮ ನರಸಿಂಹಲು ಮಾಡಗಿರಿ, ಜಯಣ್ಣ, ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷರಾದ ಕೃಷ್ಣ ಶಾವಂತಗೇರಿ,

# ಶ್ರೀ ಮಹಾಬಲೇಶ್ವರ ದೇವರ ದರ್ಶನ ಪಡೆದ ಡಿ.ಕೆ.ಶಿವಕುಮಾರ



**ಮಲ್ಲಮ್ಮ ನುಡಿ ವಾರ್ತೆ ಗೋಕರ್ಣ :** ಅಂಕೋಲಾದ ಆಂದ್ಲೆಯ ಜಗದೀಶ್ವರಿ ದೇವಸ್ಥಾನಕ್ಕೆ ತೆರಳಲು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಅವರು ಹೆಲಿಕ್ಯಾಪ್ಟರ್ ಮೂಲಕ ಗೋಕರ್ಣಕ್ಕೆ ಆಗಮಿಸಿದರು. ಅಲ್ಲಿಂದ ಖಾಸಗಿ ರೆಸಾರ್ಟ್‌ಗೆ ತೆರಳಿ ಮಡಿಯುಟ್ಟು ದೇವಸ್ಥಾನಕ್ಕೆ ತೆರಳಿದ್ದರು. ಸ್ವಲ್ಪ ದೂರ ಬಂದ ನಂತರ ಶ್ರೀ ಮಹಾಬಲೇಶ್ವರ ದೇವಸ್ಥಾನಕ್ಕೆ ತೆರಳಿಲ್ಲ ಎಂದು ಮನ ಬದಲಿಸಿ ವಾಪಸ್ ಬಂದು ದೇವರ ದರ್ಶನ ಮಾಡಿದ ಘಟನೆ ನಡೆದಿದೆ. ಶ್ರೀ ಮಹಾಬಲೇಶ್ವರ ದೇವರ ಆತ್ಮಲಿಂಗಕ್ಕೆ ವಿಶೇಷ ಪೂಜೆ ಸಲ್ಲಿಸಿದರು. ದೇವಸ್ಥಾನದ ಅರ್ಚಕರು ಹಾಗೂ ಆನುವಂಶೀಯ ಉಪಾಧಿವಂತ ಮಂಡಳಿ ಅಧ್ಯಕ್ಷ ವೇ. ರಾಜಗೋಪಾಲ ಅಡಿ ಗುರೂಜಿ ಪೂಜಾ ಕಾರ್ಯವನ್ನು ನೆರವೇರಿಸಿದರು. ದೇವಸ್ಥಾನದ ಆಡಳಿತ ಮಂಡಳಿಯ ವತಿಯಿಂದ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಅವರಿಗೆ ಶಾಲೂ ಹೊದಿಸಿ ಗೌರವಿಸಿದರು. ಆಡಳಿತ ಮಂಡಳಿಯ ವ್ಯವಸ್ಥಾಪಕ ಸುಬ್ರಹ್ಮಣ್ಯ ಹೆಗಡೆ, ಜಿಲ್ಲಾ ಉಸ್ತುವಾರಿ ಸಚಿವ ಮಂಕಾಳ ವೈದ್ಯ, ಶಾಸಕ ಸತೀಶ ಸೈಲ್ ಸೇರಿದಂತೆ ಇತರರಿದ್ದರು.

# ಮಹಾ ಶಿವಶರಣೆ ಶ್ರೀ ಭೀಮಾಂಬಿಕಾದೇವಿ ಮಠದಲ್ಲಿ 381 ನೇ ಶಿವಾನುಭವ ಗೋಷ್ಠಿ



**ಮಲ್ಲಮ್ಮ ನುಡಿ ವಾರ್ತೆ ,ಯಲಬುರ್ಗಾ :**

ತಾಲೂಕಿನ ಸುಕ್ಷೇತ್ರ ದಮ್ಮೂರ ಗ್ರಾಮದ ಶ್ರೀ ಭೀಮಾಂಬಿಕಾ ದೇವಿ ಮಠದಲ್ಲಿ ಚತುರ್ದಶಿ ಅಂಗವಾಗಿ ಡಿ..18 ರಂದು ಜರುಗಿರುವ 381 ನೇ ಶಿವಾನುಭವಗೋಷ್ಠಿಯಲ್ಲಿ ಮಠದ ಒಡೆಯರಾದ ಹನುಮಂತಪ್ಪಜ್ಜ ಧರ್ಮರ ಹಾಗು ಶರಣಯ್ಯ ಹಿರೇಮಠ ಸಾನಿದ್ಯವಹಿಸಿದ್ದರು. ಮಾತೆ ಮುತ್ತು ಮಾತೆ ಮೃತ್ಯು ವಿಚಾರ ಚಿಂತನ ಮಂತನ ಗೋಷ್ಠಿಯಲ್ಲಿ ಕರಮುಡಿಯ ವೀರಯ್ಯ ಹಿರೇಮಠ ಅವರು ಮಾತನಾಡಿ ನಾವು ಮಾತನಾಡುವ ಮಾತು ಬೇರೆಯವರ ಮನಸ್ಸಿಗೆ ತೋಂದರೆಯಾಗಬಾರದು ,ನಾವು ಮಾತಾನಾಡುವ ಮಾತು ನುಡಿದರೆ ಮುತ್ತಿನನ ಹಾರದಂತಿರಬೇಕು ಎಂಬ ಶರಣರ ವಚನದಂತೆ ಇರಬೇಕು ಎಂದರು. 32 ವರ್ಷದಿಂದ ಇಲ್ಲಿಯವರೆಗೆ 381 ಶಿವಾನುಭವ ಗೋಷ್ಠಿಗಳು ಸಾಗಿಬಂದಿರುವದು ಉತ್ತಮ ಕಾರ್ಯವಾಗಿದೆ ಎಂದು ಸಮಾಜ ಸೇವಕ ಫಕೀರಪ್ಪ ಉಪ್ಪಾರ ಅವರು ಮಾತನಾಡಿದರು. ಉತ್ತಮ ಗುಣಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಹಿತವಾಗಿ ಮಿತವಾಗಿ ಮಾತನಾಡಿದಾಗ ನಮ್ಮಲ್ಲಿರುವ ಸಿಟ್ಟು ದೂರವಾಗಿ ನಾವು ಮಾತನಾಡಿದಾಗ ನಮ್ಮ ತೊಕದ ಮಾತಿಗೆ ಬೇಲೆ ಬರಲು ಸಾದ್ಯ ಎಂದು ಸಂಪನ್ಮೂಲ ವ್ಯಕ್ತಿ ಭೀಮಣ್ಣ ಹವಳಿ ಅವರು ಮಾತನಾಡಿದರು. ಶ್ರೀ ಭೀಮಾಂಬಿಕಾ ದೇವಿ ಶಿವಾನುಭವ ಸೇವಾ ಸಮಿತಿ ಅಧ್ಯಕ್ಷ ಶರಣಬಸಪ್ಪ, ದಾನಕೈ ಅವರು ಅಧ್ಯಕ್ಷತೆ ವಹಿಸಿ ಮಾತನಾಡಿ ಕೈ ಜಾರಿದರೆ ಕಾಲಿಗೆ ಮೂಲ,ನಾಲಿಗೆ ಜಾರಿದರೆ ದವಡಿಗೆ ಮೂಲ ಆದರಿಂದ ನಾವು ಮಾತನಾಡುವಾಗ ನಿಧಾನವಾಗಿ ವಿಚಾರಮಾಡಿ ಮಾತನಾಡಬೇಕು ಅಂದಾಗ ವಾದ ವಿವಾದಗಳಿಂದ ದೂರವಿರಲು ಸಾದ್ಯ, ಇತ್ತಿಚಿಗೆ ಸಮಾಜದಲ್ಲಿ ನಿವೇಶನ, ಹೊಲ,ಮನೆ ವಿಚಾರದಲ್ಲಿ ಹಣ ಪಡೆದುಕೊಂಡು ಅವರಿಗೆ ಆಸ್ತಿ ಕೊಡಲಾರದೆ ವಂಚಿಸಿ ,ಕೊಟ್ಡ ಮಾತಿಗೆ ಬೆಲೆ ಇಲ್ಲದಂತೆ ವಚನ ಭ್ರಷ್ಟರಾಗಿರುವ ಪ್ರಸಂಗಗಳು ಇಂದು ನಡೆಯುತ್ತಿವೆ ನಾವು ಜಾಗೃತರಾಗಬೇಕು ಎಂದರು. ಪ್ರಾಸ್ತಾವಿಕವಾಗಿ ಗುರುಮೂರ್ತಿ ಬಡಿಗೇರ, ಪ್ರಕಾಶ ರಾವಣಕಿ ಮಾತನಾಡಿದರು. ಈ ವೇಳೆ , ಕಳಕಪ್ಪ ಹಡಪದ , ಯಮನೂರಪ್ಪ ಹಳ್ಳಿಕೇರಿ ಸಹ ಕಲಾವಿದರಿಂದ ಸಂಗೀತ ಕಾರ್ಯಕ್ರಮ ಜರುಗಿ- ತು .ಈ ವೇಳೆ ಹಿರಿಯರಾದ ಮಲ್ಲನಗೌಡ ನಿಡಗುಂದಿ, ವೀರಪ್ಪ ರಾವಣಕಿ,ಯಮನೂರಪ್ಪ ಚಿಕ್ಕಗೌಡ್ರ,ಶೇಖರಗೌಡ ದ್ಯಾಮನಗೌಡ್ರ,ಅಮರೇಶ ಚಿಕ್ಕಗೌಡ್ರ,ಮಂಜಪ್ಪ ಭೂನಕೊಪ್ಪ, ಗಣೇಶ ನಿಡಗುಂದಿ, ಶರಣಪ್ಪ ಜರಕುಂಟಿ, ಬಸವರಾಜ ಮರಗಪ್ಪನವರು ಸೇರಿದಂತೆ ಇತರರು ಇದ್ದರು .ನಂತರ ಅನ್ನಸಂತರ್ಪಣೆ ಜರುಗಿತು.

# ಮಾರುತೇಶ್ವರನ ಅದ್ದೂರಿ ರಥೋತ್ಸವ ಸಂಪನ್ನ



**ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ :**

ತಾಲೂಕಿನ ಚಾಮಲಾಪುರ ಗ್ರಾಮದ ಮಾರುತೇಶ್ವರನ ಎರಡನೇ ವರ್ಷದ ಮಹಾ ರಥೋತ್ಸವ ಅದ್ದೂರಿ ಯಾಗಿ ನೆರವೇರಿತು ಮಹಾ ರಥೋತ್ಸವಕ್ಕೆ ಚಾಲನೆಯನ್ನು ಸಿದ್ದೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು ಮೈನಳ್ಳಿ ಮತ್ತು ನಡೆದಾಡುವ ದೇವರೆಂದೇ ಪ್ರಸಿದ್ಧ ಹೊಂದಿರುವ ಅಭಿನವ ಕರಿಬಸವ ಮಹಾಸ್ವಾಮಿಗಳು ಚಾಲನೆಯನ್ನು ನೀಡಿದರು. ಭಕ್ತಾದಿಗಳನ್ನು ಉದ್ದೇಶಿಸಿ ಮಾತನಾಡಿದ ಕರಿ ಬಸವ ಮಹಾಸ್ವಾಮಿಗಳು ಪ್ರತಿ ವರ್ಷದಂತೆ ಈ ವರ್ಷವೂ ಮಾರುತೇಶ್ವರ ಮಹಾರಾತ್ಯೋತ್ಸವ ನಿಮಿತ್ಯ ನಾನು ಬಂದಿರುವೆ ಇಲ್ಲಿ ಸೇರಿರುವ ಜನೋತ್ಸವವನ್ನು ನೋಡಿ ನನಗೆ ತುಂಬಾ ಖುಷಿಯಾಯಿತು ಇದೇ ರೀತಿ ಪ್ರತಿ ವರ್ಷ ಇನ್ನೂ ಹೆಚ್ಚಿನ ಜನಸಂಖ್ಯೆ ಸೇರಿ ಇನ್ನೂ ವಿಜೃಂಭಣೆಯಿಂದ ಆಚರಿಸಬೇಕು ಮತ್ತು ದೇಶದ ಬೆನ್ನೆಲುಬಾಗಿರುವ ರೈತನಿಗೆ ದೇಶ ಕಾಯುವ ಸೈನಿಕನಿಗೆ ಒಳಿತಾಗಲೆಂದು ಸಮಯಕ್ಕೆ ಸರಿಯಾಗಿ ಮಳೆ ಬೆಳೆ ಬರಲೆಂದು ಆ ದೇವರಲ್ಲಿ ಪ್ರಾರ್ಥಿಸೋಣ ಎಂದರು ಹಾಗೂ ಯುವಕರು ದುಶ್ಚಟಕ್ಕೆ ಬಲಿಯಾಗದೆ ಸಮಾಜಮುಖಿ ಕೆಲಸಗಳಲ್ಲಿ ಭಾಗಿಯಾಗಲಿ ಎಂದು ಆಶೀರ್ವಚನ ನೀಡಿದರು. ಈ ಸಂದರ್ಭದಲ್ಲಿ ಊರಿನ ಗುರು ಹಿರಿಯರು ಸುತ್ತಮುತ್ತಲಿನ ಯುವಕರು ಗ್ರಾಮಸ್ಥರು ವಿಜ್ರಂಬಣೆಯಿಂದ ಪಾಲ್ಗೊಂಡು ಮಾರುತೇಶ್ವರನ ಕೃಪೆಗೆ ಪಾತ್ರರಾದರು.

# ವಿಧ್ಯಾರ್ಥಿಗಳಿಗೆ ಯುವ ಸ್ಪಂದನ ಅರಿವು ಕಾರ್ಯಕ್ರಮ





ಲಿಂಗಸ್ಗೂರು: ತಾಲೂಕಿನ ಗೆಜ್ಜಲಗಟ್ಟಾ ಗ್ರಾಮದ ಟಾಗೋರ್ ಸ್ಮಾರಕ ಪ್ರೌಢ ಶಾಲೆಯಲ್ಲಿ ಯುವ ಸಬಲೀಕರಣ ಹಾಗೂ ಕ್ರೀಡಾ ಇಲಾಖೆ ಹಾಗೂ ಬೆಂಗಳೂರು ನಿಮ್ಹಾನ್ಸ್ ಸಹಯೋಗದೊಂದಿಗೆ ಆಗಮಿಸಿರುವ ರಾಯಚೂರು ಜಿಲ್ಲೆಯ ಯುವ ಪರಿವರ್ತಕರಾದ ಲಕ್ಷ್ಮಣ ಮಡಿವಾಳ ರವರಿಂದ ವಿಧ್ಯಾರ್ಥಿಗಳಿಗೆ ಯುವ ಸ್ಪಂದನ ಅರಿವು ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು, ಈ ಸಂದರ್ಭದಲ್ಲಿ ಯುವ ಸ್ಪಂದನ ಅರಿವು ಕಾರ್ಯಕ್ರಮ ಬಗ್ಗೆ ಯುವ ಪರಿವರ್ತಕರಾದ ಲಕ್ಷ್ಮಣ ಮಡಿವಾಳ ರವರು ವಿದ್ಯಾರ್ಥಿ ಸಮೂಹಕ್ಕೆ ಆರೋಗ್ಯ ಮತ್ತು ಜೀವನ ಶೈಲಿ, ಸಂಬಂಧಗಳು, ವ್ಯಕ್ತಿತ್ವ ಬೆಳವಣಿಗೆ, ಶಿಕ್ಷಣ,ಭಾವನೆಗಳು,ಸುರಕ್ಷತೆಯ ಬಗ್ಗೆ ಹಾಗೂ ಹೆಣ್ಣು ಮಕ್ಕಳಿಗೆ ವೈಯಕ್ತಿಕ ಸ್ವಚ್ಛತೆ ಬಗ್ಗೆ ಹಾಗೂ ಸಮಾಜದಲ್ಲಿ ಉತ್ತಮ ಪ್ರಜೆಗಳಾಗಿ ಎಲ್ಲಾ ಕ್ಷೇತ್ರಗಳಲ್ಲಿ ನಾಯಕತ್ವದ ಗುಣಗಳನ್ನು ಬೆಳಿಸಿಕೊಳ್ಳಲು ಮಾರ್ಗದರ್ಶನ ಹಾಗೂ ಹಲವಾರು ವಿಷಯಗಳ ಕುರಿತು ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದರು

ಈ ಸಂದರ್ಭದಲ್ಲಿ ಶಾಲೆಯ ಮುಖ್ಯೋಪಾಧ್ಯಾಯರಾದ ವೆಂಕಟೇಶ ಸರ್ ಹಾಗೂ ಶಿಕ್ಷಕವೃಂದ ಹಾಗೂ ವಿದ್ಯಾರ್ಥಿಗಳು ಸೇರಿ

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ನಿಮ್ಹಾನ್ಸ್ ಸಹಯೋಗದೊಂದಿಗೆ ಆಗಮಿಸಿ ಉಪನ್ಯಾಸ ನೀಡಿರುವ ಯುವ ಪರಿವರ್ತಕರಾದ ಲಕ್ಷ್ಮಣ ಮಡಿವಾಳ ರವರಿಗೆ ಸನ್ಮಾನಿಸಿ ಗೌರವಿಸಿದರು....

# ಡಿ. 23 ರಂದು ಅಯ್ಯಪ್ಪ ಸ್ವಾಮಿ ಮಂಡಲ ಪೂಜೆ ಹಾಗೂ ಉತ್ಸವ ಮೂರ್ತಿ ಮೆರವಣಿಗೆ ಮನೋಹರ ರೆಡ್ಡಿ



ಲಿಂಗಸುಗೂರು:ಪಟ್ಟಣದ ರಾಯಚೂರು ರಸ್ತೆಯಲ್ಲಿರುವ ಲಕ್ಷ್ಮೀದೇವಿ ದೇವಸ್ಥಾನ ಹತ್ತಿರ 17 ನೇ ವಾರ್ಡಿನ ಶ್ರೀ ಅಯ್ಯಪ್ಪ ಸ್ವಾಮಿ ದೇವಸ್ಥಾನ ಚಾರಿಟೇಬಲ್ ಟ್ರಸ್ಟ ಹಾಗೂ ಶ್ರೀ.ಅಯ್ಯಪ್ಪ ಸ್ವಾಮಿ ಭಕ್ತ ಮಂಡಳಿ ವತಿಯಿಂದ ಪಟ್ಟಣದ ಶ್ರೀ ಅಯ್ಯಪ್ಪ–ಸ್ವಾಮಿ ದೇವಸ್ಥಾನದಲ್ಲಿ ಮಹಾ ಗಣಪತಿ ಹೋಮ ಮಂಡಲ ಪೂಜೆ,ಉತ್ಸವ ಮೂರ್ತಿ ಮೆರವಣಿಗೆ ಸೇರಿ ವಿವಿಧ ಧಾರ್ಮಿಕ ಸೇವೆಗಳು ಡಿ 23 – ರಂದು ನಡೆಯಲಿದ್ದು ಭಕ್ತಾದಿಗಳು – ಸಾರ್ವಜನಿಕರು ದೇವಸ್ಥಾನಕ್ಕೆ ಆಗಮಸಿ ಅಯ್ಯಪ್ಪ ಸ್ವಾಮಿ ಕೃಪೆಗೆ ಪಾತ್ರರಾಗಬೇಕು ಎಂದು ಟ್ರಸ್ಟ್ ಅಧ್ಯಕ್ಷ ಮನೋಹರ

ರೆಡ್ಡಿ ಮುನ್ನೂರು ಹೇಳಿದರು.ಪಟ್ಟಣದ ಪತ್ರಿಕಾ ಭವನದ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದ ಅವರು ದಿನಾಂಕ:23/12/2025 ರಂದು ಕೇರಳದ ರಾಜ್ಯದ ಶ್ರೀ ತಂತ್ರಿ ರತ್ನ ವೇದ ಭೂಷಣ ಪ್ರಶಾಂತ ನಂಬೊದರಿ ಶಬರಿಮಲೈ ಅವರಿಂದ

ದೇವಸ್ಥಾನದಲ್ಲಿ ಎಲ್ಲಾ ದೇವರುಗಳಿಗೆ ವಿಶೇಷ ಹೋಮ ಪೂಜೆ ಕಾರ್ಯಕ್ರಮ ಪ್ರತಿ ವರ್ಷದಂತೆ ಈ ವರ್ಷವೂ ಕೂಡ ಮಂಡಲ ಪೂಜೆ, ಬೆಳಿಗ್ಗೆ 6.00 ಗಂಟೆಯಿಂದ 1.00 ಗಂಟೆಯವರೆಗೆ ಹೊಮ ಹವನ,ನಂತರ ಈಶ್ವರ ದೇವಸ್ಥಾನದಿಂದ ಶ್ರೀ ಅಯ್ಯಪ್ಪ ಸ್ವಾಮಿ ದೇವಸ್ಥಾದವರೆಗೆ ಅಯ್ಯಪ್ಪ ಸ್ವಾಮಿ ದೇವಸ್ಥಾನದ ವರೆಗೆ ಉತ್ಸವ ಮೂರ್ತಿ ಹಾಗೂ ಅಯ್ಯಪ್ಪ ಸ್ವಾಮಿ ಫೋಟೋ ಮೇರವಣಿಗೆ ಇರುತ್ತದೆ. ಮಧ್ಯಾಹ್ನ 1.30 ರಿಂದ 3 ಗಂಟೆವರೆಗೆ ಅನ್ನಸಂತರ್ಪಣೆ, ಸಾಯಕಾಂಲ 6.00 ಗಂಟೆಯಿಂದ ದೀಪಾರಾದನೆ

ದಿಪೋತ್ಸವ ಮತ್ತು ಶ್ರೀ ಅಯ್ಯಪ್ಪ ಸ್ವಾಮಿ ಮಾಲೆ ಧಾರಿಗಳಿಂದ 18 ಮೇಟ್ಟಿಲು ಪಡಿ ಪೂಜೆ ಹಮ್ಮಿಕೊಳ್ಳಲಾಗಿದೆ. ಹಾಗೂ ದಿನಾಂಕ 8/01/2026 ರಂದು ಗುರು ಸ್ವಾಮಿಗಳಿಂದ ಅಯ್ಯಪ್ಪ ಸ್ವಾಮಿ ಮಾಲೆಧಾರಿಗಳಿಗೆ ತುಪ್ಪದಕಾಯಿ ಇರುಮುಡಿ ಕಟ್ಟುತ್ತಾರೆ. ಅದೆ ದಿನ ಸಾಯಂಕಾಲ ಕೇರಳ ರಾಜ್ಯದ ಶಬರಿ ಮಲೇ ಶ್ರೀ.ಅಯ್ಯಪ್ಪ ಸ್ವಾಮಿ ಗೆ ತೆರಳುತ್ತಾರೆ ಎಂದು ಹೇಳಿದರು.ಈ ಸಂದರ್ಭದಲ್ಲಿ ಈರಣ್ಣ ಗುರುಸ್ವಾಮಿ,ಸಿದ್ರಾಮು ಗುರುಸ್ವಾಮಿ ನಗರಗುಂಡ,ದೇವಸ್ಥಾನದ ವ್ಯವಸ್ಥಾಪಕ ರಾಜೇಶ್ ಮಾಣಿಕ್,ಇದ್ದರು.



ಭಾರತ ಸರ್ಕಾರದ ಆಹಾರ ಮತ್ತು ನಾಗರಿಕ ಪೂರೈಕೆ ಸಚಿವ ಪ್ರಹ್ಲಾದ ಜೋಶಿ ಅವರು ಶನಿವಾರ ಬಾಳೆಹೊನ್ನೂರು ಶ್ರೀ ಜಗದ್ಗುರು ರಂಭಾಪುರಿ ಪೀಠಕ್ಕೆ ಭೇಟಿ ನೀಡಿದರು. ಕ್ಷೇತ್ರನಾಥ ಶ್ರೀ ವೀರಭದ್ರಸ್ವಾಮಿ ಮತ್ತು ಶ್ರೀ ಜಗದ್ಗುರು ರೇಣುಕಾಚಾರ್ಯ ಮಂದಿರದಲ್ಲಿ ಪೂಜೆ ಸಲ್ಲಿಸಿದರು. ನಂತರ ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳವರ ದರ್ಶನಾಶೀರ್ವಾದ ಪಡೆದರು. ಈ ಸಂದರ್ಭದಲ್ಲಿ ಸಂಸದ ಕೋಟಾ ಶ್ರೀನಿವಾಸ ಪೂಜಾರಿ, ಮಾಜಿ ಸಚಿವ ಡಿ.ಎನ್.ಜೀವರಾಜ, ವಿಧಾನ ಪರಿಷತ್ ಸದಸ್ಯ ಮಾಜಿ ಸಚಿವ ಸಿ.ಟಿ.ರವಿ ಸೇರಿದಂತೆ ಹಲವಾರು ಗಣ್ಯರು ಉಪಸ್ಥಿತರಿದ್ದರು.

# ತುರವಿಹಾಳದಲ್ಲಿ ಉಪ ಚುನಾವಣೆ; ಶಸ್ತ್ರಗಳನ್ನು ಠಾಣೆಯಲ್ಲಿಡಲು ಆದೇಶ

**ಮಲ್ಲಮ್ಮ ನುಡಿ ವಾರ್ತೆ ರಾಯಚೂರು:**

ನಗರ ಸ್ಥಳೀಯ ಸಂಸ್ಥೆ ಸಾರ್ವತ್ರಿಕ ಹಾಗೂ ಉಪ ಚುನಾವಣೆ–2025ರ ಚುನಾವಣಾ ವೇಳಾಪಟ್ಟಿ ಘೋಷಣೆಯಾಗಿರುವ ಹಿನ್ನಲೆಯಲ್ಲಿ ಈ ಚುನಾವಣೆಯು ಶಾಂತಿಯುತವಾಗಿ ನಡೆಸಲು ಮುಂಜಾಗ್ರತೆ ಕ್ರಮವಾಗಿ (ರಾಷ್ಟ್ರೀಕೃತ ಬ್ಯಾಂಕುಗಳು ಹಾಗೂ ರಿಜರ್ವ ಬ್ಯಾಂಕ್ ಅವರಿಂದ ಅನುಮೋದಿಸಿದ ಶೆಡ್ಯೂಲ್ಡ್ ಬ್ಯಾಂಕುಗಳ ಸೆಕ್ಯೂರಟಿ ಗಾರ್ಡಗಳ, ಆಯುಧಗಳನ್ನು ಹೊರತುಪಡಿಸಿ) ಚುನಾವಣಾ ಪ್ರಕ್ರಿಯೆ ಮುಗಿಯುವರೆಗೆ ಸಿಂಧನೂರು ತಾಲೂಕಿನ ತುರ್ವಿಹಾಳ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಆಯುಧಗಳನ್ನು ಪರವಾನಿಗೆದಾರರು ಸಾರ್ವಜನಿಕ ಸ್ಥಳಗಳಲ್ಲಿ ಹೊತ್ತು ಪ್ರದರ್ಶನ ಮಾಡುವುದನ್ನು ನಿಷೇಧಿಸಿ ಹಾಗೂ ಆಯುಧಗಳನ್ನು ಸಂಬಂಧಪಟ್ಟ ಪೊಲೀಸ್ ಠಾಣೆಗೆ ಠೇವಣಿ ಮಾಡುವಂತೆ ಜಿಲ್ಲಾ ದಂಡಾಧಿಕಾರಿಗಳು ಆಗಿರುವ ಜಿಲ್ಲಾಧಿಕಾರಿಗಳಾದ ನಿತೀಶ್ ಕೆ ಅವರು ಆದೇಶ ಹೊರಡಿಸಿದ್ದಾರೆ.

# ಡಿಸೆಂಬರ್ 22ರಂದು ಉದ್ಯೋಗಕ್ಕಾಗಿ ಸಂದರ್ಶನ

**ಮಲ್ಲಮ್ಮ ನುಡಿ ವಾರ್ತೆ ರಾಯಚೂರು:**

ನಗರದ ಮಾಣಿಕ ನಗರದಲ್ಲಿ ಡಿಸೆಂಬರ್ 22ರ ಬೆಳಿಗ್ಗೆ 10 ಗಂಟೆಗೆ ಉದ್ಯೋಗಕ್ಕಾಗಿ ಸಂದರ್ಶನವು ಆಯೋಜಿಸಲಾಗಿದೆ. ಐ,ಟಿ,ಐ,ಕೋರ್ಸನ ಎಲೆಕ್ಟ್ರಿಶೀಯನ್, ಎಲೆಕ್ಟ್ರಾನಿಕ್, ಮೆಕ್ಯಾನಿಕ್, ಫೀಟರ್, ಟರ್ನರ್, ಎಮ್,ಎಮ್,ವಿ, ಎಮ್,ಆರ್,ಎಸಿ, ವೆಲ್ಡರ್, ಕೋಪಾ ವೃತ್ತಿಯ ತರಬೇತುದಾರರು ಮತ್ತು ಡಿಪ್ಲೋಮಾ ಹಾಗೂ ಪದವಿಯಲ್ಲಿ ಉತ್ತೀರ್ಣರಾದ ಪುರುಷ ಹಾಗೂ ಮಹಿಳಾ ಅಭ್ಯರ್ಥಿಗಳು ಇದರ ಸದುಪಯೋಗವನ್ನು ಪಡೆಯಬಹುದಾಗಿದೆ.

ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ಸಹಯೋಗದಲ್ಲಿ ಉದ್ಯೋಗದ ಸಂದರ್ಶನಕ್ಕಾಗಿ ರಾಯಚೂರಿನ ಸಾವಿತ್ರಿಗ್ರೂಪ್, ಹೋಂಡಾ ಮೋರ್ಸ ಬೆಂಗಳೂರಿನ ಟಾಟಾ ಎಲೆಕ್ಟ್ರಿಕಲ್, ಬಳ್ಳಾರಿಯ ಜೆ,ಎಸ್.ಡಬ್ಲ್ಯು, ಕೋಲಾರದ ಟಾಟಾ ಮೋರ್ಸ, ಹೋಂಡಾ ಮೋರ್ಸ, ಕಲಬುರಗಿಯ ಅರ್ಥ ಮೂವರ್ಸ, ಬೆಂಗಳೂರಿನ ವಿಸನ್ ಇಂಡಿಯಾ ಲಿಮಿಟೆಡ್, ಹೈದ್ರಾಬಾದ್ ಎಮ್.ಆರ್,ಎಫ್ ಟೈರ್ಸ ಸೇರಿದಂತೆ ಪ್ರತಿಷ್ಠಿತ ಕಂಪನಿಗಳ ಪ್ರತಿನಿಧಿಗಳು ಆಗಮಿಸುತ್ತಿದ್ದು, ಸ್ಥಳದಲ್ಲಿಯೇ ಸಂದರ್ಶನ ನೆಡೆಸಿ ಸೂಕ್ತ ಅಭ್ಯರ್ಥಿಗಳನ್ನು ಆಯ್ಕೆ ಮಾಡಿಕೊಳ್ಳಲಾಗುತ್ತದೆ.

ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 7760776556, 9590649335, 9035064582ಗೆ ಸಂಪರ್ಕ ಮಾಡಬಹುದಾಗಿದೆ ಎಂದು ರಾಯಚೂರಿನ ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ರಾಯಚೂರು ಗ್ರಾಮೀಣ ಪ್ರದೇಶದಲ್ಲಿ ಡಿ. 22ರಂದು ವಿದ್ಯುತ್ ವ್ಯತ್ಯಯ

**ಮಲ್ಲಮ್ಮ ನುಡಿ ವಾರ್ತೆ ರಾಯಚೂರು:**

ಇಲ್ಲಿನ ಜೆಸ್ಕಾಂ ಗ್ರಾಮೀಣ ಕಾರ್ಯ ಮತ್ತು ಪಾಲನೆ ಉಪ ವಿಭಾಗದ ವ್ಯಾಪ್ತಿಯ 110/11 ಕೆವಿ ಮಲಿಯಾಬಾದ ವಿದ್ಯುತ್ ಉಪ ಕೇಂದ್ರದಲ್ಲಿ ತುರ್ತು ನಿರ್ವಹಣಾ ಕಾರ್ಯ ಹಮ್ಮಿಕೊಂಡಿರುವ ಪ್ರಯುಕ್ತ ಡಿಸೆಂಬರ್ 22ರ ಬೆಳಿಗ್ಗೆ 10 ರಿಂದ ಸಂಜೆ 4 ಗಂಟೆವರೆಗೆ ಮಲಿಯಾಬಾದ ವಿದ್ಯುತ್ ಉಪ ಕೇಂದ್ರದ ವ್ಯಾಪ್ತಿಯಲ್ಲಿ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದ್ದು, ಗ್ರಾಹಕರು ಸಹಕರಿಸುವಂತೆ ಜೆಸ್ಕಾಂ ಗ್ರಾಮೀಣ ಕಾರ್ಯ ಮತ್ತು ಪಾಲನೆ ಉಪ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ರಾಯಚೂರು ಸಿಟಿಯ ಹೋಟೆಲ್, ರೆಸ್ಟೋರೆಂಟ್‌ಗಳ ಮೇಲೆ ಮುಂದುವರೆದ ದಾಳಿ: ಆಹಾರದ ಗುಣಮಟ್ಟ, ಶುಚಿತ್ವ ಪರಿಶೀಲನೆ



**ಮಲ್ಲಮ್ಮ ನುಡಿ ವಾರ್ತೆ**

**ರಾಯಚೂರು:** ಜಿಲ್ಲೆಯ ಜಿಲ್ಲಾಧಿಕಾರಿಗಳಾದ ನಿತೀಶ್ ಕೆ. ಹಾಗೂ ರಾಯಚೂರು ಮಹಾನಗರ ಪಾಲಿಕೆಯ ಆಯುಕ್ತರಾದ ಜುಬಿನ್ ಮೊಹಪಾತ್ರ ಅವರು ಸಾರ್ವಜನಿಕ ಹಿತದೃಷ್ಟಿಯಿಂದಾಗಿ ನೀಡಿದ ನಿರ್ದೇಶನದ ಮೇರೆಗೆ ರಾಯಚೂರು ವಿಭಾಗದ ಸಹಾಯಕ ಆಯಕ್ತರಾದ ಗಜಾನನ ಬಾಳೆ ಹಾಗೂ ಇನ್ನಿತರ ಅಧಿಕಾರಿಗಳ ನೇತೃತ್ವದಲ್ಲಿ ಡಿ.18ರಂದು ಸಂಜೆ ಹೊತ್ತಿಗೆ ರಾಯಚೂರು ಸಿಟಿಯಲ್ಲಿನ ಕೆಲ ಹೊಟೆಲಗಳು ಮತ್ತು ರೆಸ್ಟೊರೆಂಟಗಳ ಮೇಲೆ ದಾಳಿ ನಡೆಸಿ ಪರಿಶೀಲಿಸಿದರು.

ರಾಯಚೂರು ಮಹಾನಗರ ಪಾಲಿಕೆಯ ಸಮಿತಿ ಕಾರ್ಯದರ್ಶಿ ಶ್ರೀಕೃಷ್ಣ ಶಾವಂತಗೇರಿ, ಆಹಾರ ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ಉಪ ನಿರ್ದೇಶಕರಾದ ನಜೀರ್ ಅಹಮ್ಮದ್, ರಾಯಚೂರು ತಾಲೂಕು ತಹಶೀಲ್ದಾರ್ ಸುರೇಶ ವರ್ಮ, ಮಹಾನಗರ ಪಾಲಿಕೆಯ ಆರೋಗ್ಯಾಧಿಕಾರಿ ಡಾ.ಮಹಮ್ಮದ್ ಶಾಕೀರ್ ಮೊಹಿಯುದ್ದಿನ್, ಪಾಲಿಕೆ ಸಂಘಟನಾಧಿಕಾರಿ ಕೃಷ್ಣ ಕಟ್ಟಿಮನಿ ಮತ್ತು ಪಾಲಿಕೆ ನಿರೀಕ್ಷಣಾಧಿಕಾರಿಗಳು ಮತ್ತು ಇನ್ನೀತರರನ್ನು ಒಳಗೊಂಡ ಅಧಿಕಾರಿಗಳು ಮತ್ತು ಸಿಬ್ಬಂದಿಯ ತಂಡವು ಸ್ಟೇಷನ್ ರಸ್ತೆ ಸೇರಿದಂತೆ ನಗರದ ವಿವಿಧ ಹೋಟೆಲ್ ಹಾಗೂ ರೆಸ್ಟೋರಂಟ್‌ಗಳ ಮೇಲೆ ದಾಳಿ ನಡೆಸಿ, ಅಲ್ಲಿ ತಯಾರಿಸಿದ್ಧ ಬೇರೆ ಬೇರೆ ನಮೂನೆಯ ಉಪಹಾರ ಮತ್ತು ಊಟದ ಆಹಾರದ ಗುಣಮಟ್ಟ, ಅಲ್ಲಿನ ಶುಚಿತ್ವ, ಅಡುಗೆ ತಯಾರಕರ ಆರೋಗ್ಯ, ಲೈಸೆನ್ಸ್ ಮತ್ತು ಇನ್ನೀತರ ವಿಷಯಗಳ ಬಗ್ಗೆ ಸಮಗ್ರ ಪರಿಶೀಲಿಸಿ, ದುರವಸ್ಥೆ ಕಂಡು ಬಂದ ಕಡೆಗಳಲ್ಲಿನ ಹೊಟೆಲ್ ಹಾಗೂ ರೆಸ್ಟೊರೆಂಟಗಳ ಮೇಲೆ ದಂಡ ವಿದಿಸಿ, ಸರಿಪಡಿಸಿಕೊಳ್ಳಲು ಎಚ್ಚರಿಕೆ ನೀಡಿದರು.

ಡಾ.ಬಿ.ಆರ್.ಅಂಬೇಡ್ಕರ್ ವೃತ್ತದಲ್ಲಿನ ಪ್ರಮುಖ ಹೋಟೆಲ್‌ಗಳ ಮೇಲೆ ದಾಳಿ ನಡೆಸಿ ಅಲ್ಲಿನ ಅಡುಗೆ ಕೋಣೆಗಳಿಗೆ ಪ್ರವೇಶಿಸಿ ಆಹಾರ ಸಿದ್ಧತೆಯ ಪರಿ, ಕುಡಿವ ನೀರು ಸಂಗ್ರಹಕ್ಕೆ ಬಳಸಿದ ತೊಟ್ಟಿ ಮತ್ತು ಅಡುಗೆಗೆ ಬಳಸುವ ಪದಾರ್ಥಗಳನ್ನು ಪರಿಶೀಲಿಸಿದರು.

ಅಡುಗೆಗೆ ಸಂಗ್ರಹಿಸಿದ ದವಸ–ಧಾನ್ಯಗಳ ಗುಣಮಟ್ಟ, ತರಕಾರಿಗಳು, ಖರೀದಿಸಿದ್ದ ಕೆಲ ಪದಾರ್ಥಗಳ ಕಾಲಾವಧಿ ವಿವರ, ಅಡುಗೆ ಎಣ್ಣೆ, ಉಪ್ಪಿನ ಗುಣಮಟ್ಟದ ಪ್ರಮಾಣವನ್ನು ಪರಿಶೀಲಿಸಿದರು.

ಕೆಲ ಹೋಟೆಲ್‌ಗಳಲ್ಲಿ ಹಾಕಿದ್ದ ಉಪಹಾರ ಮತ್ತು ಊಟದ ದರಪಟ್ಟಿಯ ಬಗ್ಗೆ ಸಹ ಪರಿಶೀಲನೆ ಮಾಡಿದರು.

ಈ ವೇಳೆ ರಾಯಚೂರು ವಿಭಾಗದ ಸಹಾಯಕ ಆಯುಕ್ತರು ಮಾತನಾಡಿ, ಆಹಾರ ಸುರಕ್ಷತೆ ಮತ್ತು ಮಾನದಂಡಗಳ ಕಾಯ್ದೆ 2006ರ ಹಾಗೂ ಆಹಾರ ಸುರಕ್ಷತೆ ಮತ್ತು ಮಾನದಂಡಗಳ ನಿಯಮಗಳು 2011ರ ಸೂಚನೆಗಳನ್ನು ಕಡ್ಡಾಯ ಅನುಸರಿಸಬೇಕು. ಈ ಸುಧಾರಣಾ ಸೂಚನೆಗಳನ್ನು ಅನುಸರಿಸಲು ವಿಫಲವಾದರೆ ಹೊಟೆಲ್ ರೆಸ್ಟೊರೆಂಟಗಳ ಪರವಾನಿಗೆಯನ್ನು ಅಮಾನತುಗೊಳಿಸಿ ಕಾನೂನು ಕ್ರಮಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು.

# ಜನರಿಗೆ ಗೃಹಜ್ಯೋತಿಯಲ್ಲ, ಕತ್ತಲೆ ಜ್ಯೋತಿ: ಸರ್ಕಾರದ ವಿರುದ್ಧ ಚಂದ್ರಶೇಖರಗೌಡ ಮಾಗನೂರ ಕಿಡಿ



ಯಾದಗಿರಿ: ಯಾದಗಿರಿ ವಿಧಾನಸಭಾ ಕ್ಷೇತ್ರದ ಹಳ್ಳಿಗಳಲ್ಲಿ ರೈತರು ದಿನನಿತ್ಯ ವಿದ್ಯುತ್ ಕೊರತೆಯಿಂದ ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ ಎಂದು ಜಿಲ್ಲಾ ಬಿಜೆಪಿ ಮಾಜಿ ಜಿಲ್ಲಾಧ್ಯಕ್ಷ ಚಂದ್ರಶೇಖರಗೌಡ ಮಾಗನೂರ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಗೃಹಜ್ಯೋತಿ ಹೆಸರಿನಲ್ಲಿ ಉಚಿತ ವಿದ್ಯುತ್ ಎಂದು ಘೋಷಣೆ ಮಾಡುತ್ತಿರುವ ಸರ್ಕಾರ ವಾಸ್ತವದಲ್ಲಿ ಸದಾ ವಿದ್ಯುತ್ ಕಡಿತ ಮಾಡುವ ಮೂಲಕ ಜನರಿಗೆ 'ಕತ್ತಲೆ ಜ್ಯೋತಿ'ಯ ಭಾಗ್ಯ ನೀಡುತ್ತಿದೆ ಎಂದು ಕಿಡಿಕಾರಿದರು.

ಕೃಷಿ ಪಂಪ್‌ಸೆಟ್‌ಗಳಿಗೆ ನಿರಂತರ ವಿದ್ಯುತ್ ಇಲ್ಲದ ಕಾರಣ ರೈತರ ಕೃಷಿ ಕಾರ್ಯಗಳು ಸ್ಥಗಿ–ತಗೊಂಡಿದ್ದು, ಹೊಲಗಳಿಗೆ ನೀರು ಹಾಕಲಾಗದೆ ಬೆಳೆಗಳು ಒಣಗುವ ಸ್ಥಿತಿ ನಿರ್ಮಾಣವಾಗಿದೆ. ವಿದ್ಯುತ್ ಇಲ್ಲದೇ ಹೋಗುವುದರಿಂದ ರೈತರ ದಿನನಿತ್ಯದ ಕೆಲಸಗಳು ಅಸ್ತವ್ಯಸ್ತವಾಗಿದ್ದು, ಆರ್ಥಿಕ ನಷ್ಟವೂ ಹೆಚ್ಚುತ್ತಿದೆ ಎಂದು ಹೇಳಿದರು.

ಅಲ್ಲದೇ, ವಿದ್ಯಾರ್ಥಿಗಳ ಪರೀಕ್ಷಾ ಸಮಯ ಹತ್ತಿರವಿರುವಾಗಲೇ ಅಘೋಷಿತ ಲೋಡ್‌ಶೆಡಿಂಗ್ ನಡೆಸುತ್ತಿರುವುದು ಅವರ ವಿದ್ಯಾಭ್ಯಾಸಕ್ಕೆ ಗಂಭೀರ ಅಡ್ಡಿಯಾಗುತ್ತಿದೆ. ಈಗಾಗಲೇ ಶೈಕ್ಷಣಿಕವಾಗಿ ಹಿಂದುಳಿದ ಜಿಲ್ಲೆಯೆಂದು ಹಣೆಪಟ್ಟಿ ಪಡೆದಿರುವ ಯಾದಗಿರಿ ಜಿಲ್ಲೆಗೆ, ವಿದ್ಯುತ್ ಕಡಿತ ಮಾಡುವ ಮೂಲಕ ಸರ್ಕಾರ ಮತ್ತಷ್ಟು ಶೈಕ್ಷಣಿಕ ಹಿಂದುಳಿತವನ್ನು ತಳ್ಳುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕನಿಷ್ಠ ಎರಡನೇ ಬೆಳೆಗಾದರೂ ರೈತರಿಗೆ ಸಮರ್ಪಕ, ನಿಗದಿತ ಸಮಯದಲ್ಲಿ ವಿದ್ಯುತ್ ಒದಗಿಸಬೇಕು. ರೈತರ ಸಮಸ್ಯೆಗಳು ಹಾಗೂ ಜನಸಾಮಾನ್ಯರ ಸಂಕಷ್ಟಗಳನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿ ತಕ್ಷಣ ವಿದ್ಯುತ್ ಪೂರೈಕೆ ವ್ಯವಸ್ಥೆ ಸರಿಪಡಿಸಬೇಕು. ಇಲ್ಲದಿದ್ದರೆ ರೈತರು, ವಿದ್ಯಾರ್ಥಿಗಳು ಮತ್ತು ಜನರ ಪರವಾಗಿ ತೀವ್ರ ಹೋರಾಟ ಕೈಗೊಳ್ಳಲಾಗುವುದು ಎಂದು ಚಂದ್ರಶೇಖರಗೌಡ ಮಾಗನೂರ ಸರ್ಕಾರಕ್ಕೆ ಎಚ್ಚರಿಕೆ ನೀಡಿದರು.

## ಐದು ವರ್ಷದೊಳಗಿನ ಮಕ್ಕಳಿಗೆ ಎರಡು ಹನಿ ಪೋಲಿಯೋ ಕಡ್ಡಾಯವಾಗಿ ಹಾಕಿಸಿ – ಜಿಲ್ಲಾಧಿಕಾರಿ ಡಾ. ಇಟ್ನಾಳ

ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ : ಜಿಲ್ಲೆಯಲ್ಲಿ ಡಿಸೆಂಬರ್ 21 ರಿಂದ ನಡೆಯಲಿರುವ ರಾಷ್ಟ್ರೀಯ ಪಲ್ಸ್ ಪೋಲಿಯೋ ಕಾರ್ಯಕ್ರಮದಡಿ ಸಾರ್ವಜನಿಕರು ತಮ್ಮ ಹತ್ತಿರದ ಅಂಗನವಾಡಿ ಕೇಂದ್ರ, ಆರೋಗ್ಯ ಕೇಂದ್ರ ಅಥವಾ ಸರ್ಕಾರಿ ಆಸ್ಪತ್ರೆಗಳಿಗೆ ತೆರಳಿ ಐದು ವರ್ಷದೊಳಗಿನ ಎಲ್ಲಾ ಮಕ್ಕಳಿಗೆ ಎರಡು ಹನಿ ಪೋಲಿಯೋ ಲಸಿಕೆಯನ್ನು ಕಡ್ಡಾಯವಾಗಿ ಹಾಕಿಸುವ ಮೂಲಕ ಶಾಶ್ವತ ಅಂಗವಿಕಲತೆಯನ್ನು ತರಬಲ್ಲ ಪೋಲಿಯೋ ರೋಗವನ್ನು ತಡೆಗಟ್ಟಬೇಕೆಂದು ಜಿಲ್ಲಾಧಿಕಾರಿ ಡಾ. ಸುರೇಶ ಬಿ. ಇಟ್ನಾಳ ಅವರು ಮನವಿ ಮಾಡಿದ್ದಾರೆ.



ಕೊಪ್ಪಳ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ವಿವಿಧ ಇಲಾಖೆಗಳ ಸಹಯೋಗದೊಂದಿಗೆ ಜಿಲ್ಲೆಯಲ್ಲಿ ಡಿ. 21 ರಿಂದ 24ರ ವರೆಗೆ ಐದು ವರ್ಷದೊಳಗಿನ ಎಲ್ಲಾ ಮಕ್ಕಳಿಗೂ ಪಲ್ಸ್ ಪೋಲಿಯೋ ಲಸಿಕೆ ಹಾಕುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಡಿ. 21 ರಂದು ಬೂತ್ ಮಟ್ಟದಲ್ಲಿ ಲಸಿಕೆ ಹಾಕಲಾಗುತ್ತದೆ. ನಂತರ ಮೂರು ದಿನಗಳ ಕಾಲ ಮನೆ ಮನೆಗೆ ಭೇಡಿನೀಡಿ, ಲಸಿಕಾ ಕಾರ್ಯಕರ್ತರು ಪೋಲಿಯೋ ಲಸಿಕೆ ಹಾಕುತ್ತಾರೆ.

ಜಿಲ್ಲೆಯಲ್ಲಿ ಸಮಸ್ಯಾತ್ಮಕ ಪ್ರದೇಶಗಳಾದ ಇಟ್ಟಗೆಭಟ್ಟಿ, ವಲಸೆ ಜನಾಂಗ, ಕಟ್ಟಡ ಕಾರ್ಮಿಕರ ಮಕ್ಕಳು, ಕಬ್ಬು ಕಟಾವು ಮಾಡುವ ಕಾರ್ಮಿಕ ಮಕ್ಕಳಿಗೆ ಲಸಿಕೆ ಹಾಕುವ ಕ್ರಿಯಾಯೋಜನೆ ಸಹ ರೂಪಿಸಿಕೊಳ್ಳಲಾಗಿದೆ ಹಾಗೂ ಈ ಕಾರ್ಯಕ್ರಮಕ್ಕೆ ಎಲ್ಲಾ ಇಲಾಖೆಗಳು ರೋಟರಿಕ್ಲಬ್, ಲಯನ್ಸ್ ಕ್ಲಬ್ ಮತ್ತು ಇತರೆ ಸರ್ಕಾರೇತರ ಸಂಸ್ಥೆಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿ, ಯಶಸ್ವಿಗೊಳಿಸಲಿದ್ದಾರೆ. ಈಗಾಗಲೇ ವಿವಿಧ ಇಲಾಖೆಗಳ ಜಿಲ್ಲಾಮಟ್ಟದ ಜಾಗೃತ ಸಮಿತಿ ಸಭೆ ನಡೆಸಿ, ವಿವಿಧ ಇಲಾಖೆಗಳ ಅಧಿಕಾರಿಗಳಿಗೆ ಜವಾಬ್ದಾರಿ ನೀಡಲಾಗಿದೆ. ಜಿಲ್ಲೆಯ ಎಲ್ಲಾ ಆರೋಗ್ಯ ಸಂಸ್ಥೆಗಳಲ್ಲಿ ಮತ್ತು ತಾಲೂಕಾ, ಜಿಲ್ಲಾಮಟ್ಟದಲ್ಲಿ ಕ್ರಿಯಾಯೋಜನೆ ತಯಾರಿಸಿಕೊಂಡು ಪೂರ್ವ ಸಿದ್ದತೆ ಮಾಡಿಕೊಳ್ಳಲಾಗಿದೆ.

ಜಿಲ್ಲೆಯಲ್ಲಿ 0 ದಿಂದ 5 ವರ್ಷದೊಳಗಿನ ಮಕ್ಕಳ ಸಂಖ್ಯೆಯ ಗುರಿ ಒಟ್ಟು 1,76,580 ಆಗಿದ್ದು, ಲಸಿಕಾ ಕಾರ್ಯಕ್ರಮಕ್ಕಾಗಿ 877 ಬೂತ್‌ಗಳು, 19 ಮೊಬೈಲ್ ತಂಡಗಳು, 59 ಟ್ರಾನ್ಸಿಟ್ ತಂಡಗಳು ಹಾಗೂ 2386 ಲಸಿಕಾ ಕಾರ್ಯಕರ್ತರನ್ನು ನೇಮಕ ಮಾಡಲಾಗಿದೆ. ಇದಲ್ಲದೇ ಪ್ರತಿ ತಾಲೂಕಿಗೆ ಗ್ರಾಮೀಣ ಮತ್ತು ನಗರ ಪ್ರದೇಶಗಳಿಗೆ ಜಿಲ್ಲಾಮಟ್ಟದ ಕಾರ್ಯಕ್ರಮ ಅನುಷ್ಠಾನಾಧಿಕಾರಿಗಳನ್ನು ನೋಡಲ್ ಅಧಿಕಾರಿಗಳನ್ನಾಗಿ ನೇಮಕ ಮಾಡಲಾಗಿದೆ. ವಿವಿಧ ವೃಂದದ ಅಧಿಕಾರಿ ಹಾಗೂ ಸಿಬ್ಬಂದಿಗಳನ್ನು ಕ್ಷೇತ್ರ ಭೇಟಿ ಮಾಡಲು ಮೇಲ್ವಿಚಾರಕರನ್ನಾಗಿ ನಿಯೋಜಿಸಲಾಗಿದೆ. ಒಟ್ಟಿನಲ್ಲಿ ಪಲ್ಸ್ ಪೋಲಿಯೋ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಎಲ್ಲಾ ರೀತಿಯಿಂದ ಸಿದ್ದತೆ ಮಾಡಿಕೊಳ್ಳಲಾಗಿದೆ.

ಭಾರತವು ಪೋಲಿಯೋ ಮುಕ್ತ ದೇಶವಾಗಿದೆ. ಆದರೆ ನಮ್ಮ ನೆರೆಯ ರಾಷ್ಟ್ರಗಳಲ್ಲಿ ಪೋಲಿಯೋ ರೋಗವು ಇನ್ನೂ ಭೀತಿಯನ್ನುಂಟುಮಾಡುತ್ತಿದ್ದು, ನಮ್ಮ ದೇಶದಲ್ಲೂ ಈ ರೋಗ ಮರುಕಳಿಸಬಹುದಾದ ಸಾಧ್ಯತೆ ಇದೆ. ಹಾಗಾಗಿ ಜಿಲ್ಲೆಯ ಸಾರ್ವಜನಿಕರು ತಮ್ಮ ಮನೆಯಲ್ಲಿರುವ ಐದು ವರ್ಷದೊಳಗಿನ ಮಗುವಿಗೆ ಪ್ರತಿ ಬಾರಿಯೂ ಎರಡು ಹನಿ ಲಸಿಕೆ ಹಾಕಿಸಿ, ಸಂಪೂರ್ಣ ರಕ್ಷಣೆಯನ್ನು ಖಚಿತಪಡಿಸಿಕೊಳ್ಳಬೇಕು.

ಪೋಲಿಯೋ ವಿರುದ್ಧ ಭಾರತ ಸಾಧಿಸಿರುವ ಗೆಲುವನ್ನು ಮುಂದುವರೆಸಲು ಕೊಪ್ಪಳ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್,

## ರಾಷ್ಟ್ರೀಯ ಡಯಾಲಿಸಿಸ್ ಸೇವೆ ಸದುಪಯೋಗ ಪಡೆದುಕೊಳ್ಳಿ: ಡಾ.ಯಲ್ಲಾ



**ಮಲ್ಲಮ್ಮ ನುಡಿ ವಾರ್ತೆ** ಬಳ್ಳಾರಿ,ಡಿ ಜಿಲ್ಲೆಯ ಸರ್ಕಾರಿ ಆರೋಗ್ಯ ಕೇಂದ್ರಗಳಲ್ಲಿ ಪ್ರಧಾನಮಂತ್ರಿ ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ಡಯಾಲಿಸಿಸ್ ಸೇವೆ ಲಭ್ಯವಿದ್ದು, ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಯಲ್ಲಾ ರಮೇಶ್ ಬಾಬು ಅವರು ಹೇಳಿದರು.

ಶುಕ್ರವಾರ ಜಿಲ್ಲಾ ಆಸ್ಪತ್ರೆಯಲ್ಲಿ ವಿವಿಧ ವಾರ್ಡ್ಗಳಿಗೆ ಭೇಟಿ ನೀಡಿ ಸಾರ್ವಜನಿಕರಿಗೆ ಮಾಹಿತಿ ನೀಡುತ್ತಾ ಡಯಾಲಿಸಿಸ್ ಸೇವೆಗಳನ್ನು ಅರ್ಹ ರೋಗಿಗಳಿಗೆ ಸೂಕ್ತ ಸಮಯದಲ್ಲಿ ಒದಗಿಸುವುದು ಮುಖ್ಯವಾಗಿದೆ ಎಂದರು.ಬಳ್ಳಾರಿ ಜಿಲ್ಲೆಯಲ್ಲಿ ಈಗಾಗಲೇ ಜಿಲ್ಲಾ ಆಸ್ಪತ್ರೆ, ಸಿರುಗುಪ್ಪ ಸಾರ್ವಜನಿಕ ಆಸ್ಪತ್ರೆ, ಹಾಗೂ ಸಂಡೂರು ತಾಲ್ಲೂಕುಗಳಲ್ಲಿ ಡಯಾಲಿಸಿಸ್ ಕೇಂದ್ರಗಳು ಉಚಿತವಾಗಿ ಡಯಾಲಿಸಿಸ್ ಸೇವೆ ಒದಗಿಸುತ್ತಿವೆ. ಹೊಸದಾಗಿ ಕುರುಗೋಡು ಹಾಗೂ ಕಂಪ್ಲಿ ತಾಲ್ಲೂಕುಗಳ ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ 2 ಡಯಾಲಿಸಿಸ್ ಕೇಂದ್ರಗಳು ಹೊಸದಾಗಿ ಅನುಮೋದನೆಯಾಗಿದ್ದು, ಡಯಾಲಿಸಿಸ್ ಸೇವೆಗಳು ಪ್ರಾರಂಭಿಸುವ ಹಂತದಲ್ಲಿದೆ ಎಂದು ತಿಳಿಸಿದರು.ಜಿಲ್ಲಾ ಶಸ್ತ್ರಚಿಕಿತ್ಸಕ ಡಾ.ಎನ್.ಬಸರೆಡ್ಡಿ ಅವರು ಮಾತನಾಡಿ, ಬಳ್ಳಾರಿ ವೈದ್ಯಕೀಯ ಮಹಾವಿದ್ಯಾಲಯ ಹಾಗೂ ಸಂಶೋಧನಾ ಸಂಸ್ಥೆ (ಬಿ.ಎಮ್.ಸಿ.ಆರ್.ಸಿ) ಯಲ್ಲಿ 100, ಜಿಲ್ಲಾ ಆಸ್ಪತ್ರೆ–50, ಸಿರುಗುಪ್ಪ ಸಾರ್ವಜನಿಕ ಆಸ್ಪತ್ರೆ–7, ಸಂಡೂರು ಸಾರ್ವಜನಿಕ ಆಸ್ಪತ್ರೆ–6 ಸೇರಿದಂತೆ ಒಟ್ಟು 163 ರೋಗಿಗಳು ಉಚಿತ ಡಯಾಲಿಸಿಸ್ ಸೇವೆ ಪಡೆಯುತ್ತಿದ್ದಾರೆ ಎಂದು ತಿಳಿಸಿದರು.ಡಯಾಲಿಸಿಸ್ ಸೇವೆಗಳಿಗೆ ಅವಶ್ಯವಿರುವ ಸಾಮಾಗ್ರಿ ಏಕಬಳಕೆ ಡಯಾಲೈಜರನ್ನು ಉಪಯೋಗಿಸಲಾಗುತ್ತಿದೆ. ತಾಲೂಕು ಆಸ್ಪತ್ರೆಗಳಲ್ಲಿನ (ತಾಲೂಕುಗಳಲ್ಲಿರುವ ಸಾರ್ವಜನಿಕ ಆಸ್ಪತ್ರೆ) ಡಯಾಲಿಸಿಸ್ ಕೇಂದ್ರಗಳಲ್ಲಿ ಡಯಾಲಿಸಿಸ್ ಪ್ರಕ್ರಿಯೆ/ಕಾರ್ಯವಿಧಾನ ಮುಗಿದ ನಂತರ ರೋಗಿಗಳನ್ನು ಸಂಬಂಧಪಟ್ಟ ಆಸ್ಪತ್ರೆಯ ವ್ಯಾಪ್ತಿಯ ನಗುಮಗು ವಾಹನದ ಮೂಲಕ ಮನೆಗೆ ತೆರಳಲು ವ್ಯವಸ್ಥೆ ಕಲ್ಪಿಸಲು ಸೂಚಿಸಲಾಗಿದೆ ಎಂದರು.ಬಳ್ಳಾರಿ ಜಿಲ್ಲೆಯಲ್ಲಿ ಸರ್ಕಾರಿ ಆಸ್ಪತ್ರೆಗಳಲ್ಲಿ ಡಯಾಲಿಸಿಸ್ ಸೇವೆಗಳನ್ನು ಸೂಕ್ತ ಸಮಯದಲ್ಲಿ ಒದಗಿಸಲಾಗುತ್ತಿದೆ ಹಾಗೂ ಜಿಲ್ಲೆಯ ಖಾಸಗಿ ಆಸ್ಪತ್ರೆಗಳಲ್ಲಿ ಡಯಾಲಿಸಿಸ್ ಸೇವೆಯನ್ನು ಪಡೆಯುತ್ತಿರುವ ರೋಗಿಗಳಿಗೆ ಸರ್ಕಾರಿ ಆಸ್ಪತ್ರೆಗಳಲ್ಲಿ ಡಯಾಲಿಸಿಸ್ ಸೇವೆಯನ್ನು ಪಡೆಯಲು ಮನ ಒಲಿಸಲು ಆಪ್ತ ಸಮಾಲೋಚನ ನಡೆಸಲಾಗುತ್ತಿದೆ ಎಂದರು. ಈ ಸಂದರ್ಭದಲ್ಲಿ ವೈದ್ಯರು, ಸಾರ್ವಜನಿಕರು ಹಾಗೂ ಇತರರು ಇದ್ದರು.

## ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ (ತಿದ್ದುಪಡಿ) ವಿಧೇಯಕ, 2025 ಅಂಗೀಕಾರ

ಮಲ್ಲಮ್ಮ ನುಡಿ ವಾರ್ತೆ ಬೆಳಗಾವಿ / ಬೆಂಗಳೂರು ಡಿಸೆಂಬರ್

ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ (ತಿದ್ದುಪಡಿ) ವಿಧೇಯಕ–2025 ನ್ನು ವಿಧಾನ ಪರಿಷತ್ ನಲ್ಲಿ ಅಂಗೀಕರಿಸಲಾಯಿತು.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ಅವರು, ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ಅಧಿನಿಯಮ, 2007 (2007ರ ಕರ್ನಾಟಕ ಅಧಿನಿಯಮ 21)ನ್ನು ಖಾಸಗಿ ವೈದ್ಯಕೀಯ ಸಂಸ್ಥೆ'ಯ ಪರಿಭಾಷೆಯೊಳಗೆ 'ಮಾನಸಿಕ ಆರೋಗ್ಯ ಸಂಸ್ಥೆ'ಯನ್ನು ಸೇರಿಸಲು, ಭಾರತೀಯ ವೈದ್ಯಕೀಯ ಸಂಘದಿಂದ ಒಬ್ಬ ಸದಸ್ಯ ಮತ್ತು ನೋಂದಾಯಿತ ವೈದ್ಯಕೀಯ ಸಂಸ್ಥೆ ಅಥವಾ ಆಯುಷ್ ವೈದ್ಯಕೀಯ ವೃತ್ತಿನಿರತರ ಸಂಘವನ್ನು ಪ್ರತಿನಿಧಿಸುವ ಒಬ್ಬ ಸದಸ್ಯನನ್ನು ನೋಂದಣಿ ಮತ್ತು ಕುಂದುಕೊರತೆ ಪರಿಹಾರ ಪ್ರಾಧಿಕಾರಕ್ಕೆ ಸದಸ್ಯನಾಗಿ ನಾಮನಿರ್ದೇಶಿಸಲು, ಕಾರ್ಯವಿಧಾನಗಳನ್ನು ಉಪಬಂಧಿಸುವುದಕ್ಕಾಗಿ, ನೋಂದಣಿ ಮತ್ತು ಕುಂದುಕೊರತೆ ಪರಿಹಾರ ಪ್ರಾಧಿಕಾರವು ತಾತ್ಕಾಲಿಕ ನೋಂದಣಿ ಪ್ರಮಾಣ ಪತ್ರವನ್ನು ಮಂಜೂರು ಮಾಡಲು ಅಥವಾ ನವೀಕರಿಸಲು, ಅವಧಿ ಮುಕ್ತಾಯಗೊಂಡ ತಾತ್ಕಾಲಿಕವಾಗಿ ನೋಂದಾಯಿಸಿದ ಖಾಸಗಿ ವೈದ್ಯಕೀಯ ಸಂಸ್ಥೆಗಳ ಪಟ್ಟಿಯನ್ನು ಪ್ರಕಟಿಸಲು, ಖಾಸಗಿ ವೈದ್ಯಕೀಯ ಸಂಸ್ಥೆಗಳು ಶಾಶ್ವತ ನೋಂದಣಿ ಅಥವಾ ನವೀಕರಣಕ್ಕಾಗಿ ಅರ್ಜಿ ಸಲ್ಲಿಸುವುದು ಹಾಗೂ ಶಾಶ್ವತ ನೋಂದಣಿ ಅಥವಾ ನೋಂದಣಿ ನವೀಕರಣವನ್ನು ಮಂಜೂರು ಮಾಡುವುದಕ್ಕಾಗಿ ಪೂರ್ವಾಪೇಕ್ಷಿತಗಳನ್ನು (ರಿಡಿಜ–ಡಿಜಡಣ್ಣುಣಿಫ) ನಿಯಮಿಸುವುದು ಮತ್ತು ಅರ್ಜಿಗಳ ವಿಲೇವಾರಿಗಾಗಿ ಕಾರ್ಯವಿಧಾನವನ್ನು ನಿಯಮಿಸಲು, ಇತರೆ ಕೆಲವು ಅನುಷಂಗಿಕ ತಿದ್ದುಪಡಿಗಳನ್ನು ಸಹ ಮಾಡಲು, ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಿದ್ದು, ಈ ವಿಧೇಯಕವನ್ನು ಪರ್ಯಾಲೋಚಿಸಿ, ಅಂಗೀಕರಿಸುವಂತೆ ಕೋರಿದರು.

ವಿಧೇಯಕದ ಬಗ್ಗೆ ಶಾಸಕರಾದ ಐವನ್ ಡಿಸೋಜ, ಭೋಜೇಗೌಡ, ಎಸ್.ವಿ.ಸಂಕನೂರ್, ಮಾತನಾಡಿದರು.

ವಿಧೇಯಕವನ್ನು ಧ್ವನಿಮತದಿಂದ ಅಂಗೀಕರಿಸಲಾಯಿತು.

## ಕರ್ನಾಟಕ ಅನುಸೂಚಿತ ಜಾತಿಗಳ ವಿಧೇಯಕ 2025 ಅಂಗೀಕಾರ

ಮಲ್ಲಮ್ಮ ನುಡಿ ವಾರ್ತೆ

ಬೆಳಗಾವಿ / ಬೆಂಗಳೂರು ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ ಕರ್ನಾಟಕ ಅನುಸೂಚಿತ ಜಾತಿಗಳ (ಉಪ ವರ್ಗೀಕರಣ) ವಿಧೇಯಕ, 2025 ನ್ನು ವಿಧಾನ ಪರಿಷತ್ ನಲ್ಲಿ ಅಂಗೀಕರಿಸಲಾಯಿತು.ಸಮಾಜಕಲ್ಯಾಣ ಸಚಿವ ಡಾ. ಹೆಚ್.ಸಿ.ಮಹದೇವಪ್ಪ ಅವರು, ಈ ವಿಧೇಯಕವನ್ನು ಪರ್ಯಾಲೋಚಿಸಿ, ಅಂಗಿಕರಿಸುವಂತೆ ಕೋರಿದರು.ವಿಧೇಯಕದ ಬಗ್ಗೆ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣ ಸ್ವಾಮಿ, ರವಿಕುಮಾರ್ ಶಾಸಕರಾದ ಜಕ್ಕಪ್ಪನವರ್, ಶಾಂತರಾಮ ಬುಡ್ನ ಸಿದ್ದಿ, ಶಿವಕುಮಾರ್, ರಮೇಶ್ ಬಾಬು, ಬಲ್ಕಿಸ್ ಭಾನು, ಹೇಮಲತಾ ನಾಯಕ್ ಮಾತನಾಡಿದರು. ವಿಧೇಯಕವನ್ನು ಧ್ವನಿಮತದಿಂದ ಅಂಗೀಕರಿಸಲಾಯಿತು.

## ಸಮೀರವಾಡಿ ಸಕ್ಕರೆ ಕಾರ್ಖಾನೆ ಒಂದೇ ದಿನಕ್ಕೆ 20243 ಮೆಟ್ರಿಕ್ ಟನ್ ಕಬ್ಬು ನುರಿಸಿ ದಾಖಲೆ ನಿರ್ಮಿಸಿದೆ



ಮಲ್ಲಮ್ಮ ನುಡಿ ವಾರ್ತೆ

ಹಳ್ಳೂರ: 19 ಸಮೀರವಾಡಿ ಸಕ್ಕರೆ ಕಾರ್ಖಾನೆಯ 2025–26 ನೇ ಸಾಲಿನ ಕಬ್ಬು ನುರಿಸುವ ಹಂಗಾಮು ಪ್ರಾರಂಭವಾಗಿ ತಿಂಗಳ ಕಾಲ ಕಳೆದಿವೆ ಎಲ್ಲ ಕಾರ್ಖಾನೆಗಳು ಕಬ್ಬು ನುರಿಸುವವುದು ಜೋರಾಗಿದ್ದು ಸಮೀರವಾಡಿ ಸಕ್ಕರೆ ಕಾರ್ಖಾನೆಯು ಗುರುವಾರದಂದು ಪ್ರಸಕ್ತ ಸಾಲಿನಲ್ಲಿ ಒಂದೇ ದಿನಕ್ಕೆ 20243 ಮೆಟ್ರಿಕ್ ಟನ್ ಕಬ್ಬು ನುರಿಸಿ ದಾಖಲೆ ನಿರ್ಮಿಸಿದೆ.ಕೇವಲ 35 ದಿನದಲ್ಲಿ 620297 ಮೆಟ್ರಿಕ್ ಟನ್ ಕಬ್ಬು ನುರಿಸಿ ರಾಜ್ಯದ ಎಲ್ಲ ಕಾರ್ಖಾನೆಗಳಿಗಿಂತ ಅತೀ ಹೆಚ್ಚು ಕಬ್ಬು ನುರಿಸಿ ಪ್ರಗತಿ ಪಥದಲ್ಲಿ ಸಾಗುತ್ತಿದೆ.

ರೈತರ ಹಿತ ಬಯಸಿ ರೈತರ ವಿಶ್ವಾಸವುಳ್ಳ ಕಾರ್ಖಾನೆ ಎಂದೆ ಹೆಸರು ಪಡೆದ ಸಕ್ಕರೆ ಕಾರ್ಖಾನೆ ಇದಾಗಿದ್ದು ರೈತ ಕಾರ್ಖಾನೆಗೆ ಕಬ್ಬು ದಿನಾ ದಿನಾ ಹೆಚ್ಚಾಗುತ್ತಿದ್ದು ಒಂದೇ ದಿನಕ್ಕೆ 20243 ಮೆಟ್ರಿಕ್ ಟನ್ ಕಬ್ಬು ನುರಿ ಸಿದರು11546 ಮೆಟ್ರಿಕ್ ಟನ್ ಕಬ್ಬು ಬಾಕಿ ಉಳಿತಾಯಿದೆ.

ಅತೀ ಹೆಚ್ಚು ಕಬ್ಬು ನುರಿಸಿದ್ದಕ್ಕೆ ಕಾರ್ಖಾನೆಯ ನಿರ್ದೇಶಕರಾದ ಬಾಲಚಂದ್ರ ಭಕ್ಷಿ . ಮುಖ್ಯ ತಾಂತ್ರಿಕ ಅಧಿಕಾರಿ ದಿನೇಶ ಶರ್ಮಾ. ಕೆನ್ ವಿಭಾಗದ ಜನರಲ್ ಮ್ಯಾನೇಜರ್ ವಿ ಎಸ್ ಕಣಬುರ ಅವರು ಕಾರ್ಖಾನೆಯ ಕಾರ್ಮಿಕರಿಗೆ ರೈತ ಬಾಂಧವರಿಗೆ ಅಭಿನಂದಿಸಿದರು.

## ಗ್ರಾಮೀಣ ಭಾಷಾ ಕಲೆ ಸಂಸ್ಕೃತಿ ಉಳಿಸಿ ಬೆಳೆಸುವ ಕೆಲಸ ಪರಮೇಶ್ವ ಪಾಟೀಲ್ ತಡಪಳ್ಳಿ



ಮಲ್ಲಮ್ಮ ನುಡಿ ವಾರ್ತೆಬೀದರ: ನಗರದ ಸವಿತಾ ಸಮಾಜ ಸಾಂಸ್ಕೃತಿಕ ಭವನದಲ್ಲಿ ಗುರುವಾರ ಮಧ್ಯಾಹ್ನ 2 ಗಂಟೆಯಿಂದ ಕರ್ನಾಟಕ ಸರ್ಕಾರ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು, ಬುದ್ದ ಬಸವ ಅಂಬೇಡ್ಕರ ಸಾಂಸ್ಕೃತಿಕ ಗ್ರಾಮೀಣ ಮತ್ತು ನಗರಾಭಿವೃದ್ಧಿ ಸಂಸ್ಥೆ ರಾಜಗಿರಾ ಇವರ ಸಂಯುಕ್ತಾಶ್ರಯದಲ್ಲಿ ನಗಡೆದ ಸಾಂಸ್ಕೃತಿಕ ಕಾರ್ಯಕ್ರಮವನ್ನು ಬಿ ಜೆ ಪಿ ಯುವ ಮುಖಂಡರಾದ ಪರಮೇಶ್ವರ ಪಾಟೀಲ್ ತಡಪಳ್ಳಿ ಉದ್ಘಾಟಿಸಿ, ಕನ್ನಡ ಭಾಷೆ ಸಾಹಿತ್ಯ ಸಂಸ್ಕೃತಿ ತವರೂಮನೆ ಗ್ರಾಮೀಣಳು. ಕನ್ನಡ ಭಾಷೆ ಸಾಹಿತ್ಯ ಸಂಸ್ಕೃತಿ ದೇಶ ಕಲೆ ಉಳಿಸಿ ಬೆಳಸುವ ಕೆಲಸ ಮಾಡುತ್ತಿವೆ. ಸರ್ಕಾರದ ಹಣ ಉಪಯೋಗಿಸಿ ಉತ್ತಮ ಕೆಲಸ ಮುಖ್ಯ ಅತಿಥಿಗಳಾಗಿ ದಿಲೀಪಕುಮಾರ ಭೋಸ್ಲೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿವೃತ್ತ ಕಂಟ್ರೋಲರ್ ಗ್ರಾಮಲೆಕ್ಕಾಧಿಕಾರಿ ಪ್ರೇಮಕುಮಾರ ದಿನೆ, ದಯಾನಂದ ನೌಲೆ ಕಂಟೆಪ್ಪ ಪೂಜಾರಿ ಜಾವಿದ ಮಿಯ್ಯಾ ಗ್ರಾಮ ಪಂಚಯಾತ ಮರಕುಂದ ಸದಸ್ಯರಾದ ಚನ್ನಪ್ಪ ಭಾಗವಹಸಿದ ಕಾರ್ಯಕ್ರಮದ ಅಧ್ಯಕ್ಷತೆ ಬುದ್ಧ ಬಸವ ಅಂಬೇಡ್ಕರ ಸಾಂಸ್ಕೃತಿಕ ಗ್ರಾಮೀಣ ಮತ್ತು ನಗರಾಭಿವೃದ್ಧಿ ಸಂಸ್ಥೆ ಅಧ್ಯಕ್ಷ ಸುಧಾಕರ ರಾಜಗೀರ ವಹಿಸಿದರು ಕಾರ್ಯಕ್ರಮದ ಸ್ವಾಗತ ಮತ್ತು ನೀರೂಪಣೆ ಸಾಹಿತಿ ಡಾ. ಸುಬ್ಬಣ್ಣ ಕರಕನಳ್ಳಿಮಾಡಿದರು, ರಾಜಕುಮಾರ ಕರುಣಾ ಸಾಗರ ನಾಡುಗೀತೆ ನಾಗಮ್ಮಾ ಮರಕಲ್ ಸಂಗಡಿಗರು ಮೋರಂ ಪದ್ಯ ಬಕ್ಕಪ್ಪ ದಂಡಿನ ತಂಡದವರು ಜಾನಪದಗೀತೆ, ದ್ರೌಪತಿಬಾಯಿ ಸಂಗಡಿಗರು ಲಕ್ಷ್ಮಿಬಾಯಿ ತೋರಣ ಸಂಗಡಿಗರ ಭಜನೆ ಪದಗಳು ಹಾಡಿದರು ರಮೇಶ ದೊಡ್ಡಿ ಶ್ರೀನಿವಾಸ ದಯಾಲ ಅಂಬೇಡ್ಕರ ಗೀತೆ ಹಾಡಿದರು ಚನ್ನಮ್ಮಾ ಲಾಧ ತಂಡದವರು ಡೊಳ್ಳು ಕುಣಿತ ರಮೇಶ ಬಾಬು ಕ್ರಾಂತಿ ಗೀತೆ ಶೇಷಪ್ಪ ಚಿಟ್ಟಾ ಹಲಗೆ ವಾದನ ಮಾರುತಿ ಮರಕಲ್ ಮೋರಂ ಬುಲಾಯಿ ಹಾಡುಗಳು ಹಾಡಿದರು. ರಾಜಕುಮಾರ ಗೋರನಾಳ ಸಂಗಡಿಗರು ವಚನ ಗಾಯನ ಮಾಡಿದರು. ಬಕ್ಕಪ್ಪ ದಂಡಿನ ಮಾತನಾಡಿ ಗ್ರಾಮೀಣ ಭಾಗದ ಸಾಂಸ್ಕೃತಿಕ ಕಲಾವಿದರು ತಮ್ಮಗೆ ಕಷ್ಟ ಸಂಕಷ್ಟಗಳು ಇದ್ದರು ಎಲ್ಲವೂ ನುಂಗಿಕೊಂಡು ಸಾಂಸ್ಕೃತಿಕ ಕಲೆಗಳಾದ ಜಾನಪದ ವಾದ್ಯಗಳು, ಜಾನಪದ ಹಾಡುಗಳು ಜಾನಪದ ಕಲಾ ಸಾಹಿತ್ಯ ಸಂಸ್ಕೃತಿಯನ್ನು ಉಳಿಸಿಬೆಳೆಸುವ ಕೆಲಸ ಮಾಡುತ್ತಿದ್ದಾರೆ. ವಯಸ್ಸಾಗಿರುವ ಕಲಾವಿದರಿಗೆ ಮಾಹಾಶಾಸನ ಮನೆಗಳು ಮಕ್ಕಳ ಮದುವೆಗೆ ಮಕ್ಕಳ ವಿದ್ಯಾಭ್ಯಾಸಕ್ಕೆ ಸರ್ಕಾರದ ಯೋಜನೆಗಳು ನೀಡಬೇಕು ಅಂದಾಗ ನಿಜವಾದ ಸಾಂಸ್ಕೃತಿಕ ಕಲಾವಿದರಿಗೆ ಸಹಾಯ ಮಾಡಿದಂತಾಗುತ್ತದೆ. ಮುಖ್ಯ ಅತಿಥಿಗಳಾಗಿ ಜಾನಪದ ಗಾಯಕ ಶೇಷರಾವ ಬೆಳಕುಣಿ ಮಾತನಾಡಿ ಗಡಿ ಭಾಗದಲ್ಲಿ ಕನ್ನಡ ಭಾಷೆ ಸಾಹಿತ್ಯ ಸಂಸ್ಕೃತಿ ಪ್ರಚಾರ ಮಾಡುವ ಕಾರ್ಯ ಮಾಡಬೇಕ್ಕಾಗಿದೆ. ಅಂದಾಗ ಮಾತ್ರ ಗಡಿ ಭಾಗದಲ್ಲಿ ಕನ್ನಡ ಭಾಷೆ ಸಾಹಿತ್ಯ ಸಂಸ್ಕೃತಿ ಉಳಿಯಲಿಕ್ಕೆ ಮತ್ತು ಇಂದಿನ ಮುಂದಿನ ಪಿಳಿಗೆ ಕಲಿಯಲಿಕ್ಕೆ ಸಾದ್ಯವಾಗುತ್ತದೆ.

### ಜಿಲ್ಲಾಮಟ್ಟದ ಉತ್ತಮ ಶಿಕ್ಷಕ ಆಯ್ಕೆ ಪಟ್ಟಿ ಪ್ರಕಟ

## ಡಿ.24 ರಂದು ಜಿಲ್ಲಾ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿ ಪ್ರದಾನ ಸಮಾರಂಭ

ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:

ಪ್ರಸ್ತಕ ಸಾಲಿನ ಜಿಲ್ಲಾಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿಗೆ ಆಯ್ಕೆಯಾದ ಶಿಕ್ಷಕರ ಪಟ್ಟಿಯನ್ನು ಪ್ರಕಟಿಸಲಾಗಿದ್ದು, ಡಿ.24 ರಂದು ಬೆಳಿಗ್ಗೆ 09 ಗಂಟೆಗೆ ನಗರದ ಶ್ರೀ ಮಹರ್ಷಿ ವಾಲ್ಮೀಕಿ ಭವನದಲ್ಲಿ ಜಿಲ್ಲಾ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿ ಪ್ರದಾನ ಸಮಾರಂಭ ಆಯೋಜಿಸಲಾಗಿದೆ ಎಂದು ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕರಾದ ಉಮಾದೇವಿ ತಿಳಿಸಿದ್ದಾರೆ.

ಪ್ರಶಸ್ತಿಗೆ ಜಿಲ್ಲೆಯ 04 ತಾಲ್ಲೂಕುಗಳಿಂದ ಸಲ್ಲಿಕೆಯಾದ ಪ್ರಸ್ತಾವನೆಗಳನ್ನು ಪರಿಶೀಲಿಸಿ ಕಿರಿಯ, ಹಿರಿಯ, ಪ್ರೌಢ ವಿಭಾಗಗಳಿಂದ ಪ್ರತಿ ತಾಲ್ಲೂಕಿಗೆ 03 ರಂತೆ ಒಟ್ಟು 12 ಜನ ಶಿಕ್ಷಕರನ್ನು ಜಿಲ್ಲಾ ಮಟ್ಟದ ಸಮಿತಿಯು ಪರಿಶೀಲನೆ ಮಾಡಿ ಆಯ್ಕೆ ಮಾಡಲಾಗಿದೆ.

***ಶಿಕ್ಷಕರ ಪಟ್ಟಿ: ಪ್ರಾಥಮಿಕ ವಿಭಾಗ:**

ಬಳ್ಳಾರಿ ಪೂರ್ವ ವಲಯದ ಹನುಮಾನ್ ನಗರದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಮಹಾಂತೇಶ, ಬಳ್ಳಾರಿಯ ಟಿ.ಜೆ ಆಯಿಲ್ ಮಿಲ್ ನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ(ಉರ್ದು) ಯ ಸಹ ಶಿಕ್ಷಕರಾದ ನಸೀಮಾ ಆರ್ ಕೆ.ಕುರುಗೋಡು ತಾಲ್ಲೂಕಿನ ಯರಂಗಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಛಾಯದೇವಿ ಬಿ.ಎಂ., ಹವಂಭಾವಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ವಿಜಯಲಕ್ಷ್ಮೀ ಗಂಗಣ್ಣನವರು.ಸಂಡೂರು ತಾಲ್ಲೂಕಿನ 6ನೇ ವಾರ್ಡ್ನ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಜಿ.ಆರ್. ರೇಣುಕಮ್ಮ, ಸಂಡೂರು ತಾಲ್ಲೂಕಿನ ಆಶ್ರಯ ಕಾಲೋನಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ರಾಜಣ್ಣ. ಸಿರುಗುಪ್ಪ ತಾಲ್ಲೂಕಿನ ಬಿ.ಬಿ.ಕ್ಯಾಂಪ್ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಮಹೇಶ್ ವೈ., ತೆಕ್ಕಲಕೋಟೆಯ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯ ಶಾಂತಮ್ಮ ಎಸ್.

***ಪ್ರೌಢ ವಿಭಾಗ:***

ಬಳ್ಳಾರಿ ಪೂರ್ವ ವಲಯದ ಕೆ.ಪಿ.ಎಸ್ ಬಾಲಕಿಯರ ಸರ್ಕಾರಿ ಪ್ರೌಢ ಶಾಲೆಯ ಸಹಶಿಕ್ಷಕ(ವಿಜ್ಞಾನ) ಶಿವಕುಮಾರ ಎ., ಕುರುಗೋಡು ತಾಲ್ಲೂಕಿನ ಯರಂಗಳಿಯ ಸರ್ಕಾರಿ ಪ್ರೌಢ ಶಾಲೆಯ ಸಹಶಿಕ್ಷಕ ಹುಲೆಪ್ಪ ಹೆಚ್., ಸಂಡೂರು ತಾಲ್ಲೂಕಿನ ಸಂಡೂರು ಛತ್ರಪತಿ ಶಿವಾಜಿ ವಿದ್ಯಾಮಂದಿರ ಸರ್ಕಾರಿ ಪ್ರೌಢ ಶಾಲೆಯ ಸಹಶಿಕ್ಷಕ ಮಹಮ್ಮದ್ ಜಾವೀದ್, ಸಿರುಗುಪ್ಪ ತಾಲ್ಲೂಕಿನ ಸಿರುಗುಪ್ಪ ಸರ್ಕಾರಿ ಪ್ರೌಢ ಶಾಲೆಯ ಸಹ ಶಿಕ್ಷಕ ಜೀವೇಶ್ ಕುಲಕರ್ಣಿ ಆಯ್ಕೆಯಾಗಿದ್ದಾರೆ. ಡಿ.24 ರಂದು ಬೆಳಿಗ್ಗೆ 09 ಗಂಟೆಗೆ ನಗರದ ಶ್ರೀ ಮಹರ್ಷಿ ವಾಲ್ಮೀಕಿ ಭವನದಲ್ಲಿ ನಡೆಯುವ ಜಿಲ್ಲಾ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕರಾದ ಉಮಾದೇವಿ ತಿಳಿಸಿದ್ದಾರೆ.

## ಬಳ್ಳಾರಿ: ಜಿಲ್ಲಾ ಯೋಜನಾ ಸಮಿತಿ ಸದಸ್ಯರ ಚುನಾವಣಾ ವೇಳಾಪಟ್ಟಿ ಪ್ರಕಟ

ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:

ಬಳ್ಳಾರಿ ಜಿಲ್ಲಾ ಯೋಜನಾ ಸಮಿತಿಗೆ ಪುರಸಭಾ ಕ್ಷೇತ್ರದಿಂದ ಚುನಾಯಿತ ಸದಸ್ಯರನ್ನು ಆಯ್ಕೆ ಮಾಡುವ ಸಂಬಂಧ ಚುನಾವಣಾ ವೇಳಾಪಟ್ಟಿ ಪ್ರಕಟಿಸಲಾಗಿದೆ ಎಂದು ಚುನಾವಣಾಧಿಕಾರಿ ಆಗಿರುವ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮಹಮ್ಮದ್ ಹಾರೀಸ್ ಸುಮೇರ್ ಅವರು ತಿಳಿಸಿದ್ದಾರೆ.

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ಪ್ರಕರಣ 310ರ ಪ್ರಕಾರ ಜಿಲ್ಲಾ ಯೋಜನಾ ಸಮಿತಿ ರಚಿಸಬೇಕಾಗಿದ್ದು, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಜಿಲ್ಲಾ ಯೋಜನಾ ಸಮಿತಿ ಸದಸ್ಯರುಗಳ ಚುನಾವಣೆ) ನಿಯಮಗಳು 1996ರ 8ರ ನಿಯಮದ ಪ್ರಕಾರ ಬಳ್ಳಾರಿ ಜಿಲ್ಲಾ ಯೋಜನಾ ಸಮಿತಿಗೆ ಪುರಸಭಾ ಮತಕ್ಷೇತ್ರಗಳಿಂದ ಪ್ರತ್ಯೇಕವಾಗಿ ಸದಸ್ಯರ ಆಯ್ಕೆ ಕುರಿತು ಚುನಾವಣೆ ನಡೆಸಲಾಗುವುದು ಎಂದು ಅವರು ತಿಳಿಸಿದ್ದಾರೆ.



*ಚುನಾವಣಾ ವೇಳಾಪಟ್ಟಿ:*

ಪುರಸಭಾಕ್ಷೇತ್ರದಿಂದ ಚುನಾಯಿಸಬೇಕಾದ ಸದಸ್ಯರುಗಳ ಸಂಖ್ಯೆ:ಪುರಸಭಾ ಕ್ಷೇತ್ರದಿಂದ – 23 ಸದಸ್ಯರು (ನಗರಸಭೆ, ಪುರಸಭೆ, ಪಟ್ಟಣ ಪಂಚಾಯತ್, ಮಹಾನಗರ ಪಾಲಿಕೆ ಚುನಾಯಿತ ಸದಸ್ಯರುಗಳು).

ನಾಮಪತ್ರ ಸ್ವೀಕರಿಸುವ ದಿನಾಂಕ, ಸಮಯ ಮತ್ತು ಸ್ಥಳ(ಸಾರ್ವಜನಿಕ ರಜಾದಿನ ಹೊರತುಪಡಿಸಿ): ಡಿ.22 ರಿಂದ 31 ರ ಬೆಳಿಗ್ಗೆ 11 ರಿಂದ ಮಧ್ಯಾಹ್ನ 03 ಗಂಟೆಯವರೆಗೆ, ಸ್ಥಳ: ಜಿಲ್ಲಾ ಪಂಚಾಯತ್ ನ ಪಿಎಇಒ ಕೊಠಡಿ ಯೋಜನಾ ಶಾಖೆ.

ನಾಮಪತ್ರ ಪರಿಶೀಲಿಸುವ ದಿನಾಂಕ, ದಿನ, ಸಮಯ ಮತ್ತು ಸ್ಥಳ: 2026 ರ ಜನವರಿ 02 (ಶುಕ್ರವಾರ) ಬೆಳಿಗ್ಗೆ 11 ಗಂಟೆಗೆ, ಸ್ಥಳ: ಜಿಲ್ಲಾ ಪಂಚಾಯತ್ ನ ಪಿಎಇಒ ಕೊಠಡಿ ಯೋಜನಾ ಶಾಖೆ.

ನಾಮಪತ್ರ ಹಿಂಪಡೆಯುವ ಕೊನೆ ದಿನಾಂಕ, ದಿನ ಮತ್ತು ಸಮಯ: 2026 ರ ಜನವರಿ 05 (ಸೋಮವಾರ) ಮಧ್ಯಾಹ್ನ 03 ಗಂಟೆಯವರೆಗೆ, ಸ್ಥಳ: ಜಿಲ್ಲಾ ಪಂಚಾಯತ್ ನ ಪಿಎಇಒ ಕೊಠಡಿ ಯೋಜನಾ ಶಾಖೆ.

ಮತದಾನ ಅಗತ್ಯವಾದಲ್ಲಿ ಮತದಾನ ನಡೆಸಬೇಕಾದ ದಿನಾಂಕ, ದಿನ, ಸಮಯ ಮತ್ತು ಸ್ಥಳ: 2026 ರ ಜನವರಿ 12(ಸೋಮವಾರ) ಬೆಳಿಗ್ಗೆ 09 ರಿಂದ ಸಂಜೆ 04 ರ ವರೆಗೆ, ಸ್ಥಳ: ಜಿಲ್ಲಾ ಪಂಚಾಯತ್ ನಜೀರ್ ಸಭಾಂಗಣ.

ಮತ ಎಣಿಕೆ ದಿನಾಂಕ, ಸಮಯ ಮತ್ತು ಸ್ಥಳ: 2026 ರ ಜನವರಿ 12(ಸೋಮವಾರ) ಸಂಜೆ 05 ಗಂಟೆಗೆ, ಸ್ಥಳ: ಜಿಲ್ಲಾ ಪಂಚಾಯತ್ ನಜೀರ್ ಸಭಾಂಗಣ.

2026 ರ ಜನವರಿ 13 (ಮಂಗಳವಾರ) ಸಂಜೆ 05 ಗಂಟೆಗೆ ಚುನಾವಣೆ ಪ್ರಕ್ರಿಯೆ ಮುಕ್ತಾಯಗೊಳ್ಳಲಿದೆ ಎಂದು ಚುನಾವಣಾಧಿಕಾರಿ ಆಗಿರುವ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮಹಮ್ಮದ್ ಹಾರೀಸ್ ಸುಮೇರ್ ಅವರು ತಿಳಿಸಿದ್ದಾರೆ.

## ರೈತರು ಮೆಣಸಿನಕಾಯಿ ಬೆಳೆಯಲ್ಲಿ ರೋಗ, ಕೀಟಬಾಧೆ ಕಂಡುಬಂದಲ್ಲಿ ಸೂಕ್ತ ನಿರ್ವಹಣೆ ಕ್ರಮ ಅನುಸರಿಸಲು ಸಲಹೆ

ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:

ಜಿಲ್ಲೆಯಲ್ಲಿ ಪ್ರಸ್ತುತ ವಾತವರಣ ಏರುಪೇರು, ಮೋಡ ಕವಿದ ವಾತವರಣ ಹಾಗೂ ತಾಪಮಾನ ಇಳಿಕೆಯಾಗಿರುವುದರಿಂದ ಮೆಣಸಿನಕಾಯಿ ಬೆಳೆಯಲ್ಲಿ ರೋಗ ಮತ್ತು ಕೀಟಬಾಧೆಯಿಂದ ಇಳುವರಿ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇದ್ದು, ಹಾಗಾಗಿ ರೈತರು ಸೂಕ್ತ ನಿರ್ವಹಣೆಯ ಕ್ರಮ ಅನುಸರಿಸಬೇಕು ಎಂದು ತೋಟಗಾರಿಕೆ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕರು ಅವರು ತಿಳಿಸಿದ್ದಾರೆ.

ಪ್ರಸಕ್ತ ವರ್ಷ ಬಳ್ಳಾರಿ, ಕುರುಗೋಡು ಮತ್ತು ಕಂಪ್ಲಿ ತಾಲ್ಲೂಕುಗಳಲ್ಲಿ 17,800 ಹೆಕ್ಟೇರ್ ಗಿಂತ ಹೆಚ್ಚು ಪ್ರದೇಶದಲ್ಲಿ ಮೆಣಸಿನಕಾಯಿ ಬೆಳೆಯಲಾಗಿದೆ. ಮೆಣಸಿನಕಾಯಿ ಬೆಳೆಯಲ್ಲಿ ಎಲೆ ಮುಟುರು ರೋಗ, ಬೂದಿ ರೋಗ, ಹಣ್ಣು ಕೊಳೆ ರೋಗದ ನಿರ್ವಹಣೆಗೆ ರೈತರು ಸೂಕ್ತ ಕ್ರಮಗಳನ್ನು ಅನುಸರಿಸಬೇಕಿದೆ ಎಂದಿದ್ದಾರೆ.

***ಎಲೆ ಮುಟುರು ರೋಗ:***

ಈ ರೋಗವನ್ನು ಹಳದಿ ಮಿಶ್ರಿತ ಹಸಿರು ಭಾಗವನ್ನು ಎಲೆಯಲ್ಲಿ ಕಾಣಬಹುದು. ಎಲೆಗಳು ವಕ್ರಾಕಾರದ ಅಥವಾ ಮುಟುರು ಎಲೆಗಳನ್ನು ಕಾಣಬಹುದು. ಆ ಮೇಲೆ ಗಿಡಗಳ ಬೆಳವಣಿಗೆ ಕುಂಠಿತಗೊಳ್ಳುತ್ತದೆ. ಮುಟುರು ರೋಗದ ಬಾಧೆ ತಡೆಗಟ್ಟಲು ಶೇ.0.5 ರ ಬೆಳ್ಳೊಳ್ಳಿ, ಹಸಿ ಮೆಣಸಿನಕಾಯಿ, ಸೀಮೆ ಎಣ್ಣೆ ಕಷಾಯವನ್ನು ಬೇವು ಜನ್ಯ ಕೀಟನಾಶಕದೊಂದಿಗೆ (2.5 ಮಿ.ಲೀ. ಪ್ರತಿ ಲೀಟರ್ ನೀರಿಗೆ) ಬೆರಸಿ ಅವಶ್ಯವಿದ್ದಾಗ ಸಿಂಪರಣೆ ಮಾಡಬೇಕು.

ಪ್ರಮುಖವಾಗಿ ಮೆಣಸಿನಕಾಯಿಯಲ್ಲಿ ಬೆಳೆಯಲ್ಲಿ ಬರುವ ಥಿಪ್ಸ್, ಮೈಟ್ಸ್, ಬಿಳಿ ನೊಣ ಹಾಗೂ ರಸಹಿರುವ ಕೀಟಗಳ ನಿರ್ವಹಣೆ ಮಾಡುವುದು ಎಲೆ ಮುಟುರು ರೋಗದ ನಿರ್ವಹಣೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ.

ಕೀಟನಾಶಕಗಲಾದ 0.3 ಮಿ.ಲೀ ಇಮಿಡಾಕ್ಲೋಪ್ರಿಡ್ 17.8 ಎಸ್.ಎಲ್ ಅಥವಾ 0.2 ಗ್ರಾಂ ಥಯೋಮೆಥಾಕ್ಸಾಮ್ 25 ಡಬೂ––.ಜಿ ಅಥವಾ 1.0 ಮಿ.ಲೀ ಫಿಪ್ರೋನಿಲ್ 5 ಎಸ್.ಸಿ ಅಥವಾ 1.0 ಗ್ರಾಂ ಡಯಾಫೆನ್‌ಥಯೂರಾನ್ 50 ಡಬ್ಲೂ ––.ಪಿ ಪ್ರತಿ ಲೀಟರ್ ನೀರಿಗೆ ಬೆರೆಸಿ ಸಿಂಪಡಿಸಬೇಕು.

***ಬೂದಿ ರೋಗ:***

ಈ ರೋಗವನ್ನು ಬೂದಿ ಬಣ್ಣದ ಮಚ್ಚೆಗಳನ್ನು ಎಲೆಯಲ್ಲಿ ಕಾಣಬಹುದು. ರೋಗ ಕಂಡುಬಂದಲ್ಲಿ 1 ಗ್ರಾಂ ಕಾರ್ಬರ್ಂಡೈಜಿಮ್ ಅಥವಾ 3 ಗ್ರಾಂ ನೀರಿನಲ್ಲಿ ಕರಗುವ ಗಂಧಕ ಒಂದು ಲೀಟರ್ ನೀರಿನಲ್ಲಿ ಬೆರೆಸಿ ಸಿಂಪಡಿಸಬೇಕು. ರೋಗ ಲಕ್ಷಣಗಳು ಕಡಿಮೆಯಾಗದ್ದಿದಲ್ಲಿ ಇದೇ ಸಿಂಪರಣೆಯನ್ನು 15 ದಿನಗಳ ಹಂತರದಲ್ಲಿ ಇನ್ನೂ ಎರಡು ಬಾರಿ ಕೈಗೊಳ್ಳಬಹುದು ಅಥವಾ 1 ಗ್ರಾಂ ಅಜೋಕ್ಸಿಸ್ಟರೋಬಿನ್ ಶೇ.23 ಎಸ್‌ಟಿ ರೋಗ ನಾಷಕವನ್ನು ಪ್ರತಿ ಲೀಟರ್ ನೀರಿಗೆ ಬೇರಸಿ ಸಿಂಪಡಿಸಬಹುದಾಗಿದೆ. ಇಲ್ಲವೇ ಹೆಕ್ಸಾಕೊನಜೋಲ್ ಶೇ.2 ಎಸ್‌ಸಿ ರೋಗ ನಾಷಕವನ್ನು ಪ್ರತಿ ಲೀಟರ್ ನೀರಿಗೆ ಬೆರೆಸಿ ಸಿಂಪಡಿಸಬಹುದು.

***ಹಣ್ಣು ಕೊಳೆ ರೋಗ:***

ಈ ರೋಗವನ್ನು ಹಣ್ಣುಗಳ ಮೇಲೆ ವೃತ್ತಾಕಾರದ ತಗ್ಗಾದ ಕಪ್ಪನೆಯ ಚುಕ್ಕೆಗಳು ಕಾಣಿಸಿಕೊಳ್ಳುತ್ತವೆ. ಒಳಗಿನ ಬಣ್ಣವು ಗುಲಾಬಿ ವರ್ಣದಿಂದ ಕೂಡಿರುತ್ತದೆ. ಆ ಮೇಲೆ ಕಪ್ಪಾಗುತ್ತವೆ. ಮೆಣಸಿನಕಾಯಿ ಬೆಳೆಗೆ ತುದಿ ಸಾಯುವ ರೋಗ, ಹಣ್ಣು ಕೊಳೆಯುವ ರೋಗ ಹಾಗೂ ಬೂದಿ ರೋಗಗಳು ಕಂಡು ಬಂದಾಗ 1 ಗ್ರಾಂ ಕಾರ್ಬರ್ಂಡೈಜಿಮ್ ಪ್ರತಿ ಲೀಟರ್ ನೀರಿನಲ್ಲಿ ಬೆರೆಸಿ 15 ದಿನಗಳ ಅಂತರದಲ್ಲಿ ನಾಲ್ಕು ಬಾರಿ ಸಿಂಪಡಿಸಬೇಕು.

1 ಗ್ರಾಂ ಅಜೋಕ್ಸಿಸ್ಟರೋಬಿನ್ ಶೇ.23 ಎಸ್‌ಟಿ ರೋಗ ನಾಷಕವನ್ನು ಪ್ರತಿ ಲೀಟರ್ ನೀರಿಗೆ ಬೇರಸಿ ಸಿಂಪಡಿಸಬಹುದಾಗಿದೆ. ಇಲ್ಲವೇ ಹೆಕ್ಸಾಕೊನಜೋಲ್ ಶೇ.2 ಎಸ್‌ಸಿ ರೋಗ ನಾಷಕವನ್ನು ಪ್ರತಿ ಲೀಟರ್ ನೀರಿಗೆ ಬೇರೆಸಿ ಸಿಂಪಡಿಸಬಹುದು.

ಈ ಮೇಲ್ಕಂಡ ಎಲ್ಲಾ ಅಗತ್ಯವಿರುವ ನಿರ್ವಹಣಾ ಕ್ರಮಗಳನ್ನು ಅನುಸರಿಸುವ ಮೂಲಕ ರೈತರು ಸಕಾಲದಲ್ಲಿ ಮೆಣಸಿನಕಾಯಿ ಬೆಳೆಗೆ ಔಷಧಿಗಳನ್ನು ಸೂಕ್ತ ರೀತಿಯಲ್ಲಿ ಸಿಂಪಡಿಸಿ ಉತ್ತಮ ಗುಣಮಟ್ಟದ ಇಳುವರಿ ಪಡೆಯಬಹುದಾಗಿದೆ.

ಮಾಹಿತಿಗಾಗಿ ತೋಟಗಾರಿಕೆ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕರ ಕಚೇರಿಗೆ ಭೇಟಿ ನೀಡಿ ಸಂಪರ್ಕಿಸಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಧಾರ್ಮಿಕ, ಶೈಕ್ಷಣಿಕ,ಸಾಮಾಜಿಕ ಆಯುರ್ವೇದಿಕ ಕ್ಷೇತ್ರದ
# ಮಹಾ ಗುರು ಲಿಂ.ನಿರಂಜನ ಮಹಾಸ್ವಾಮಿಗಳು



ವಿಶೇಷ ಲೇಖನ: ಪರಮೇಶ ರಾಂಪುರೆ
ಮಲ್ಲಮ್ಮ ನುಡಿ ವಾರ್ತೆ ವರದಿಗಾರರು, ಮೋ 9980209238.

ಪ್ರಸಿದ್ಧಿ ಹೊಂದಿದ ಮಠದ ಮಠಾಧೀಶರಾಗಿ ಸೇವೆ ನೀಡುವ ಸ್ವಾಮೀಜಿಗಳ ನಡುವೆ ಪಾಳು ಬಿದ್ದ ಮಠಕ್ಕೆ ಹೋಗಿ ಅಲ್ಲಿ ಸ್ವಂತ ಸ್ವಚ್ಛತೆ ಮಾಡಿ, ಮಠವನ್ನು ಅಭಿವೃದ್ಧಿ ಪಡಿಸಿ, ಆ ಮಠವನ್ನು ರಾಜ್ಯಮಟ್ಟಕ್ಕೆ ಗುರುತಿಸುವಂತೆ ಮಾಡಿದ ಧಾರ್ಮಿಕ ಗುರು, ಶಿಕ್ಷಣ ಪ್ರೇಮಿ,ಆಯುರ್ವೇದಿಕ ಔಷಧಿಗಳಿಂದ ಜನರ ಕಾಯಿಲೆಗಳನ್ನು ವಾಸಿ ಮಾಡಿದ ಪವಾಡ ಪುರುಷ, ಸಾಮಾಜಿಕ ಕಳಕಳಿಉಳ್ಳುವ ಮಹಾ ಸ್ವಾಮೀಜಿ ಲಿಂ. ಶ್ರೀ ಮ. ನಿ. ಪ್ರ. ನಿರಂಜನ ಮಹಾಸ್ವಾಮಿಗಳು**

*** ಬಾಬಾನಂದ (ನಿರಂಜನ) ಬಾಲ್ಯ ಜೀವನ:**

ಕರ್ನಾಟಕದ ಕಿರೀಟ ಬೀದರ ಜಿಲ್ಲೆಯ, ಆ ಕಿರೀಟದ ಮೇಲಿನ ವಜ್ರ ಕಮಲನಗರ ತಾಲೂಕಿನ ಸೋನಾಳ ಗ್ರಾಮದ ಹಿರೇಮಠ ಮನೆತನದ ಶರಣ ದಂಪತಿಗಳಾದ ಶ್ರೀ ಶರಣಯ್ಯ ಸ್ವಾಮಿ ಹಾಗೂ ಶ್ರೀಮತಿ ನೀಲಮ್ಮ ಅವರ ಆರು ಮಕ್ಕಳಲ್ಲಿ ಐದನೇ ಮಗುವಾಗಿ ಬಾಬಾನಂದ (ನಿರಂಜನ) ಅವರು ಫೆಬ್ರವರಿ 2, 1950 ರಲ್ಲಿ ಈ ಭೂಮಿಗೆ ಅವತಾರ ಪುರುಷರಾಗಿ ಜನರ ಪಡೆದರು.

*** ಹುಟ್ಟೂರಿನಲ್ಲಿ ಪ್ರಾಥಮಿಕ ಶಿಕ್ಷಣ:**

ಬಾಲ್ಯದ ಪ್ರಾಥಮಿಕ ಶಿಕ್ಷಣವಾದ 1ನೇ ರಿಂದ 4ನೇ ತರಗತಿಯವರಿಗೆ ತಮ್ಮ ಹುಟ್ಟೂರಾದ ಸೋನಾಳ ಗ್ರಾಮದಲ್ಲಿ ಮುಗಿಸಿದರು. ಪ್ರಾಥಮಿಕ ಶಾಲೆಯ ಶಿಕ್ಷಕರಾದ ಶ್ರೀ ಶಂಕ್ರಪ್ಪ ಪಾಟೀಲ ಹಾಗೂ ಅಡೆಪ್ಪ ಶಿಕ್ಷಕರ ಮಾರ್ಗದರ್ಶನದಂತೆ ಶಿಕ್ಷಣ ಕಲಿಯಲು ಆರಂಭಿಸಿದರು. ಬಾಲ್ಯದಿಂದಲು ಗಣಿತ ವಿಷಯದಲ್ಲಿ ಹೆಚ್ಚಿನ ಆಸಕ್ತಿ ಹೊಂದಿದರು.

5ನೇ ರಿಂದ 7ನೇ ತರಗತಿ ಕಮಲನಗರ ಪಟ್ಟಣದ ಎನ್.ಟಿ.ಎಂ. ಎಸ್. ಶಾಲೆಗೆ ಕಲಿಯಲು ಪ್ರತಿದಿನ 10 ಕಿ.ಮೀ. ನಡೆದು ಕೊಂಡು ಹೋಗುತ್ತಿದರು. ಮುಂದೆ ಶಾಂತಿ ವರ್ಧಕ ಪ್ರೌಢ ಶಿಕ್ಷಣ ಕಲಿಯಲು ಬಾಡಿಗೆ ಕೊಠಡಿಯಲ್ಲಿ ಉಳಿದು ಶಿಕ್ಷಣ ಪಡೆದರು.

ಶಾಲೆಯಲ್ಲಿ ಇದ್ದಾಗ "ಗೌರಿ ನಾಟಕ" ಮಾಡಿ ಎಲ್ಲರ ಮೆಚ್ಚುಗೆ ಪಡದ್ದಿದರು.

*** ಸಾಧನೆಗಾಗಿ ಊರು ಬಿಟ್ಟ ಬಾಬಾಯ್ಯ ಸ್ವಾಮಿ:**

ಸೋನಾಳ ಗ್ರಾಮವು ಬರಗಾಲ ತತ್ತರಿಸಿ ಜನಸಾಮಾನ್ಯರ ಜೀವನಸ್ಥಿತಿಯ ಅಸ್ಥವ್ಯಸ್ತಗೊಂಡ ಸಂದರ್ಭದಲ್ಲಿ ಸೋನಾಳ ಗ್ರಾಮದಿಂದ ನಾನು ಜೀವನದಲ್ಲಿ ಏನನ್ನಾದರೂ ಸಾಧನೆ ಮಾಡಬೇಕೆಂದು ಪಣತೊಟ್ಟು ತನ್ನ ಹುಟ್ಟು ನಾಡನ್ನು ತೊರೆದು ತುಮಕೂರು ಶ್ರೀ ಸಿದ್ಧಗಂಗಾ ಮಠಕ್ಕೆ ಹೋದರು. ಅಲ್ಲಿ ಸಂಸ್ಕೃತ ಹಾಗೂ ಆಯುರ್ವೇದ ವಿಷಯ ಪಾಂಡಿತ್ಯ ಅಷ್ಟೇ ಅಲ್ಲ ಅಧ್ಯಾತ್ಮಿಕ ಶಿಕ್ಷಣ ಕಲಿತರು. ಇದರಿಂದ ಅವರಿಗೆ ಆಯುರ್ವೇದ ಔಷದ ಬಗ್ಗೆ ಜ್ಞಾನ ದೊರೆಯಿತು.

***ಸ್ವಪ್ನದಲ್ಲಿ ಹೂವಿನಶಿಗ್ಗಿ ಮಠದ ಶಿವಲಿಂಗ ದರ್ಶನ:**

ಮನದಲ್ಲಿ ಸಾಧನೆ ಮಾಡುವ ಕಿಚ್ಚು ಹೊತ್ತವರಿಗೆ ನಿದ್ರೆ ಎಲ್ಲಿಂದ ಬರುತ್ತೆ ಎಂಬಂತೆ ಹೀಗೆ ಒಂದು ದಿನ ರಾತ್ರಿ ಮಲಗಿದಾಗ ಸ್ವಪ್ನದಲ್ಲಿ ಒಂದು ಹಳ್ಳಿ, ಮೂಡಣದ ಕಡೆಗೆ ಜಾಲಿ ಗಿಡಗಳು ಗಂಜಿಪೆಳಿ, ಬೇವಿನಗಿಡಗಳು, ಮನುಷ್ಯರಾರು ಸುಳಿಯದಂತ ಅಡ್ಡಲಾಗಿ ಬೆಳೆದಿದ್ದವು. ಕಸ-ಕೊಂಪೆ ನಾನಾ ತರಹದ ಬಳ್ಳಿಗಳು ನೆಲವು ಕಾಣದಷ್ಟು ಬೆಳೆದಿದ್ದವು. ಇಂತಹ ಭಯಾನಿಕ ನಿರ್ಜನ ಪ್ರದೇಶದ ಮಧ್ಯ ಹಾಳುಬಿದ್ದ ಕಲ್ಲಿನ ದೇವಾಲಯವಿತ್ತು. ಆ ಗುಡಿಯೊಳಗೆ ಶಿವಲಿಂಗ ಹಾಗೂ ಬಸವಣ್ಣ ಮೂರ್ತಿಗಳು ಬಾಬಾನಂದರ ಸ್ವಪ್ನದಲ್ಲಿ ಪ್ರಜ್ವಲವಾಗಿ ಕಾಣಿಸಿಕೊಂಡವು, ಹೇಗೋ ದೈವ ಶಕ್ತಿ ಬಲದಿಂದ ಅವರು ಅಲೆಯುತ್ತಾ ಹೂವಿನಶಿಗ್ಗಿ ವೀರಕ್ತಮಠಕ್ಕೆ(ದೇವಾಲಯ ಸ್ಥಳ) ಬಂದರು. ಅವರು ಕಂಡಿದ್ದು ತಕ್ಕಂತಹ ಹೂವಿನಶಿಗ್ಗಿ ಚಿತ್ರಣ ಕಂಡು ಸಂತೋಷ ಪಟ್ಟರು.

***ಪಾಳು ಬಿದ್ದ ಹೂವಿನಶಿಗ್ಗಿ ಮಠಕ್ಕೆ ಹೊಸ ಸ್ಪರ್ಶ:**

ಒಂದು ಸಮಯದಲ್ಲಿ ಎಡೆಯೂರು ಸಿದ್ದಲಿಂಗೇಶ್ವರ ಮಹಾಸ್ವಾಮಿಗಳು ಅನುಷ್ಠಾನಕೊಂಡ ಮಠ ಸಂಪೂರ್ಣ ಹಾಳಾಗಿತ್ತು. ಸುತ್ತಲೂ ಮುಳ್ಳಿನ ಕಂಟಿ,ಗಂಜಿಪೆಳಿ, ಡಬ್ಬ ಗಳ್ಳಿ ಪೂರ್ತಿ ಮುಚ್ಚಿಹೋಗಿತ್ತು.ಜನ ಈ ಕಡೆ ಹೋಗುವುದಕ್ಕೆ ಹೆದರುತ್ತಿದ್ದರು.ಶ್ರೀಗಳು ಸ್ವಂತ ಆ ಮುಳ್ಳಿನಗಿಡಗಳನ್ನು ತೆಗೆದು ಅಲ್ಲಿರುವ ಶಿವಲಿಂಗ ಬಸವಣ್ಣ ಮೂರ್ತಿಯ ಮೇಲೆ ಬಿದ್ದಿದ ಮಣ್ಣು, ಕಸ, ಉಡಿಗಿಕೊಂಡು ಒಬ್ಬರೇ ಚೆಲ್ಲಿದ್ದರು. ಹೀಗೆ ಪಾಳು ಮಠವನ್ನು ನಾಲ್ಕು ಜನ ಬರುವಂತೆ ಮಾಡಿದರು. ಮುಂದೆ ಅಲ್ಲೇ ಪ್ರವಚನ ನೀಡಲು ಪ್ರಾರಂಭಿಸಿದರು.

***ಹೂವಿನಶಿಗ್ಗಿ ವೀರಕ್ತಮಠದಲ್ಲಿ 48 ದಿನ ಅನುಷ್ಠಾನ:**

ಶ್ರೀ ಬಾಬಾನಂದ ಸ್ವಾಮಿಗಳವರು ಅವರ ಸಂಕಲ್ಪದ ಮೇರೆಗೆ ಊರ ಭಕ್ತರನ್ನೆಲ್ಲ ಕರೆದು ತಾವುಗಳು ಒಂದುಅನುಷ್ಠಾನಮಾಡುವದಾಗಿ ತಿಳಿಯಪಡಿಸಿದರು. ಆಗ ಊರ ಸದ್ಭಕ್ತರು ಸೇರಿ ಊರಿನ ಗೌಡ್ರ ಆದಂತಹ ಶಂಕರಗೌಡ ಪಾಟೀಲರು ಹಾಗೂ ನೀಲಪ್ಪ ಹೆಬಸೂರ ಇವರ ಉಪಸ್ಥಿತಿಯಲ್ಲಿ ಈ ಮೌನ ಅನುಷ್ಠಾನ ಕಾರ್ಯಕ್ರಮ ನಡೆಸಲು ಸಿದ್ಧತೆ ಮಾಡಿದರು.

ಹೀಗೆ 48 ದಿನಗಳ ಊಟ ಆಹಾರ ಇಲ್ಲದೆ ಅನುಷ್ಠಾನ ಕುಳಿತರು. ಪ್ರತಿದಿನ ಸಾಯಂಕಾಲ ಒಂದು ಲೋಟಾ ಆಕಳು ಹಾಲು, ಒಂದು ಲೋಟಾ ಬೇವಿನರಸ ಸೇವಿಸುತ್ತಿದ್ದರು. ಅನುಷ್ಠಾನ ಸಂದರ್ಭದಲ್ಲಿ ಹಾವುಗಳು ಶ್ರೀಗಳ ಮೇಲಿಂದ ಹರಿದಾಡಿ ಹೋಗುತ್ತಿದ್ದವು ಎಂದು ಹೇಳಲಾಗುತ್ತದೆ.



ಶ್ರೀ ಮ.ನಿ.ಪ್ರ. ನಿರಂಜನ ಮಹಾಸ್ವಾಮಿಗಳು.

***ನಿರಂಜನ ಎಂಬ ಹೆಸರು ಬಿರುದಾನ:**

ಒಂದು ದಿನ ಬಾಗಲಕೋಟೆಯ ಸಹಜಾನಂದ ಸ್ವಾಮಿಗಳು ಸಹಜವಾಗಿ ಭಿಕ್ಷಾಟನೆಗೆ ಬಂದಿದ್ದವರು. ಆ ಮೌನಾನುಷ್ಠಾನ ಮಂಗಲ ಕಾರ್ಯಕ್ರಮದಲ್ಲಿ ಪಾಲ್ಗೊಂಡರು.ಊರ ಹಿರಿಯರ ಮತ್ತು ದೈವ ಸಮ್ಮುಖದಲ್ಲಿ ಸರ್ವ ಭಕ್ತರ ಅಭಿಪ್ರಾಯದ ಮೇರೆಗೆ, ಊರಿನ ಪೂರ್ವದಲ್ಲಿ ಆಗಮಿಸಿದಂತಹ ನಿರಂಜನ ಮಹಾಸ್ವಾಮಿಗಳು ಅನ್ನುವಂತಹ ಹೆಸರನ್ನೆ ಮುಂದೆ ಈ ಮಹಾನ ಅನುಷ್ಠಾನಗೈದಿರುವಂತ ಮಹಾನ್ ತಪಸ್ವಿಗೂ ಇನ್ನೂ ಮುಂದೆ ನಿರಂಜನ ಮಹಾಸ್ವಾಮಿಗಳೆಂದೇ ಕರೆಯಬೇಕೆಂದು ಹೆಸರನ್ನು ಬಿರುದಾನ ಮಾಡಿದರು. ಅಂದಿನಿಂದ ಶ್ರೀ ನಿರಂಜನ ಮಹಾಸ್ವಾಮಿಗಳು ಎಂದು ಕರೆಯಲಾಗುತ್ತದೆ.

***ಪವಾಡ ಪುರುಷ ನಿರಂಜನ ಮಹಾಸ್ವಾಮಿಗಳು:**

ವೀರಕ್ತಮಠಕ್ಕೆ ಬರುವ ಭಕ್ತರ ಕಷ್ಟಗಳನ್ನು ಆಲಿಸಿ ಅವರಿಗೆ ಪರಿಹಾರ ಕೊಡುತ್ತಿದ್ದರು.ಶ್ರೀಗಳ ವಾಣಿ ದೈವವಾಣಿ ಯಾಗುತ್ತಿತ್ತು. ಆಯುರ್ವೇದ ಶಿಕ್ಷಣ ಜ್ಞಾನ ಹೊಂದಿದರಿಂದ ಅನೇಕ ಆಯುರ್ವೇದ ಔಷದಿಗಳನ್ನು ಕೊಟ್ಟು ಭಕ್ತರ ಕಾಯಿಲೆ ನಿವಾರಣೆ ಮಾಡಿದ್ದಾರೆ. ಇಂತಹ ಅನೇಕ ಉದಾಹರಣೆಗಳು ನಮ್ಮಗೆ ಸಿಗುತ್ತವೆ. ನಂತರ ಸೋನಳ ಮಠಕ್ಕೆ ಬಂದು ಇಲ್ಲಿನ ಹಾಳು ಬಿದ್ದಿದ ಎರಡೂ ಅಂತಸ್ತೀನಿ ಮಠಕ್ಕೆ ಹೊಸ ಸ್ಪರ್ಶ ಕೊಟ್ಟರು.

***ಶಿಕ್ಷಣ ಪ್ರೇಮಿಯಾಗಿದ ಶ್ರೀಗಳು ತವರೂರಲ್ಲಿಕನ್ನಡಶಾಲೆಪ್ರಾರಂಭಿಸಿದರು:**

ತಾವು ಬಾಲ್ಯದಲ್ಲಿ ಶಿಕ್ಷಣವನ್ನು ಪಡೆಯಲು ಅನುಭವಿಸಿದ ಕಷ್ಟ ಮುಂದಿನ ಮಕ್ಕಳಿಗೆ ಬರಬಾರದು ಎಂದು ಸೋನಾಳ ಗ್ರಾಮದಲ್ಲಿ ಕನ್ನಡ ಪ್ರಾಥಮಿಕ ಶಾಲೆಯನ್ನು ತೆರೆದರು. ಶ್ರೀ ನಿರಂಜನ ಗುರುಗಳು ಬಿದರಿ, ನೀಲಗಿರಿ, ಕಟ್ಟಿಗೆಯಿಂದ ಕೊಠಡಿಯನ್ನು ನಿರ್ಮಾಣ ಮಾಡಿ ಶಾಲೆಯನ್ನು ಪ್ರಾರಂಭಿಸಿದರು. ಕನ್ನಡ ಶಾಲೆ ಸೋನಾಳ ಗ್ರಾಮದಲ್ಲಿ ನಿರ್ಮಿಸಿಹೀಗೆ ಈ ನಾಡಿನ ಕನ್ನಡ ಉಳಿಯಲಿಕ್ಕೆ ಸಹಕಾರಿಯಾದರು. 1999-2000 ರಲ್ಲಿ ಶ್ರೀ ನಿರಂಜನ ಮಹಾಸ್ವಾಮಿಗಳವರು ಸೋನಾಳಗ್ರಾಮದಲ್ಲಿ ಕನ್ನಡ ಮಾಧ್ಯಮ ಶಾಲೆಯನ್ನು ಶ್ರೀ ಗುರುಕುಲ, ಶಿಕ್ಷಣ ಸಂಸ್ಥೆಯ ಅಂಗದಲ್ಲಿ ತೆರೆದರು ಕನ್ನಡ ಭಾಷೆಯ ಉಳುವಿಗೆ ಶ್ರಮ ವಹಿಸಿದವರಲ್ಲಿ ನಿರಂಜನ ಶ್ರೀಗಳು ಮತ್ತು ಈ ಭಾಗದಲ್ಲಿ ಹೊರಗಡೆ ಮರಾಠಿ ಫಲಕಹಾಕಿ ಒಳಗಡೆ ಕನ್ನಡ ಶಾಲೆ ನಡೆಸಿದ ಡಾ. ಚನ್ನಬಸವ ಪಟ್ಟದ್ದೇವರನ್ನು ಈ ಭಾಗದ ಜನ ಎಂದು ಮರೆಯಲಾರರು.

ಹೀಗೆ ಧರ್ಮಕ್ಕಾಗಿ, ಸಮಾಜಕ್ಕಾಗಿ, ಶಿಕ್ಷಣಕ್ಕಾಗಿ, ಸಮಾಜದ ಸ್ವಸ್ತಕ್ಕಾಗಿ ತಮ್ಮ ಜೀವನವನ್ನು ನಿರಂಜನ ಮಹಾಸ್ವಾಮಿಗಳು ಮೂಡಿಪಾಗಿ ಇಟ್ಟಿದರು. ಇವರು ಶಿವಧ್ಯಾನ ಮತ್ತು ಬಸವ ತತ್ವದ ಸಾರವನ್ನು ಜನರಿಗೆ ತಲುಪಿಸಿ ಈ ಭಾಗದ ಕಲ್ಯಾಣಕ್ಕಾಗಿ ದುಡಿದ ನಾಡಿನ ಶ್ರೇಷ್ಠ ಸಂತರಲ್ಲಿ ಒಬ್ಬರಾಗಿ ನಮ್ಮನ್ನು 21/12/2009 ರಂದು ಅಗಲಿದರು.

***ನಿರಂಜನ ಮಹಾಸ್ವಾಮಿ ಉತ್ತರಧಿಕಾರಿ ಶ್ರೀ ಚನ್ನವೀರ ಮಹಾಸ್ವಾಮಿಗಳ ಸೇವೆ ಅನನ್ಯ:**

ಹಾವೇರಿ ಜಿಲ್ಲೆಯ, ಮುರೋಳ ಗ್ರಾಮದಲ್ಲಿ ಫಕ್ಕಿರಯ್ಯ ಹಾಗೂ ಮಲ್ಲಮ್ಮ ದಂಪತಿಗಳ ಮಗನಾಗಿ ಚನ್ನವೀರ ಮಹಾಸ್ವಾಮಿಗಳ ಜನನ 15/01/1978ರಲ್ಲಿ ಆಯಿತು.ನಾಡಿನ ಹರಗುರು ಚರಮೂರ್ತಿಗಳ ಸಮ್ಮುಖದಲ್ಲಿ 13/05/2011ರಲ್ಲಿ ಮಠದ ಪಟ್ಟಾಧಿಪತಿಯಾಗಿ ಸಮಾಜ ಸೇವೆಗೆ ತಮ್ಮನ್ನು ಅರ್ಪಿಸಿಕೊಂಡರು. ಶ್ರೀಗಳು ಸದಾ ಹಸನ್ಮುಖಿಗಾಗಿ ತಮ್ಮ ಮಾಣಿಕ್ಯದಂತ ಮಾತುಗಳಿಂದ ನಾಡಿನ ಉದ್ದಅಗಲಕ್ಕೂ ತಮ್ಮ ಚಾಪು ಮೂಡಿಸಿದರು.ಅಷ್ಟೇ ಅಲ್ಲದೆ ಈ ಭಾಗದ ದಶಕದ ಕನಸಾದ ಕಮಲನಗರ ತಾಲೂಕ ಕೇಂದ್ರ ಮಾಡಲು ಇಲ್ಲಿನ ಹೋರಾಟಗಾರ ಸಹಾಯದಿಂದ ಅನೇಕ ಕಾನೂನು ಹೋರಾಟ ಮಾಡಿದ್ದರು.

ನಿರಂಜನ ಶ್ರೀಗಳು ಹಾಕಿ ಕೊಟ್ಟದಾರಿಯಲ್ಲಿ ಸಮಾಜ ಕಲ್ಯಾಣಕ್ಕಾಗಿ ಶ್ರಮಿಸುತ್ತಿದ್ದಾರೆ.

*********



ಮಠಾಧ್ಯಕ್ಷ
ಶ್ರೀ ಮ. ನಿ. ಪ್ರ. ಚನ್ನವೀರ ಮಹಾಸ್ವಾಮಿಗಳು.



ಸೋನಾಳ ಗ್ರಾಮದಲ್ಲಿ ಲಿಂ. ನಿರಂಜನ ಮಹಾ ಸ್ವಾಮಿಗಳ ಪುಣ್ಯ ಸ್ಮರಣೋತ್ಸವ ನಿಮಿತ್ತ 2025ನೇ ಸಾಲಿನಿಂದ ನೂತನ ರಥೋತ್ಸವ ಅದ್ದೂರಿ ಮೆರವಣಿಗೆ ನಡೆಯುವುದು. ಮಠದ ಪೀಠಾಧಿಪತಿ ಚನ್ನವೀರ ಮಹಾಸ್ವಾಮಿಗಳ ನೇತೃತ್ವದಲ್ಲಿ ವಿವಿಧ ಮಠಾಧೀಶರು ಸೇರಿ ರಥೋತ್ಸವಕ್ಕೆ ಚಾಲನೆ ನೀಡುವರು. 21 ಅಡಿ ಉದ್ದ ಮತ್ತು 12 ಫೀಟ್ ಅಗಲ ಹೊಂದಿರುವ ರಥವನ್ನು ನೋಡಲು ಒಂದು ಅದ್ಭುತ ವಾಗಿರುತ್ತದೆ. ಮೇರೇವಣಿಗೆ ಉದ್ದಕ್ಕೂ ಸಾವಿರಾರು ಜನ ಮಹಿಳೆಯರು, ಅಲಂಕಾರ ಮಾಡಿದ ಪೂರ್ಣಕುಂಭ (ಕಳಸ ) ಹೊತ್ತಿ ಮೇರೇವಣಿಗೆಯಲ್ಲಿ ಭಾಗವಹಿಸಿದರು. ಭಾಜಾ ಭಜಂತ್ರಿ , ಡೊಳ್ಳು ಕುಣಿತ ದಿಂದ ಇಡಿ ಗ್ರಾಮವು ಉತ್ಸವ ಉಲ್ಲಾಸದಿಂದ ಕುಣಿದು



ಸೋನಾಳ ಗ್ರಾಮದಲ್ಲಿ ಶ್ರೀ ನಿರಂಜನ ಮಹಾಸ್ವಾಮಿಗಳು ಪುಣ್ಯ ಸ್ಮರಣೋತ್ಸವ ಕಾರ್ಯಕ್ರಮ ನಿಮಿತ್ತ ಸಾಮೂಹಿಕ ಇಷ್ಟಲಿಂಗ ದೀಕ್ಷೆ ಪ್ರತಿ ವರ್ಷ ಸೋನಾಳ ಮಠದ ಮಠಾಧ್ಯಕ್ಷರಾದ ಶ್ರೀ ಚನ್ನವೀರ ಮಹಾಸ್ವಾಮಿಗಳು ನೇತೃತ್ವದಲ್ಲಿ ನಡೆಯುತ್ತದೆ. ಶರಣ ಶರಣೆಯರು ಲಿಂಗದೀಕ್ಷೆ ಶ್ರದ್ದೆ ಭಕ್ತಿಯಿಂದ ಸ್ವೀಕಾರಮಾಡಿ ಭಕ್ತಿ ಜೀವನಕ್ಕೆ ಮುನ್ನುಡಿ ಬರೆಯುವರು.






ಲಿಂ. ಮ.ನಿ.ಪ್ರ. ನಿರಂಜನ ಮಹಾಸ್ವಾಮಿಗಳು ಪುಣ್ಯ ಸ್ಮರಣೋತ್ಸವ ಕಾರ್ಯಕ್ರಮ ದಲ್ಲಿ ಶ್ರೀಗಳ ಭಾವಚಿತ್ರದ ಅದ್ದೂರಿ ಮೆರವಣಿಗೆ ನಡಿಯಿತು. ಪೂರ್ಣಕುಂಭ, ಭಾಜಾ ಭಜಂತ್ರಿ, ಭಜನಾ ಮೇಳಗಳೊಂದಿಗೆ ಗ್ರಾಮದ ಪ್ರಮುಖ ಬೀದಿಗಳಿಂದ ಶ್ರೀವೀರಕ್ತ ಮಠಕ್ಕೆ ಸಾಗಿಬರುವುದು,ಮೆರವಣಿಗೆಯಲ್ಲಿ ಸುಮಂಗಲೇಯರು ಅಲಂಕಾರಮಾಡಿದ ಕಳಸ ಹೊತ್ತಿ ಸಾಲಾಗಿ ಮೆರವಣಿಗೆಯಲ್ಲಿ ಪಾಲ್ಗೊಂಡಿರುವುದು

